ಒಂದೊಂದು ಕ್ಷೇತ್ರಕ್ಕೆ 100-200 ಅರ್ಜಿ ಇದ್ದಾಗ ನಾವು ಹೇಗೆ ಕೊಡುವುದು? ಈ ಸರ್ಕಾರ ಬಂದ ಮೇಲೆ ನನಗನ್ನಿಸುವ ಹಾಗೆ ಸಾಮಾನ್ಯವಾಗಿ ಹಣವಿಲ್ಲದೆ ಎಲ್ಲವನ್ನೂ ಸಾಲ ತೆಗೆದುಕೊಂಡು ಬಂದು ಕೊಡುತ್ತಿದೆ. ಅದಕ್ಕೂ ಸಾಲ ತೆಗೆದುಕೊಳ್ಳಿ. ಹರಿಜನ-ಗಿರಿಜನರಿಗೆ ಸಾಲ ಮಾಡುವುದು ತಪ್ಪೇನೂ ಅಲ್ಲ. ನಬಾರ್ಡ್, ಮತ್ತೊಂದೆಡೆಯಿಂದ ತೆಗೆದುಕೊಂಡು ಬನ್ನಿ. ಹುಡ್ಕೋ ಅಂತೂ ಕರ್ನಾಟಕಕ್ಕೆ ಬಾಗಿಲನ್ನೇ ತೆರೆದಿದೆ. ಅಲ್ಲಿಂದ ಸಾಲ ತೆಗೆದುಕೊಂಡು ಬನ್ನಿ. ಅದು 10-20 ವರ್ಷ ಮಾಡುವ ಯೋಜನೆಯಲ್ಲ. ಒಂದೆರಡು ವರ್ಷಗಳಲ್ಲಿ ಎಲ್ಲವನ್ನೂ ಮುಗಿಸಬೇಕು. ಒಂದೊಂದು ಕ್ಷೇತ್ರಕ್ಕೆ 100-200 ಅರ್ಜಿ ಇರುವುದರಿಂದ, ಅದನ್ನು 4-6 ವರ್ಷ ಮಾಡುವುದಕ್ಕಿಂತ ಒಂದೇ ಸಾರಿ ಮಾಡಲು ಬೇಕಾದ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :— ಗಂಗಾ ಕಲ್ಯಾಣ ಯೋಜನೆಯ ಬಗ್ಗೆ ಶ್ರೀ ಎಸ್.ಎಸ್. ಪಾಟೀಲ್‌ರವರು ಒಂದು ಪ್ರಪೋಸಲ್ ಕೊಟ್ಟರು. ಅದಕ್ಕೆ ತಾವು ಒಂದು ಕ್ಷೇತ್ರಕ್ಕೆ 20 ಬೋರ್‌ವೆಲ್‌ಗಳನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಕೇಳಿದಿರಿ. ಕಳೆದ ಬಾರಿಗಿಂತ ಈ ಸಾರಿ ಹೆಚ್ಚು ಮಾಡಿ, ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಪವರ್ ಕನೆಕ್ಷನ್ ಕೊಡುವ ಬಗ್ಗೆ ಡಿಪಾಸಿಟ್ ಅನ್ನು ಬೆನಿಫಿಷಿಯರ್ಸ್ ಕಟ್ಟಬೇಕೊ ಅಥವಾ ಇಲಾಖೆಯವರು ಕಟ್ಟುತ್ತಾರೆಯೋ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಇದುವರೆಗೆ ಏನಿತ್ತೆಂದರೆ, ಪವರ್ ಕನೆಕ್ಷನ್‌ಗೆ ಹಣವನ್ನು ಫಲಾನುಭವಿಗಳೇ ಕಟ್ಟಬೇಕಾಗಿತ್ತು. ಅದರಿಂದಾಗಿ, ಬಡವರು ಹಣವನ್ನು ಕಟ್ಟುವುದಕ್ಕಾಗುತ್ತಿರಲಿಲ್ಲ. ಆದುದರಿಂದ, ನಮ್ಮ ನಿಗಮದಿಂದಲೇ ಪೂರಾ ಹಣವನ್ನು ಕಟ್ಟಬೇಕೆಂದು ತೀರ್ಮಾನಿಸಿದ್ದೇವೆ. ಈಗ ಯೂನಿಟ್ ಕಾಸ್ಟ್ 65 ಸಾವಿರ ರೂಪಾಯಿಗಳಿದ್ದು, ಒಂದು ವೇಳೆ ಅದಕ್ಕಿಂತಲೂ ಜಾಸ್ತಿಯಾಗುವುದಾದರೆ, ಆ ಹೆಚ್ಚಾದ ಹಣವನ್ನು ಸಾಲವನ್ನಾಗಿ ಪರಿವರ್ತಿಸಿ, ಪೂರಾ ಹಣವನ್ನು ನಾವೇ ಪ್ರಾರಂಭದಲ್ಲಿ ಕಟ್ಟಿ ಪೂರ್ಣ ಮಾಡುವ ಕೆಲಸ ಮಾಡುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಕಳೆದ ಬಾರಿ ನಾನೊಂದು ವಿಷಯ ಪ್ರಸ್ತಾಪಿಸಿದ್ದೆ. ತಾಲ್ಲೂಕಿಗೊಂದು ಘಟಕ ಮಾಡಿದ್ದು, ಅದು ನಮಗಿನ್ನೂ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಹೋಗಿದೆ. ಕಳುಹಿಸಿಕೊಡುತ್ತೇನೆ.

3. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

1.10 ಪಿ.ಎಂ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಉಪಾಧ್ಯಕ್ಷರೆ, ನಾನು ತೋಟಗಾರಿಕೆ ಹಾಗೂ ಸಹಕಾರ ಇಲಾಖೆಗಳ ಮೇಲೆ ಮಾತನಾಡಬಯಸುತ್ತೇನೆ. ಮೊದಲನೇಯದಾಗಿ, ನಮ್ಮ ತೋಟಗಾರಿಕೆ ಸಚಿವವರು ಇದೀಗ ತಾನೇ ಸದನಕ್ಕೆ ಬರುತ್ತಿದ್ದಾರೆ ಅವರ ಇಲಾಖೆಗೆ ಸಂಬಂಧಪಟ್ಟಂತೆ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಾನು ದಿನಾಂಕ: 26ನೇ ತಾರೀಖಿನ ದಿನ ಒಂದು ಪ್ರಶ್ನೆ ಕೇಳಿದ್ದೆ ಅದು 27ಕ್ಕೆ ಉತ್ತರ ಬರಬೇಕಾಗಿತ್ತು, ಆದರೆ ಉತ್ತರ ಇನ್ನು ಬಂದಿಲ್ಲ. 10-20 ಎಕರೆ ವಿಸ್ತೀರ್ಣವುಳ್ಳ ಮುಂಡರಗಗಿ ತೋಟಗಾರಿಕೆ ಫಾರ್ಮ್ ತುಂಗಭದ್ರ ನದಿಯ ಮಗ್ಗುಲಲ್ಲಿ ಇದೆ, ನೀವು ತರುವಂಥ ವ್ಯವಸ್ಥೆಯಿದೆ ದುಡ್ಡೂ ಕೂಡ ಕೊಟ್ಟಿದ್ದೇವೆ ಆದರೆ ಇದನ್ನು ಮಾಡಿ ಮುಗಿಸಲಿಕ್ಕೆ ಇವರಿಗೆ ಇರುವ ತೊಂದರೆಯಾದರೂ ಏನು? ನನ್ನ ಪ್ರಶ್ನೆ ಈ ರೀತಿ ಇದೆ.

(1) ಮುಂಡರಗಿ ಸರ್ಕಾರಿ ಬೆಲವಾಡಿ ತೋಟಗಾರಿಕೆ ಫಾರ್ಮ್‌ನ ವಿಸ್ತೀರ್ಣ ಎಷ್ಟು? ಸದರಿ ತೋಟದಲ್ಲಿ ಯಾವ್ಯಾವ ತರಹದ ಗಿಡಗಳು ಇವೆ? ಇವುಗಳು ನೀರು ಇಲ್ಲದೇ ಒಣಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(2) ಸದರಿ ಫಾರ್ಮ್‌ಗೆ ತುಂಗಭದ್ರ ನದಿಯಿಂದ ನೀರು ತರುವ ಯೋಜನೆ ಎಷ್ಟು ವರ್ಷಗಳಿಂದ ಇದೆ? ಯಾವ್ಯಾವ ಹಂತದಲ್ಲಿದೆ?

(3) ಸದರಿ ಯೋಜನೆಗೆ ಎಷ್ಟು ಅಂದಾಜು ಮಾಡಲಾಗಿತ್ತು? ಈಗ ಎಷ್ಟು ಆಗಿದೆ.

(4) ಇಷ್ಟು ದೀರ್ಘಕಾಲಗಳ ಕಾಲ ವಿಳಂಬವಾಗಲು ಏನು ಕಾರಣ? ಇದಕ್ಕೆ ಕಾರಣರಾದವರ ವಿವರ ನೀಡುವುದು ಹಾಗೂ ಅವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?

(5) ಸದರಿ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಇಷ್ಟನ್ನು ನಾನು ಕೇಳಿದ್ದೆ. ರಾಜ್ಯದಲ್ಲಿ ಏನು ನಡೆಯುತ್ತದೆ ಎಂಬುದನ್ನು ನಾನು ಈಗ ಹೇಳಬಯಸುತ್ತೇನೆ.

ಶ್ರೀ ಲಮಾಣಿ ರುದ್ರಪ್ಪ ಮಾನಪ್ಪ :— ನೀವು ಮಂತ್ರಿಗಳಾಗಿದ್ದೀರಿ. ನೀವು ಏಕೆ ಇದನ್ನು ಮಾಡಲಿಲ್ಲ?

ಶ್ರೀ ಎಸ್.ಎಸ್. ಪಾಟೀಲ್ :— ಅದನ್ನು ನಾನು ಹೇಳುತ್ತೇನೆ, ನಾನು ಯಾವ ಸರ್ಕಾರವನ್ನು ಬಯ್ಯುತ್ತಿಲ್ಲ. ಇದು ಒಬ್ಬರಿಗೆ, ಸಂಬಂಧಪಟ್ಟಿದ್ದಲ್ಲ ಸರ್ಕಾರ ಬದಲಾವಣೆಯಾದರೆ ಏನಂತೆ ಅಧಿಕಾರಿಗಳು ಇರುತ್ತಾರಲ್ಲವೇ ಅವರನ್ನು ನಾವು ಕೇಳಬೇಕಾಗುತ್ತದೆ.

ಸರ್ಕಾರದವರು ತೋಟಗಾರಿಕಾ ಫಾರ್ಮ್‌ಗಳಿಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಾರೆ. ತುಂಗಭದ್ರದಿಂದ ನೀರಾವರಿಯನ್ನು ತರಬೇಕೆಂದು ಜಿಲ್ಲಾಪಂಚಾಯಿತಿಯಿಂದ

ದುಡ್ಡು ಉಳಿಸಿ ಅಂದಾಜು ಮಾಡಿ ಕಳುಹಿಸಿದರೆ ಅದು ಮುಖ್ಯ ಅಭಿಯಂತರರ ಕಛೇರಿಗೆ ಹೋಗಬೇಕಂತೆ, ಸಣ್ಣ ನೀರಾವರಿ ಇಲಾಖೆಯ ಮಂತ್ರಿಗಳು ಇಲ್ಲ, ಅವರ ಕಛೇರಿ ಯಾವ ರೀತಿ ನಡೆಯುತ್ತದೆಂಬುದನ್ನು ಹೇಳುತ್ತೇನೆ. ಮುಖ್ಯ ಅಭಿಯಂತರರವರ ಕಛೇರಿಗೆ ಅದು ಹೋದರೆ ಮಾರ್ಚ್ ಅಂತ್ಯದವರೆಗೆ ಹಾಗೆಯೇ ಇಟ್ಟುಕೊಳ್ಳುತ್ತಾರೆ ನಂತರದಲ್ಲಿ ಅದಕ್ಕೆ ಏನಾದರೂ ಡೀಟೆಲ್ಸ್ ಕೇಳಿ ವಾಪಸ್ ಕಳುಹಿಸಿಬಿಡುತ್ತಾರೆ ಹೀಗಾಗಿ ಅದು 8 ಲಕ್ಷ ರೂಪಾಯಿ ಅಂದಾಜು ಇದ್ದದ್ದು 70 ಲಕ್ಷ ರೂಪಾಯಿವರೆಗೆ ಹೋಗಿದೆ. ಈಗಾಗಲೇ ಮಾರ್ಚ್ ಹೋಯಿತು ಪುನ: ರೇಟ್ ಜಾಸ್ತಿ ಮಾಡುತ್ತಾರೆ, ನಾನು ಈಗಾಗಲೇ ಹೇಳಿದ ಹಾಗೆ ಸರ್ಕಾರ ಮಾಡುವ ಕೆಲಸವಲ್ಲ ಇದು ಅಧಿಕಾರಿಗಳು ಮಾಡುವ ಕೆಲಸ. ಯಾವುದೇ ಸರ್ಕಾರ ಹಾಗೂ ಮಂತ್ರಿಗಳನ್ನು ಟೀಕೆ ಮಾಡುವುದಕ್ಕೆ ನಾನು ನಿಂತಿಲ್ಲ. ಅಧಿಕಾರಿಗಳಿಂದ ನಡೆಯುವಂಥ ವ್ಯವಸ್ಥೆಯನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದಕ್ಕಾಗಿ ನಾನು ಬಸವಣ್ಣನವರ ವಚನದ ಬಗ್ಗೆ ಕೊನೆಗೆ ಹೇಳುವುದರಲ್ಲಿ ಅರ್ಥ ಬರುತ್ತದೆ. ಏಕೆಂದರೆ, ಆ ಅಧಿಕಾರಿಯನ್ನು ಭೇಟಿಯಾಗಿ ದುಡ್ಡು ಕೊಟ್ಟು ಬಂದರೆ ಸರಿ ಇಲ್ಲರೆಂದರೆ ಆ ಕಡತ ವಾಪಸ್ ಬರುತ್ತದೆ. ಮಂತ್ರಿಗಳಿಗೆ ಹಾಗೂ ಇತರರಿಗೂ ತಿಳಿಯತಕ್ಕಂಥ ವ್ಯವಸ್ಥೆಯಲ್ಲ ಇದು ನಡೆಯತಕ್ಕಂಥ ವ್ಯವಸ್ಥೆ. ಹೀಗಾಗಿ ನಾನು ನಿಮಗೆ ಸುಮಾರು 10 ಸಲ ಹೇಳಿದ್ದರೂ ಈ ಕಡೆಗೆ ನಾವು ಗಮನಹರಿಸಲೇ ಇಲ್ಲ. ಆದ್ದರಿಂದ, ಈ ಅಧಿವೇಶನ ಮುಗಿಯುವುದರೊಳಗಾಗಿ ಆ ಅಧಿಕಾರಿಯ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡುವಂತೆ ತಾವು ಸಂಬಂಧಪಟ್ಟ ಮಂತ್ರಿಗಳಿಗೆ ಆದೇಶಿಸಬೇಕು. ಇನ್ನು ಹಣಕಾಸಿನ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ, ಈ ಶ್ವೇತಪತ್ರದ ಪ್ರಕಾರ ನಮ್ಮ ರಾಜ್ಯದ ಸಾಲ 23,884 ಕೋಟಿ ರೂಪಾಯಿ ಎಂದು ಇಲ್ಲಿ ಹೇಳಿದ್ದಾರೆ, ಮೊನ್ನೆ ನಮ್ಮ ಜಗದೀಶ್ ಶೆಟ್ಟರ್‌ರವರು ಕೇಳಿದ್ದಕ್ಕೆ 18,000 ಸಾವಿರ ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ನಿಜ? ಇದರ ಜೊತೆಗೆ ಮೊನ್ನೆ 26 ಕೋಟಿ ಅಥವಾ 12 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದೀರಿ, ಅಂದರೆ ಒಟ್ಟಾರೆಯಾಗಿ 40 ಕೋಟಿ ರೂಪಾಯಿ ಸಾಲ ಈ ರಾಜ್ಯದ ಮೇಲೆ ಇದೆ. ಇದಕ್ಕೆ ಬಡ್ಡಿ ಎಷ್ಟು? ನಮ್ಮ ಬಜೆಟ್ 8000 ಕೋಟಿ ಎಂದು ಮಾಡಿದ್ದೇವೆ, ಅಂದರೆ ಅದು ಎಲ್ಲಾ ಬಡ್ಡಿಗೆ ಹೋದರೆ, ಹಾಗಾದರೆ ಈ ರಾಜ್ಯ ನಡೆಸುವುದು ಹೇಗೆ? ಇದಕ್ಕೇನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ? ನೀವು ಇಲ್ಲಿ ಕೊಟ್ಟಿರುವ ಯೋಜನೆ ಇದು ಏನೂ ಆಗದಂಥ ಯೋಜನೆ, ಇದೇ ರೀತಿ ಇವರು ಇನ್ನು 2-3 ವರ್ಷ ಸರ್ಕಾರ ನಡೆಸಿದರೆ ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗದೆ ಖಂಡಿತರಾಗಿ ಈ ರಾಜ್ಯ ಕತ್ತಲಲ್ಲಿ ಮುಳುಗುತ್ತದೆ. ಈ ರಾಜ್ಯದ ಜನ ಹಾಗೂ ರೈತ ಯಾವ ಅಭಿವೃದ್ಧಿಯಿಲ್ಲದೆ ವಂಚಿತರಾಗುತ್ತಾರೆ. ಆದ್ದರಿಂದ, ಇನ್ನು ಮುಂದೆ ದಯಮಾಡಿ ಸಾಲ ತರುವುದನ್ನು ಬಂದ್ ಮಾಡಿ. ನಾನು ಈಗಾಗಲೇ ಹೇಳಿದಂತೆ ಎಲ್ಲದಕ್ಕೂ ಕಟ್

ಮಾಡಿ, ಇದೇನು ನೀವೇ ಮಾಡಿದ ಸಾಲ ಎಂದು ನಾನು ಹೇಳುತ್ತಿಲ್ಲ. ಹಿಂದಿನಿಂದಲೂ ಸಾಲ ಮಾಡಿಕೊಂಡು ಬಂದಿರುವುದು ಇದೆ. ಈ ರೀತಿ ಸಾಲ ಮಾಡಿಕೊಂಡು ಎಲ್ಲಿಗೆ ಹೋಗಿದೆ ಎಂದರೆ ತುಂಬಾ ಅಪಾಯಕರವಾದ ಸ್ಥಿತಿಗೆ ತಲುಪಿದ್ದೇವೆ. ನಾವು ಬಂದಾಗ ನಾವೊಂದು 20 ಸಾವಿರ ಕೋಟಿ ಸಾಲ ಮಾಡಿಕೊಂಡು ಹೋಗುವುದು, ಮತ್ತೊಬ್ಬರು ಬಂದಾಗ ಮತ್ತಷ್ಟು ಸಾವಿರ ಕೋಟಿ ಸಾಲ ಮಾಡುವುದು, ಹೀಗೆ ಈ ರಾಜ್ಯದ ಪರಿಸ್ಥಿತಿ ನಡೆದಿದೆ.

ಶ್ರೀ ಬಿ.ಆರ್. ಯಾವಗಲ್ :— ಈ ಸಾಲ ತರುವ ಕ್ರಮ ಏನಿದೆ ಇದು ಹಿಂದೆ ನೀವು ಇದ್ದ ಜನತಾದಳ ಸರ್ಕಾರ ಇದ್ದಾಗಲೇ ಪ್ರಾರಂಭವಾಗಿರುವುದು.

ಶ್ರೀ ಎಸ್.ಎಸ್. ಪಾಟೀಲ್ :— ನಾನು ಎಲ್ಲರೂ ಸೇರಿ ಮಾಡಿರುವುದು ಎಂದು ಹೇಳಿದ್ದು, ಸ್ವಾತಂತ್ರ ಬಂದ ಮೇಲೆ ದೇಶದಲ್ಲಿ ನೀವು ಮಾಡಿಲ್ಲವೇ? ಈಗ ನೆನಪಾಗಿದೆ.

ಶ್ರೀ ಯು.ಆರ್. ಸಭಾಪತಿ :— ನೀವು ಇರುವಾಗ ಸಾಲ ಮಾಡಿರಲಿಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ :— ಈಗ ನನ್ನನ್ನು ಕೇಳಿದವರೇ ಸಾಲ ಮಾಡಿದ್ದಾರೆ, ಅವರೇ ಆಗ ಆ ಸರ್ಕಾರದಲ್ಲಿ ಇದ್ದರು.

ಶ್ರೀ ಬಿ.ಆರ್. ಯಾವಗಲ್ :— ಸರ್ಕಾರದೊಳಗೆ ತಾವು ಇದ್ದದ್ದು. ತಾವು ಅದನ್ನು ಪಡೆದುಕೊಂಡಿದ್ದು..

ಶ್ರೀ ಎಸ್.ಎಸ್. ಪಾಟೀಲ್ :—ರಾಷ್ಟ್ರದ್ದು ಹಾಗೂ ರಾಜ್ಯದ ಪರಿಸ್ಥಿತಿ ಹಾಗೆಯೇ ಇದೆ. ಇದಕ್ಕೆ ನಾವು ಏನಾದರೊಂದು ಕಠೋರವಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಮುಂದೆ ಆಡಳಿತ ನಡೆಸತಕ್ಕಂಥ ಜನ ಖಂಡಿತವಾಗಿ ನಮ್ಮನ್ನು ಶಾಪಿಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಉಪಾಧ್ಯಕ್ಷರೆ, ಈಗ ಮಾಡಿರುವ ಸಾಲಗಳು ಹೆಚ್ಚಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕಾಗಿಯೇ ಮಾಡಿರುವುದು. ಕುಡಿಯುವ ನೀರು ಇದರಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳು ಸೇರಿದಂತೆ, ರಸ್ತೆ, ವಿದ್ಯುತ್, ನೀರಾವರಿ, ಇಂಥ ಪ್ರಮುಖರಾದ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಕೊಟ್ಟಿರುವುದು, ನಾವೇನೂ ಮನೆ ಕಟ್ಟುವುದಕ್ಕೆ ಕೊಟ್ಟಿಲ್ಲ. ಇತರೆ ಅಭಿವೃದ್ಧಿಗೇನು ಉಪಯೋಗಿಸಿಲ್ಲ. ಜನರ ಅಪೇಕ್ಷೆಯಂತೆ ಕುಡಿಯುವ ನೀರು, ವಿದ್ಯುತ್, ನೀರಾವರಿ, ರಸ್ತೆ, ಇದಕ್ಕೆ ವಿಶೇಷವಾದ ಬೇಡಿಕೆಯಿರುವುದರಿಂದ ಇವುಗಳನ್ನು ಪೂರೈಸಬೇಕಾದರೆ ತಮ್ಮ ಹತ್ತಿರ ಹಣ ಇಲ್ಲದಿದ್ದರೆ ಸಾಲವನ್ನಾದರೂ ಮಾಡಬೇಕಾಗುತ್ತದೆ. ಸಾಲ ಕಡಿಮೆ ಮಾಡಬೇಕು ಎನ್ನುವುದಾದರೆ ಯಾವ ಕ್ಷೇತ್ರದಲ್ಲಿ ಕಡಿಮೆ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವ ಸಲಹೆ ರೂಪದಲ್ಲಿ ಕೊಟ್ಟರೆ ಸರ್ಕಾರ ಕೂಡ ಅದರ ಬಗ್ಗೆ ಗಂಬೀರವಾಗಿ ಯೋಚಿಸುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಅದಕ್ಕಾಗಿ ನೀವು ನೇಮಿಸಿರುವ ಆಯೋಗದವರು ಏನು ಮಾಡಬೇಕು ಎಂಬುದನ್ನು ಈಗಾಗಲೇ ಹೇಳಿರುವುದರಿಂದ ಪುನ: ನಾನು ಹೇಳಬೇಕಾದ ಆವಶ್ಯಕತೆ ಇಲ್ಲ. ಬಹುಶ: ತಾವು ವಿದೇಶದಿಂದ ಇದೀಗ ತಾನೇ ಬಂದಿರುವುದರಿಂದ ಇದನ್ನು ನೋಡಲಿಲ್ಲವೆಂದು ಕಾಣುತ್ತದೆ. ಯಾರ ಉದ್ದೇಶಕ್ಕೆ ಸಾಲ ತಂದಿರಿ ಅದು ಆ ಉದ್ದೇಶಕ್ಕೆ ಖರ್ಚು ಆಗಿಲ್ಲ. ಹಿಂದೆ ಪಿಯರ್‌ಲೆಸ್ ಎನ್ನುವ ಕಂಪನಿಯಿಂದ 250 ಕೋಟಿ ರೂಪಾಯಿ ತಂದಿದ್ದಾಗ ಅದನ್ನು ನೌಕರರ ಸಂಬಳಕ್ಕಾಗಿಯೇ ಕೊಟ್ಟಿದ್ದೀರಿ ಅದನ್ನೇ ಇವರು ಅದರಲ್ಲಿ ಪ್ರಾಮಾಣಿಕವಾಗಿ ಹೇಳಿದ್ದಾರೆ. ಬೇಕಾದರೆ ತಾವು ಇದನ್ನು ಓದಿ ನೋಡಿ. ಇದು ಯಾರ ಕಾಲಕ್ಕಾದರೂ ಆಗಿರಬಹುದು. ಇದಕ್ಕೆ ನಾನು ಏನು ಹೇಳುತ್ತೇನೆಂದರೆ, ಇದಕ್ಕೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಕೈಗಾರಿಕೆಗಳು ಇದರಲ್ಲಿ ಎಷ್ಟು ಹಾನಿಗಳಿಂದ ಕೂಡಿದೆ, ಏಕೆ ನಾವು ಅವುಗಳನ್ನು ಉಳಿಸಬೇಕು? ಆದರಿಂದ ಏನು ಕೆಲಸ ಇದೆ? ಬಡ ಬೋರೆಗೌಡ ಕೊಟ್ಟಂಥ ತೆರಿಗೆಯನ್ನು ಬೇರೆ ಯಾರ ಮೇಲೆ ಚೆಲ್ಲುವುದು ಎಂದರೆ ಏನರ್ಥ? ಯಾವ ರಸ್ತೆ ಮಾಡುವುದಕ್ಕೆ ನಮ್ಮಲ್ಲಿ ದುಡ್ಡು ಇದೆ? ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿದ ಹಾಗೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು, 30 ಭಾಗದಷ್ಟು ಕಟ್ ನೀವು ಯಾವ ರೀತಿ ಮಾಡುತ್ತಿರೋ ಒಟ್ಟಿನಲ್ಲಿ ಅದನ್ನು ಮಾಡಬೇಕು. ಇದಕ್ಕಾಗಿ ನೀವು ಕಠಿಣವಾದ ನಿಲುವು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ನಾವೆಲ್ಲರೂ ತಮಗೆ ಬೆಂಬಲ ಕೊಡುತ್ತೇವೆ. ಇನ್ನು ಕೊನೆಯದಾಗಿ ಸಹಕಾರ ಇಲಾಖೆಗೆ ಬರುತ್ತೇನೆ. ನಿನ್ನೆ ತಾನೇ ಬಹಳ ಚರ್ಚೆಯಾಯಿತು. ಮಾನ್ಯ ಉಪಾಧ್ಯಕ್ಷರೆ, ತಾವೂ ಕೂಡ ಸಹಕಾರಿಗಳೇ. ಈ ಸಹಕಾರ ಇಲಾಖೆ ಎಂದರೆ ಮನುಷ್ಯನ ದಿನನಿತ್ಯದಲ್ಲಿ ಇದು ಹಾಸುಕೊಕ್ಕಾಗಿದೆ. ಇದು ಎಲ್ಲಾ ಇಲಾಖೆಗಳಿಗೂ ಪಸರಿಸಿದೆ. ಇಲ್ಲಿರುವ ಎಲ್ಲಾ ಮಂತ್ರಿಗಳ ಕಡೆಯೂ ಸಹಕಾರ ಇಲಾಖೆ ಇದೆ. ರಾಜ್ಯದಲ್ಲಿ 28,000 ಸಹಕಾರಿ ಸಂಘಗಳಿದ್ದು 5 ಸಾವಿರ ಸಹಕಾರ ಸಂಘಗಳು ಮಾತ್ರ ಹಾನಿಯಲ್ಲಿ ಇದ್ದು ಉಳಿದ ೨೩ ಸಾವಿರ ಸಹಕಾರ ಸಂಘಗಳು ಬಹಳ ಚೆನ್ನಾಗಿ ಕೆಲಸ ನಿರ್ವಹಿಸುತ್ತಿವೆ. ಇಷ್ಟೊಂದು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಸಹ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದರೆ ಯಾರು ಒಪ್ಪುತ್ತಾರೆ? ಇವತ್ತಿನ ದಿವಸ ಸರ್ಕಾರದ ಹಸ್ತಕ್ಷೇಪದಿಂದ ಸ,ಹಕಾರ ಸಂಘಗಳು ಕೆಡುತ್ತಿವೆ. ನಮ್ಮ ಕಾಲದಲ್ಲಿಯೂ ಕೂಡ ಇತ್ತು. ಇಲ್ಲರೆಂದು ನಾನು ಹೇಳುವುದಿಲ್ಲ. ಹಿಂದಿನ ಕಾಲದಲ್ಲಿ ಸ್ವಸಹಾಯ ಗುಂಪುಗಳನ್ನು ಮಾಡಿಕೊಂಡು ಇದರಲ್ಲಿ ಸಮಾನ ಮನಸ್ಕರು ಸೇರಿಕೊಂಡು ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿ, ಇವುಗಳನ್ನು ಅಭಿವೃದ್ಧಿಪಡಿಸಬೇಕೆಂಬ ದೃಷ್ಟಿಯನ್ನು ಇಟ್ಟುಕೊಂಡಿದ್ದರು. ಹಾಗೆಯೇ ಸಹಕಾರ ಸಂಘಗಳಿಗೆ ನೌಕರರನ್ನು ನೇಮಕ ಮಾಡಿಕೊಳ್ಳುವುದು ಮತ್ತು ಲಾಭ ಹೆಚ್ಚು ಬಂದಾಗ ಹೆಚ್ಚು ಹಣ ಕೊಡುತ್ತಿದ್ದರು ಮತ್ತು ಕಡಿಮೆ ಲಾಭ ಬಂದಾಗ ಕಡಿಮೆ ಹಣ ಕೊಡತಕ್ಕಂಥ ವ್ಯವಸ್ಥೆ

ಇತ್ತು. ಈಗ ಈ ಎಲ್ಲಾ ಪದ್ಧತಿ ಜಾರಿಯಲ್ಲಿ ಇಲ್ಲ. ಸರ್ಕಾರದ ಹಸ್ತಕ್ಷೇಪದಿಂದ ಮುಂದೆ ಇದಕ್ಕೂ ಕೂಡ ಕಾಯಿದೆ ತರಲಾಯಿತು. ಆ ನಂತರ ಇದು ಚೆನ್ನಾಗಿ ನಡೆಯುತ್ತಿದೆ ಎಂದು ತಿಳಿದು ಬಂದಾಗ ಇದಕ್ಕೆ ರಾಜಕೀಯ ಲೇಪನ ಹಚ್ಚಲಾಯಿತು. ಸಹಕಾರ ಸಂಘಗಳ ಕಾಯಿದೆಗೆ ಆಗಾಗ ತಿದ್ದುಪಡಿ ಮಾಡುತ್ತಾ ಬಂದಿರುವುದರಿಂದ ಇವತ್ತಿನ ಪರಿಸ್ಥಿತಿಗೆ ಸಹಕಾರ ಸಂಘಗಳು ಬಂದಿವೆ. ಬಹುಶ: ಸಹಕಾರ ಸಂಘಗಳು ಈಗ ಯಾವ ರೀತಿ ಇದೆ ಎಂದರೆ, ಸಹಕಾರ ಇಲಾಖೆ ಇವತ್ತಿನ ದಿವಸ ಸರ್ಕಾರಿ ಇಲಾಖೆ ಆಗುವಂಥ ಮಟ್ಟಿಗೆ ಬಂದಿದೆ. ಹಿರಿಯ ಸಹಕಾರಿಯಾಗಿರತಕ್ಕಂಥ ಸನ್ಮಾನ್ಯ ಹನುಮೇಗೌಡರು ತಮ್ಮ ವರದಿಯಲ್ಲಿ ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ೧೯೭೬ರ ತಿದ್ದುಪಡಿಯಿಂದ ಸಹಕಾರ ಕ್ಷೇತ್ರದಲ್ಲಿ ಭಾರಿ ಅವ್ಯವಹಾರ ಜಾಸ್ತಿ ಆಯಿತೆಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ತಮಗೆ ಯಾರೋ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ತಾವು ಅಧ್ಯಕ್ಷರಾಗಿರುವುದರಿಂದ ಇದನ್ನು ಮತ್ತೊಮ್ಮೆ ತರಿಸಿಕೊಂಡು ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಎಲ್ಲಿಯವರೆಗೆ ಇವುಗಳನ್ನು ಸ್ವತಂತ್ರವಾಗಿ ನಡೆಯುವುದಕ್ಕೆ ಬಿಡುವುದಿಲ್ಲವೋ, ಅಲ್ಲಿಯವರೆಗೆ ಇವು ಸುರಕ್ಷಿತವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಇವುಗಳನ್ನು ಸ್ವತಂತ್ರವಾಗಿ ನಡೆಯಬೇಕೆಂಬ ಉದ್ದೇಶದಿಂದ ನಾವು ಸಹಕಾರಿ ಸೌಹಾರ್ದ ಕಾಯಿದೆಯನ್ನು ತಂದೆವು. ಈ ನಿಯಮಾವಳಿಯನ್ನು ಆಚರಣೆಗೆ ತರುವುದಕ್ಕೆ ಸರ್ಕಾರಕ್ಕೆ ಆಸಕ್ತಿ ಇಲ್ಲವೆಂದು ಕಾಣುತ್ತದೆ. ಹೋದ ವರ್ಷ ಅಲ್ಲಿ ಚುನಾವಣೆಗಳು ಆಗಿವೆ. ಚನಾವಣೆ ಆದಮೇಲೆಯೂ ಕೂಡ ಅವರು ಬರುವುದಕ್ಕೆ ಹಿಂದು-ಮುಂದು ನೋಡುತ್ತಿದ್ದಾರೆ. ಏತಕ್ಕಾಗಿ ಹಿಂದು-ಮುಂದು ನೋಡುತ್ತಿದ್ದಾರೆಂದರೆ, ಇವರು ಬಂದರೆ ಪುನ: ಚುನಾವಣೆ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಸೆಕ್ಷನ್ ೭೦ರ ಪ್ರಕಾರ ಏನಾದರೂ ತೊಂದರೆಗಳು ಆಗಿದ್ದರೆ, ಅದನ್ನು ನಿವಾರಣೆ ಮಾಡುವುದಕ್ಕೆ ಒಂದು ಕಲಂ ಇದೆ. ಸದರಿ ಕಲಂ ಪ್ರಕಾರ ಈಗ ಚುನಾಯಿತರಾದವರು ೫ ವರ್ಷಗಳವರೆಗೆ ಮುಂದುವರಿಯಬಹುದೆಂದು ಆದೇಶ ಹೊರಡಿಸಬಹುದು. ಮೊನ್ನೆ ದಿವಸ ಡಾ: ಕುರಿಯನ್‌ರವರು ಬಂದಾಗ ಈ ವಿಷಯದ ಬಗ್ಗೆ ನಾನು ಹೇಳಿದ್ದೇನೆ. ತೀವ್ರವಾಗಿ ಈ ಆದೇಶವನ್ನು ಹೊರಡಿಸಿದರೆ ಖಂಡಿತವಾಗಿಯೂ ಇದರಲ್ಲಿ ಎಲ್ಲರೂ ಮುಂದೆ ಬರುತ್ತಾರೆ. ಈ ಒಂದು ಕಾರಣಗಳಿಂದ ಆದೇಶವನ್ನು ಹೊರಡಿಸಬೇಕೆಂದು ಹೇಳಿದ್ದೇನೆ. ಆದರೆ ಇದುವರೆಗೂ ಆದೇಶವನ್ನು ಹೊರಡಿಸಿಲ್ಲ. ಈ ಆದೇಶ ಹೊರಡಿಸಿದರೆ ಎಲ್ಲರೂ ಇದರ ಅಡಿಯಲ್ಲಿ ಬರುತ್ತಾರೆ. ಆಗ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದಕ್ಕೆ ಆಗುತ್ತದೆ. ಹಾಗೆಯೇ ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ಸರ್ಕಾರದ ಹಣ ಇರುವುದಿಲ್ಲ. ಆದ್ದರಿಂದ ಈ ಒಂದು ಹಿನ್ನಲೆಯಲ್ಲಿ ಸೌಹಾರ್ದ ಸಹಕಾರ ಕಾಯಿದೆಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸಹಕಾರ ಉದ್ದಿಮೆಗಳು ಸಾಕಷ್ಟು ಇವೆ. ಈಗ ಉದ್ದಿಮೆ ಬಗ್ಗೆ ಮಾತನಾಡಬೇಕೆಂದು ಇರುವಾಗ ಮಾನ್ಯ

ಕೈಗಾರಿಕಾ ಸಚಿವರು ಹೊರಗಡೆ ಹೋಗಿದ್ದಾರೆ. ಹೀಗಾದರೆ ನಾವೇನು ಮಾಡುವುದು? ಸುಮ್ಮನೆ ನಾವು ಹೀಗೇ ಮಾತನಾಡುವುದರಲ್ಲಿ ಅರ್ಥವಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಉಪಾಧ್ಯಕ್ಷರೆ, ಈ ಎಲ್ಲಾ ಬೇಡಿಕೆಗಳ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಕೆಲವು ಇಲಾಖೆಗಳ ವಿಷಯವನ್ನು ಮಾತ್ರ ಟಚ್ ಮಾಡುತ್ತಾರೆ. ಆದ್ದರಿಂದ ಉಳಿದ ಎಲ್ಲಾ ಸಚಿವರು ಆರಾಮವಾಗಿ ಕುಳಿತುಕೊಂಡಿದ್ದಾರೆ. ಇವರೇನೂ ಕಡ್ಡಾಯವಾಗಿ ಇಲ್ಲಿಗೆ ಬರಬೇಕೆಂದು ಏನೂ ಇಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ತಾವು ಮಾತನಾಡತಕ್ಕಂಥ ಎಲ್ಲಾ ವಿಷಯಗಳು ರೆಕಾರ್ಡ್ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ರೆಕಾರ್ಡ್ ಆಗಿರುವಂತ ಕಡತವನ್ನು ಒಂದು ಸಾರಿ ನೋಡಿಕೊಂಡು ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ :— ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರು ನಮಗೆ ಹುಚ್ಚು ಹಿಡಿಸಿದ್ದರು. ಆ ಸಂದರ್ಭದಲ್ಲಿ ತಾವು ಇರಲಿಲ್ಲ. ಆದರೆ ನಾವು ನಿಮ್ಮನ್ನು ಸುಮ್ಮನೆ ಬಿಟ್ಟು ಎಲ್ಲಾ ವಿಷಯವನ್ನು ಸಮಾಧಾನವಾಗಿ ತೆಗೆದುಕೊಳ್ಳುತ್ತಿದ್ದೇವೆ. ಯಾರು ಇಲ್ಲದೇ ಇದ್ದರೂ ಸಹ ಸದನ ನಡೆಯುತ್ತದೆ. ಯಾರೇನೂ ಮಾಡುವುದಕ್ಕೆ ಆಗುವುದಿಲ್ಲ. ಹಳೆಯ ಧಾರವಾಡ ಜಿಲ್ಲೆಯಲ್ಲಿರತಕ್ಕಂಥ ಸಹಕಾರಿ ಕೈಗಾರಿಕೆಗಳಾದ ಟೆಕ್ಸ್‌ಟೈಲ್ಸ್ ಮತ್ತು ಎಣ್ಣೆ ಗಿರಣಿಗಳು ಇವತ್ತಿನದಿವಸ ಯಾವ ಸ್ಥಿತಿಯಲ್ಲಿ ಇರೆ ಎಂದರೆ, ಬಹುಶ: ಅದನ್ನು ನೋಡಿದರೆ ನನಗೆ ಗಾಬರಿಯಾಗುತ್ತದೆ. ಇದಕ್ಕೇ ನಾವೇನಾದರೂ ಮಾಡದೇ ಇದ್ದರೆ ಮುಂದಿನ ದಿವಸಗಳಲ್ಲಿ ಇವೆಲ್ಲವೂ ಕೂಡ ಮುಚ್ಚಿ ಹೋಗುತ್ತವೆ. ಸುಮಾರು ೧೩೧ ಕೈಗಾರಿಕೆಗಳು ಹಾನಿಯಲ್ಲಿವೆ. ಈ ಎಲ್ಲಾ ಕೈಗಾರಿಕೆಗಳು ಡಿ.ಸಿ.ಸಿ. ಬ್ಯಾಂಕ್‌ನವರಿಗೆ ಸುಮಾರು ೬೦ ರಿಂದ ೭೦ ಕೋಟಿ ರೂಪಾಯಿ ಕೊಡಬೇಕಾಗಿದೆ. ಈ ಹಣ ಬರದೇ ಇದ್ದರೆ ಡಿ.ಸಿ.ಸಿ. ಬ್ಯಾಂಕ್‌ನವರು ಸಹ ಮುಚ್ಚಬೇಕಾಗುತ್ತದೆ. ಇವೆಲ್ಲಾ ರೈತರ ಇಂಡಸ್ಟ್ರಿಗಳಾಗಿರುವುದರಿಂದ ಇವುಗಳನ್ನು ಮುಚ್ಚುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಒಂದಾವರ್ತಿ ಸೆಟ್ಲ್‌ಮೆಂಟ್ ಮಾಡಿ ದುಡ್ಡು ತುಂಬದಿದ್ದರೆ ಖಂಡಿತವಾಗಿ ಎಲ್ಲಾ ಕೈಗಾರಿಕೆಗಳು ಮುಚ್ಚುತ್ತವೆ. ಇವತ್ತಿನ ದಿವಸ ಹೊಸದಾಗಿ ಒಂದು ಟೆಕ್ಸ್‌ಟೈಲ್‌ನ್ನು ಪ್ರಾರಂಭಮಾಡಬೇಕಾದರೆ ಸುನಮಾರು ೫೦ ರಿಂದ ೬೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವುಗಳನ್ನು ಅಭಿವೃದ್ಧಿಪಡಿಸುವ ಕಡೆ ಸರ್ಕಾರ ಲಕ್ಷ ಕೊಡುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಇವರ ಹತ್ತಿರ ಹಣ ಇಲ್ಲವೆಂದು ಕಾಣುತ್ತದೆ ರೈತರಿಗೋಸ್ಕರವಾದರೂ ಇವುಗಳನ್ನು ಉಳಿಸಿಕೊಳ್ಳಿ ಎಂದು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಾಜ್ಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಒಂದೆರಡು

ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಲೋಕಾಯುಕ್ತಕ್ಕೆ ವೆಂಕಟಾಚಲ ಎಂಬ ಒಳ್ಳೆಯ ಮತ್ತು ಪ್ರಾಮಾಣಿಕ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಇದನ್ನು ನಾವೂ ಕೂಡ ಮೆಚ್ಚುತ್ತೇವೆ. ಭ್ರಷ್ಟಾಚಾರ ಇರುವಂಥ ಕಡೆ ಇವರು ಹೋಗುವುದಕ್ಕೆ ಹೇಳಬೇಕು. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರ ಶಿಷ್ಟಾಚಾರವಾಗಿದೆ. ಹಿಂದೆ ನಾವು ಎಂದೂ ಕಾಣದಂಥ ಭ್ರಷ್ಟಾಚಾರವನ್ನು ನಮ್ಮ ರಾಜ್ಯದಲ್ಲಿ ಕಾಣುತ್ತಿದ್ದೇವೆ. ಇದಕ್ಕೊಂದು ಕಡಿವಾಣ ಹಾಕದೇ ಇದ್ದರೆ ನಾವು ಹಾಕಿಕೊಂಡಿರತಕ್ಕಂಥ ಯೋಜನೆಗಳು ಸಫಲವಾಗುವುದಿಲ್ಲ. ಈಗಾಗಲೇ ಶೇಕಡ ೭೦ ಭಾಗದಷ್ಟು ಹಣ ನೌಕರರಿಗೋಸ್ಕರ ಮತ್ತು ನಮಗೂ ಕೊಡತಕ್ಕಂಥ ಸಂಬಳವೂ ಸೇರಿದಂತೆ ಖರ್ಚಾಗುತ್ತಿದೆ. ಉಳಿದ ೩೦ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿದ್ದು ಇದರಲ್ಲಿ ೧೫ ಭಾಗ ತಿಂದು ಹಾಕುತ್ತಿದ್ದಾರೆ. ಉಳಿದ ೧೫ ಭಾಗದಲ್ಲಿ ಮಾತ್ರ ನಾವು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡುತ್ತಿದ್ದೇವೆ. ಈ ಒಂದು ಹಿನ್ನಲೆಯಲ್ಲಿ ಬಸವಣ್ಣನವರು ಏನು ಹೇಳಿದ್ದಾರೆಂದರೆ,

"ಕಾಂಚನವೆಂಬ ನಾಯ ನಚ್ಚಿ, ನಿಮ್ಮ ನಾನು ಮರೆದೆನಯ್ಯಾ ಕಾಂಚನಕ್ಕೆ ವೇಳೆಯಲ್ಲದೇ, ಲಿಂಗಕ್ಕೆ ವೇಳೆಯೆಲ್ಲಿಹುದು ಹಡಕೆಗೆ ಮೆಚ್ಚಿದ ಸೊಣಗನನು ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವ?" ಹಡಿಕೆ ಎಂದರೆ ನಮ್ಮ ರಾಜ್ಯದಲ್ಲಿ ಲಂಚ ತಿನ್ನುವವರು ಎಲುಬು ತಿನ್ನುವ ನಾಯಿಯಾಗಿದ್ದಾರೆಂದು ಬಸವಣ್ಣನವರು ಹೇಳಿದ್ದಾರೆ. ಇದರಲ್ಲಿ ಅಧಿಕಾರೇತರರು ಇರಬಹುದು ಅಥವಾ ಅಧಿಕಾರಿಗಳು ಇರಬಹುದು. ಇದೇ ರೀತಿಯಾಗಿ ದಾಸರೂ ಕೂಡ ಒಂದು ಪದವನ್ನು ಹೇಳಿದ್ದಾರೆ.

ಶ್ರೀಮತಿ ಮೋಟಮ್ಮ (ಮಕ್ಕಳ ಮತ್ತು ಮಹಿಳೆಯರ ಕಲ್ಯಾಣ ಇಲಾಖಾ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ನಾನೊಂದು ವಚನವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ,

"ಇದಿರ ಹಳಿಯಬೇಡ ತನ್ನ ಬಣ್ಣಿಸಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ"

ಇದಾಗುತ್ತದೆ ನಿಮ್ಮ ಚರ್ಚೆಯಿಂದ

ಶ್ರೀ ಎಸ್.ಎಸ್. ಪಾಟೀಲ್ :— ಇದೇ ಬಸವಣ್ಣನವರು ಏನು ಹೇಳಿದ್ದಾರೆಂದರೆ,

"ಬೈದವರನ್ನು ನಿಮ್ಮ ಬಂಧುಗಳೆನ್ನಯ್ಯಾ :
ನಿಂದಿಸುವವರನ್ನು ತಂದೆ-ತಾಯಿಗಳೆನ್ನಯ್ಯಾ :
ಜರಿದವರನ್ನು ಜನ್ಮ ಬಂಧುಗಳೆನ್ನಯ್ಯಾ :"

ಇದನ್ನೆಲ್ಲಾ ತಾವು ಓದಬೇಕು. ಇದು ನಿಂದನೆ ಅಲ್ಲ. ನೇರವಾಗಿ ಇರುವಂಥದನ್ನು ಹೇಳುತ್ತಿದ್ದೇನಷ್ಟೆ. ನಿಂದನೆ ಮಾಡಿಕೊಳ್ಳುವವರ ಬಗ್ಗೆ ದಾಸರು ಏನು ಹೇಳಿದ್ದಾರೆಂದರೆ

"ಹಂದಿ ಬೇಕು ಹಂದಿ ಬೇಕು, ಕೇರಿಗೊಂದು ಹಂದಿ ಬೇಕು" ನಿಂದಕರ ಬಗ್ಗೆ ಬಸವಣ್ಣನವರು ಮತ್ತು ದಾಸರು ಹೇಳಿರುವುದನ್ನು ತಮ್ಮ ಮುಂದೆ ಹೇಳಿದ್ದೇನೆ. ಹಾಗೆಯೇ ದಾಸರು ಹೇಳಿರುವಂಥದನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಅದೇನೆಂದರೆ,

"ದುಗ್ಗಾಣಿ ಬಲು ಕೆಟ್ಟದಣ್ಣ, ದುಗ್ಗಣಿ ಬಲು ಕೆಟ್ಟದು :
ಆಚಾರ ಹೇಳುವುದು ದುಗ್ಗಣಿ :
ಬಹು ನೀಚರನ್ನಾಗಿ ಮಾಡುವುದು ದುಗ್ಗಾಣಿ :"

ಇವತ್ತಿನದಿವಸ ಈ ದುಗ್ಗಾಣಿ ನಮ್ಮನ್ನೆಲ್ಲಾ ನೀಚರನ್ನಾಗಿ ಮಾಡಿಸಿದೆ. ನಮ್ಮ ರಾಜ್ಯದಲ್ಲಿ ಹಿಂದೆ ಕಾಣದಂಥ ಬರಗಾಲ ಈ ಸಾರಿ ಕಾಣುತ್ತಿದ್ದೇವೆ. ಹಾಗೆಯೋ ಹಿಂದೆ ಕಾಣದಂಥ ಭ್ರಷ್ಟಾಚಾರ ಈಗ ಇದೆ. ಎನ್ನತಕ್ಕಂಥದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವೆಲ್ಲರೂ ಕೂಡ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಆದೆ ಇದರಲ್ಲಿ ಆಡಳಿತ ನಡೆಸತಕ್ಕಂಥವರ ಜವಾಬ್ದಾರಿ ನೇರವಾಗಿರುತ್ತದೆ. ಭ್ರಷ್ಟಾಚಾರ ನಿಲ್ಲಿಸುವುದಕ್ಕೆ ಅಥವಾ ಕಂಟ್ರೋಲ್ ತಾವು ಪ್ರಯತ್ನ ಮಾಡಬೇಕು. ಇದನ್ನು ತಾವು ಮಾಡದೇ ಹೋದರೆ ಮುಂದಿನ ದಿನಗಳಲ್ಲಿ ಯಾರು ಯಾರು ಭ್ರಷ್ಟಾಚಾರ ಮಾಡುತ್ತಿದ್ದಾರೆ ಎಂದು ನೇರವಾಗಿ ಹೇಳುವಂಥ ಮಟ್ಟಿಗೆ ನಾವು ಮುಟ್ಟುತ್ತೇವೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಉಪಾಧ್ಯಕ್ಷರೆ ಎಲ್ಲರೂ ಭ್ರಷ್ಟಾಚಾರಿಗಳೆಂದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ :— ನಾನು ಆ ರೀತಿಯಾಗಿ ಹೇಳಿಲ್ಲ, ಭ್ರಷ್ಟಾಚಾರ ರಾಜ್ಯದಲ್ಲಿ ಇದೆಯೆಂದು ಹೇಳಿದ್ದೇನೆ. 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡರಂತೆ' ಪ್ರಸಂಗ ಬಂದಾಗ ಅದನ್ನು ಮುಂದೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ :— ಮಾನ್ಯ ಉಪಾಧ್ಯಕ್ಷರೆ, ಆತರಹ ಕ್ಲೀನ್ ಚಿಟ್ ಅನ್ನು ಯಾರೂ ಕೊಡುವುದಕ್ಕೆ ಬರುವುದಿಲ್ಲ. ನಿಮಗೆ ಅಷ್ಟೊಂದು ಸೆನ್ಸಿಟೀವ್ ಆಗಿದ್ದರೆ ಈವತ್ತು ಪ್ರಮುಖವಾದ ಪತ್ರಿಕೆಗಳಲ್ಲಿ ಒಂದು ವಿಚಾರ ಪ್ರಸ್ತಾಪವಾಗಿದೆ. ಯಾರೋ ಒಬ್ಬ ಹಿರಿಯ ಮಂತ್ರಿಗಳ 25 ಲಕ್ಷ ರೂಪಾಯಿಗಳನ್ನು ಅಮೇರಿಕಕ್ಕೆ ತಮ್ಮ ಸಂಬಂಧಿಕರಿಗೆ ಕಳುಹಿಸುವುದಕ್ಕೆ ಹವಾಲಾಗಿ ಕಳುಹಿಸುತ್ತಿದ್ದರು. ಡಕಾಯಿತಿಗಳು ಹೋಗಿ ಟಾಟಾ ಸುಮೋದಿಂದ ಆ 25 ಲಕ್ಷ ರೂಪಾಯಗಳನ್ನು ಎತ್ತಿಕೊಂಡು ಹೋದರು. ಮೋಬೈಲ್‌ನಿಂದ

ಮಂತ್ರಿಗಳಿಗೆ ದೂರವಾಣಿಯನ್ನು ಮಾಡಿದರು, ಅದು ಬ್ಲಾಕ್ ಮನಿ ಆಗಿರುವುದರಿಂದ ಪೊಲೀಸ್ ಕಂಪ್ಲೆಂಟ್ ಕೊಡುವುದಕ್ಕೆ ಹೋಗಬೇಡಿ ಎಂದು ಹೇಳಿದ್ದು ಅದು ಪತ್ರಿಕೆಗಳಲ್ಲಿ ವರದಿಯಾಗಿದೆ ಇಂದಿರಾನಗರದ ಪೋಲೀಸ್ ಠಾಣೆಯಲ್ಲಿ ಇದಾಯಿತು. ನಿನ್ನೆ ಸಂಜೆ ಪತ್ರಿಕೆಯಲ್ಲೂ ಸಹ ವರದಿಯಾಗಿದೆ. ನಾನು ನನ್ನ ಭಾಷಣವನ್ನು ಪೂರ್ಣಗೊಳಿಸುತ್ತೇನೆ, ತಾವು ದಯಮಾಡಿ ಕೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ದಾಖಲೆಯನ್ನು ಕೊಡಬೇಕು. ತಾವು ಅಧ್ಯಕ್ಷರಿಗೆ ಒಂದು ನೋಟೀಸ್‌ನ್ನಾದರೂ ಕೊಡಬೇಕಲ್ಲವೇ? ಹಾಗೆಯೇ ಹೇಳಿಬಿಡುವುದೇ?

ಶ್ರೀ ಪಿ.ಜಿ.ಆರ್ ಸಿಂಧ್ಯಾ :— ತಾವು ನನಗೆ ವಿಷಯವನ್ನು ಹೇಳುವುದಕ್ಕೆ ಸಹಕಾರವನ್ನು ಕೊಡಬೇಕು. ನಾನು ಏನು ಹೇಳುತ್ತಿದ್ದೇನೆಂದರೆ, ಅಷ್ಟೊಂದು ಸೆನ್ಸಿಟೀವ್ ಆಗಿ ಮಾನ್ಯ ಚಂದ್ರೇಗೌಡರು ಹಾಗೂ ಅವರ ಸರ್ಕಾರ ಇರುವುದಾದರೆ, ನಾನು ವೈಯಕ್ತಿಕವಾಗಿ ಹೇಳುತ್ತಿದ್ದೇನೆ. ನಾನು ನೋಟೀಸ್ ಕೊಟ್ಟು ಭ್ರಷ್ಟಾಚಚಾರದ ಬಗ್ಗೆ ಮಾತನಾಡಬಹುದುತ್ತು. ಆದರೆ ನಾನು ಆದಷ್ಟು ಭ್ರಷ್ಟಾಚಾರದ ಬಗ್ಗೆ ಕಡಿಮೆ ಮಾತನಾಡುತ್ತೇನೆ. ಏಕೆಂದರೆ, ನಮ್ಮ ವ್ಯವಸ್ಥೆ ಏನು ಎಂಬುದು ನನಗೆ ಗೊತ್ತಿದೆ. ಅವರು ವೇಗ್‌ಆಗಿ ಹೇಳಿದರು, ಟರ್ಮನ್ನು ಅವರು ಜನರಲೈಸ್ ಆಗಿ ಮಾಡಿದರು. ಸದನ ಹಾಗೂ ನಾವು ಎಲ್ಲರೂ ಎಂದ ಮಾನ್ಯ ಎಸ್.ಎಸ್. ಪಾಟೀಲರು ಮಾತನಾಡಿದರು. ನೀವು ಅಷ್ಟೊಂದು ಸೆನ್ಸಿಟೀವಾಗಿದ್ದರೆ ಒಂದು ಕ್ಲಾರಿಫಿಕೇಷನ್ ಕೊಟ್ಟು ಯಾವ ಮಂತ್ರಿಗಳು ಭ್ರಷ್ಟಾಚಾರಿಗಳಲ್ಲವೆಂದು ಹೇಳಬೇಕು. ನಾನೇಕೆ ನೋಟೀಸನ್ನು ಕಳುಹಿಸಿಕೊಡಲಿ, ಪತ್ರಿಕೆಗಳಲ್ಲಿ ಬಂದಿದೆ. ಯಾರೋ ಮಂತ್ರಿ ಎಂದು ಜನರು ಗುಸುಗುಸು ಮಾತನಾಡುತ್ತಿದ್ದಾರೆ. ಅಂದು ಯಾರು ಎಂದು ನೀವೇ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಪತ್ರಿಕೆಗಳಲ್ಲಿ ಬಂದಿರುವುದೆಲ್ಲದಕ್ಕೂ ಪ್ರತಿಕ್ರಿಯಿಸುವುದು ಸರ್ಕಾರದ ಕರ್ತವ್ಯವಲ್ಲ. ಮಾನ್ಯ ಸದಸ್ಯರು ಏನಾದರೂ ವಿಷಯ ಎತ್ತಿದರೆ ಹೇಳಬಹುದು ಏನು ಎನ್ನುವುದು ನಮಗೆ ಗೊತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೆ, ಅವರ ಪ್ರಕಾರ ನಡೆದುಕೊಳ್ಳೋಣ. ಆ ಮಾತು ಬೇರೆ. ಯಾರ್‍ಯಾರು ಏನು ಇದ್ದಾರೆಂದು ಬಯಲಿಗೆ ಬೀಳುತ್ತದೆ. ನೋಟೀಸ್ ಕೊಟ್ಟು ಯಾವ ಮಂತ್ರಿಗಳು ಎಷ್ಟು ಹಣ ಹೊಡೆಯುತ್ತಾರೆ ಎನ್ನುವುದರ ಬಗ್ಗೆ ಹೇಳುವ ಕಾಲ ಬಹಳ ದೂರವಿಲ್ಲ. ರಾಜ್ಯದಲ್ಲಿ ಇವತ್ತು ಭ್ರಷ್ಟಾಚಾರವಿದೆ ಎಂದು ಹೇಳಿದ್ದೇನೆ.

ಉಪಾಧ್ಯಕ್ಷರು :— ಮಾನ್ಯ ಪಾಟೀಲರೆ, ಆ ವಿಷಯದ ಬಗ್ಗೆ ಮಾತನಾಡುವುದು

ಅವಶ್ಯಕತೆ ಇಲ್ಲ. ಮಾತನಾಡುವುದನ್ನು ಮಾತನಾಡಿ ಬಿಟ್ಟಿದ್ದೀರಿ. ಒಂದೂವರೆ ಗಂಟೆಯಿಂದ ಮಾತನಾಡಿದ್ದೀರಿ, ನೀವು ಇನ್ನು ಎಷ್ಟು ಗಂಟೆ ಮಾತನಾಡುತ್ತೀರಿ. ನಿಮ್ಮ ಸಮಯ ಮುಗಿದು ಹೋಗಿದೆ. ನಾನು ಮಾನ್ಯ ಜಯಪ್ರಕಾಶ್ ಹೆಗಡೆಯವರನ್ನು ಮಾತನಾಡಲು ಕರೆದಿರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :— ನಾನು ಎಲ್ಲವನ್ನೂ ಹೇಳಿದ್ದೇನೆ.

ಉಪಾಧ್ಯಕ್ಷರು :— ಹಾಗಾದರೆ ನೀವು ಮತ್ತೆ ಏಕೆ ಮಾತನಾಡುತ್ತೀರಿ, ನಿಮ್ಮ ಭಾಷಣದ ಸಮಯ ಮುಗಿದಿದೆ. ಬೇರೆಯವರಿಗೆ ಅವಕಾಶವನ್ನು ಮಾಡಿಕೊಡಬೇಕಾಗಿದೆ. ನಿಮ್ಮ ನಾಯಕರು ನಿಮಗೆ ಹೆಚ್ಚಿಗೆ ಸಮಯವನ್ನು ಕೊಡಿ ಎಂದು ಹೇಳಿದ್ದಕ್ಕಾಗಿ ನಿಮಗೆ ಒಂದೂವರೆ ಗಂಟೆಗಳ ಕಾಲಾವಕಾಶವನ್ನು ಕೊಡಲಾಗಿದೆ. ನಾವು ಕಡಿಮೆ ಮಾತನಾಡುತ್ತೇವೆ, ನಿಮಗೆ ಹೆಚ್ಚು ಅವಕಾಶ ಕೊಡಿ ಎಂದು ಹೇಳಿದ್ದರು. ಶ್ರೀ ಪಾಟೀಲರೇ ತಾವು ದಯಮಾಡಿ ಕುಳಿತುಕೊಳ್ಳಬೇಕು. ಶ್ರೀ ಜಯಪ್ರಕಾಶ್ ಹೆಗಡೆಯವರೇ, ನೀವು ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್ :— ನಿಮಗೆ ನಾನು ವಂದನೆಯನ್ನು ಹೇಳಬಾರದೇ? ಏನು ಎನ್ನುವುದರ ಬಗ್ಗೆ ನಾನು ಕೊನೆಯಲ್ಲಿ ಹೇಳಬೇಕಲ್ಲವೇ? ಬೇಡವೆಂದರೆ ನಾನು ಹೇಳುವುದನ್ನು ಬಿಡುತ್ತೇನೆ.

ಉಪಾಧ್ಯಕ್ಷರು :— ತಾವು ಬೇಗ ಕುಳಿತುಕೊಂಡರೆ ನಮಗೆ ವಂದನೆಯನ್ನು ಹೇಳಿದಂತಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಅಂದರೆ ಇದನ್ನು ಕೇಳುವುದಕ್ಕೆ ತಮಗೂ ಮನಸಿಲ್ಲ.

ಉಪಾಧ್ಯಕ್ಷರು :— ಇಲ್ಲವೆಂದು ತಿಳಿದುಕೊಳ್ಳಿ

+ ಶ್ರೀ ಜನಪ್ರಕಾಶ್ ಹೆಗಡೆ (ಬ್ರಹ್ಮಾವರ) :— ಮಾನ್ಯ ಉಪಾಧ್ಯಕ್ಷರೆ, ಅವರು ಕೊನೆಯಲ್ಲಿ ಪ್ರಾರಂಭ ಮಾಡಿದ ವಿಷಯದ ಬಗ್ಗೆ ನಾನು ಒಂದು ಮಾತನ್ನು ಹೇಳಿ ಮುಗಿಸಿ ಬಿಡುತ್ತೇನೆ. ಎಲ್ಲಾ ಬುಡದಲ್ಲಿ ಲೀಕ್ ಆದರೆ, ಗೌರ್ನಮೆಂಟ್ ಮಾತ್ರ ಟಾಪ್‌ಲ್ಲಿ ಲೀಕ್ ಆಗುವುದು. ಆದರೆ ಯಾವಾಗಲೂ ಸತ್ಯವನ್ನು ಹೇಳಿದರೆ ನೋವಾಗುತ್ತದೆ. ಅದನ್ನು ನಿಯಂತ್ರಣ ಮಾಡುವುದಕ್ಕೆ ಎಷ್ಟು ಸಾಧ್ಯವಾಗುತ್ತದೆ ಅಷ್ಟು ಮಾಡಬೇಕು. ಪ್ರತಿ ಸದನದಲ್ಲಿ ಅನೇಕ ವಿಷಯಗಳ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತೇವೆ. ಯಾವ ಒಬ್ಬ ಮಂತ್ರಿಗಳಿಗೂ ಉತ್ತರವನ್ನು ಹೇಳುವುದಕ್ಕೆ ಅವಕಾಶ ಸಿಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಲ್ಲವನ್ನೂ ಉತ್ತರಿಸುವುದರಿಂದ ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ

ಬರಬೇಕೆಂದು ಏನೂ ಇಲ್ಲ. ಈ ಒಂದು ಪರಿಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡಿದ್ದೆ. ಮುಂದಿನ ಸದನದಲ್ಲಾದರೂ ಸಂಬಂಧಪಟ್ಟ ಇಲಾಖಾ ಮಂತ್ರಿಗಳಿಂದ ಉತ್ತರವನ್ನು ಕೊಡಿಸಿದರೆ, ಅವರು ಏನೇನು ಮಾಡಿದ್ದಾರೆಂದು ನಮಗೆ ಹಾಗೂ ರಾಜ್ಯದ ಜನತೆಗೆ ವಿಷಯ ತಿಳಿಯುವುದಕ್ಕೆ ಗೊತ್ತಾಗುತ್ತದೆ. ಮಾನ್ಯ ಮೀನುಗಾರಿಕೆ ಸಚಿವರು ಇಲ್ಲೇ ಇರುತ್ತಾರೆ. ನಾನೂ ಕೂಡ ಹಿಂದಿನ ಸರ್ಕಾರದಲ್ಲಿ ಮೀನುಗಾರಿಕೆ ಸಚಿವನಾಗಿ ಕೆಲಸವನ್ನು ಮಾಡಿರುತ್ತೇನೆ. ಕಳೆದ ಎರಡು ವರ್ಷಗಳಲ್ಲಿ ಏನು ಹೊಸ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದಾರೆ? ಏನು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದಾರೆಂದು ಅವರು ಉತ್ತರವನ್ನು ಹೇಳಿದರೆ, ನನಗೆ ಸಮಾಧಾನವಾಗುತ್ತಿದೆ. ಏಕೆಂದರೆ, ನಾವು ಹಿಂದೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು, ಅದರ ಬಗ್ಗೆ ಎರಡು ವರ್ಷದಿಂದ ಇವರು ಹೇಳಿಕೆಯನ್ನು ಕೊಡುವುದನ್ನು ಬಿಟ್ಟರೆ ಯಾವುದೇ ಒಂದು ಹೊಸ ಕಾರ್ಯಕ್ರಮವನ್ನೂ ಇವರು ಹಾಕಿಲ್ಲ. ಮಲ್ಪೆ ಎರಡನೇ ಹಂತದ ಬಗ್ಗೆ ಹೇಳಿದ್ದಾರೆ, ಡೀಸಲ್ ಸಬ್ಸಿಡಿ ಬಗ್ಗೆ ಹೇಳಿದ್ದಾರೆ. ಸೇಲ್ಸ್ ಟ್ಯಾಕ್ಸ್ ವಿನಾಯಿತಿಯ ಬಗ್ಗೆ ಹೇಳಿದ್ದಾರೆ. ಮಾನ್ಯ ಸಚಿವರಿಗೆ ನಾನು ಒಂದು ಕಿವಿ ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಮೀನುಗಾರರಿಗೆ ಡೀಸಲ್ ಮೇಲೆ ಸೇಲ್ಸ್ ಟ್ಯಾಕ್ಸ್ ವಿನಾಯಿತಿ ಕೊಡಲಾಯಿತು. ಪ್ರತಿವರ್ಷ ಅವರು ಅದೇ ಬೇಡಿಕೆಯನ್ನು ಇಡುವುದಕ್ಕಿಂತ ಇದೊಂದು ತಮ್ಮ ಇಲಾಖೆಯ ಕಾರ್ಯಕ್ರಮವೆಂದು ಹಾಕಿಕೊಂಡು ಬಿಟ್ಟರೆ, ಅವರು ಮುಂದಿನ ವರ್ಷದಿಂದ ಇದನ್ನು ಕೊಡಿ ಎಂದು ಕೇಳುವ ಪ್ರಸಂಗ ಉದ್ಭವವಾಗುವುದಿಲ್ಲ. ದಯಮಾಡಿ, ಅವರು ಪ್ರತಿವರ್ಷ ಬಂದು ನಿಮ್ಮನ್ನು ಕೇಳುವುದು, ಹೇಳಿಕೆ ಕೊಟ್ಟು ಪುನ: ಧನ್ಯವಾದಗಳನ್ನು ನೀವು ಹೇಳುವುದನ್ನು ನಿಲ್ಲಿಸಬೇಕು. ಇದೊಂದು ಶಾಶ್ವತವಾದ ಕಾರ್ಯಕ್ರಮವೆಂದು ನಿಮ್ಮ ಇಲಾಕೆಯ ಒಂದು ಪ್ಲಾನ್‌ನಲ್ಲಿ ಬಂದು ಬಿಡಲಿ. ಮಲ್ಪೆ ಎರಡನೆ ಹಂತವಾಗಲಿ, ಆಳವೆಕೋಡಿದಾಗಲಿ ಮಂಗಳೂರು ಅಥವಾ ಕಾರವಾರದ್ದಾಗಲಿ ಏನಾದರೂ ಇದ್ದರೆ ಹೇಳಿ. ಹಿಂದಿನ ಸರ್ಕಾರದಲ್ಲಿ ಮಂಜೂರಾತಿಗಾಗಿ ಕೇಂದ್ರದ ಅನುಮೋದನೆಯನ್ನು ನೀಡಿ ನಿಮ್ಮ ಸಚಿವ ಸಂಪುಟದಲ್ಲಿ ಅನುಮೋದನೆಯನ್ನು ಕೊಟ್ಟು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದು, ನೀವು ಏನೂ ಮಾಡಿಲ್ಲವೆಂದು ಹೇಳುತ್ತೇನೆ. ನೀವು ಹೊಸದಾಗಿ ಪ್ರಾರಂಭ ಮಾಡಿದ್ದು "ಮತ್ಸ್ಯ ವಾಹಿನಿ" ಕಾರ್ಯಕ್ರಮ. ಅದನ್ನು ಸಹ ನಾವು ಹಾಕಿಕೊಂಡಿದ್ದೆವು. ನೀವು ಅದನ್ನು ಮಾಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಉಪಾಧ್ಯಕ್ಷರೆ, ಇವರು ಮೀನುಗಾರಿಕೆ ಸಚಿವರಾಗಿದ್ದರು ಎನ್ನುವುದು ನಮಗೆ ಗೊತ್ತೇ ಆಗಲಿಲ್ಲ. ಇವರು ಆಗಿದ್ದರು ಎನ್ನುವದಕ್ಕೆ ಇವರು ಮೀನಿನ ಊಟ ಹಾಕಿಸಿದ್ದರಿಂದ ಗೊತ್ತಾಯಿತು.

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ತಾವು ಆಗ ಈ ಸದನದಲ್ಲಿ ಇರಲಿಲ್ಲ, ತಾವು ಇದ್ದರೆ ನಾನು ದಿನನಿತ್ಯ ಊಟವನ್ನು ಹಾಕಿಸುತ್ತಿದ್ದೆನು. ನಾವು ಹಿಂದೆ ದಿನಾಲೂ ಮೀನನ್ನು ತರಿಸಿ ಊಟವನ್ನು ಮಾಡುತ್ತಿದ್ದೆವು.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ ಒಂದು ಒಳ್ಳೆಯ ಸಂಪ್ರದಾಯವಿತ್ತು. ಶಾಸಕರು ಒಳ್ಳೆಯ ಕರ್ತವ್ಯವನ್ನು ಮಾಡಬೇಕು, ಅವರು ಊಟಕ್ಕೆ ಹೋಗಿ ಸಮಯವನ್ನು ಹಾಳು ಮಾಡಿಕೊಳ್ಳಬಾರದೆಂದು ಎಲ್ಲಾ ಮಂತ್ರಿಗಳು ಇಲ್ಲಿಯೇ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಈ ಸರ್ಕಾರದ ಮಂತ್ರಿಗಳು ಅದನ್ನು ಮರೆತುಬಿಟ್ಟಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ರಾಜ್ಯದಲ್ಲಿ ಬರಗಾಲ ಬಂದಿರುವುದರಿಂದ ಮಂತ್ರಿಗಳಿಗೂ ಕೂಡ ಬರ ಬಂದಿರುತ್ತದೆ. ಒಂದು ದಿನ ಕೂಡ ಊಟದ ಸಂಪ್ರದಾಯ ಈ ಸಾರಿಯ ಸದನದಲ್ಲಿ ಕಾಣಲಿಲ್ಲ.

ಶ್ರೀ ಜನಪ್ರಕಾಶ್ ಹೆಗಡೆ :— ಮಾನ್ಯ ಉಪ್ಪ್ಯಾಕ್ಷರೆ, ಇನ್ನೊಂದು ವಿಷಯ ಸಮುದ್ರದ ತಡೆಗೋಡೆಯ ಬಗ್ಗೆ 141 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಹಿಂದೆ ನಾವು ನಮ್ಮ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೆವು. ಕಳೆದ ತಿಂಗಳಿನವರೆಗೆ ಇವರು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆಂದು ಹೇಳಿಕೊಂಡು ಬಂದರು. ಇದರಲ್ಲಿ ನಮ್ಮ ಸಂಸದರ ಒಂದು ಹೇಳಿಕೆ ಇದೆ. 141 ಕೋಟಿ ರೂಪಾಯಿಗಳ ಶಾಶ್ವತ ತಡೆ ಗೋಡೆಯ ಬಗ್ಗೆ ಕೇಂದ್ರದ ಅನುಮತಿ ಎಂದು ಇದೆ. ಮಾನ್ಯ ಮೀನುಗಾರಿಕೆ ಸಚಿವರ ಇನ್ನೊಂದು ಹೇಳಿಕೆಯನ್ನು ಓದುತ್ತೇನೆ. ``The State Government had sent Rs.175 crores proposal to the Union Government for construction of Sea Wall in the coastal districts" ಈ ಎರಡರಲ್ಲಿ ನಾವು ಯಾವುದನ್ನು ನಂಬಬೇಕು, ಸಚಿವರು ತಮ್ಮ ಪವರ್‌ನ್ನು ಸಂಸದರಿಗೆ ಡೆಲಿಗೇಟ್ ಮಾಡಿ, ಅವರನ್ನು ಸರ್ಕಾರದ ಸ್ಪೋಕ್ಸ್‌ಮೆನ್ ಎಂದು ಮಾಡಿದ್ದಾರೆಯೇ? ಇದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕು. ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಹೇಳಿಕೆಗಳನ್ನು ಸಂಸದರು ಕೊಡುತ್ತಿದ್ದಾರೆ. ಹಿಂದಿನ ಸರ್ಕಾರ ಮಾಡಿದ ಕೆಲಸಗಳ ಬಗ್ಗೆ ಅವರು ಹೇಳಿಕೆಯನ್ನು ಕೊಡುತ್ತಾರೆ. ಈ ಇಲಾಖೆಯ ಬಗ್ಗೆ ಏನಾದರೂ ಹೇಳಿಕೆಯನ್ನು ಕೊಡಬೇಕಾದರೆ, ಮಾನ್ಯ ಮೀನುಗಾರಿಕೆ ಇಲಾಖೆಯ ಸಚಿವರು ಕೊಡುವುದು ಸೂಕ್ತವೆಂದು ಹೇಳುತ್ತೇನೆ. ಇದರ ಬಗ್ಗೆ ಬೇರೆ ಯಾರಿಂದಲಾದರೂ ಹೇಳಿಕೆಯನ್ನು ಕೊಡಿಸುವುದು ಅದು ಸರಿಯಲ್ಲವೆಂದು ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ. ವಾರಾಹಿ ಯೋಜನೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸಂಸದರು ಹೇಳಿಕೆಯನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರು ಹೇಳಿಕೆಯನ್ನು ಕೊಡುತ್ತಿಲ್ಲ. ಸಂಸದರು ಕೊಡುತ್ತಿರುವ ಹೇಳಿಕೆಯ ಬಗ್ಗೆ ನಾನು ಕೇಳಿತ್ತಿರುವುದು. ವಾರಾಹಿ ಯೋಜನೆಗೆ ಏಳು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಡಿಸೆಂಬರ್ 2000ಕ್ಕೆ ಮುಗಿಯುತ್ತದೆಂದು ಹೇಳಿದ್ದರು. ಅದು 2001ನೇ ಇಸ್ವಿ ಪ್ರಾರಂಭವಾಯಿತು ಆದರೂ ಕೆಲಸ ಪ್ರಾರಂಭವಾಗಲಿಲ್ಲ. ಇದರ ಬಗ್ಗೆ ಗಂಭೀರವಾಗಿ

ಆಲೋಚನೆಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ಹೇಳಿಕೆಯನ್ನು ಕೊಡುವಾಗ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು, ಬೇರೆ ಯಾರೂ ಹೇಳಿಕೆಯನ್ನು ಕೊಡಬಾರದು ಅದು ಸೂಕ್ತವಲ್ಲವೆಂದು ಹೇಳುತ್ತೇನೆ. ಮಾನ್ಯ ಸಚಿವರು ತಮ್ಮ ಪವರ್‌ನ್ನು ಸಂಸದರಿಗೆ ಡೆಲಿಗೇಟ್ ಮಾಡಿದ್ದರೆ ಅವರು ಕೊಡುವ ಹೇಳಿಕೆಯನ್ನು ನಾವು ನಂಬುತ್ತೇವೆ.

1.40 ಪಿ.ಎಂ.

ಇನ್ನು ಮೀನುಗಾರಿಕೆ ರಸ್ತೆಯ ಬಗ್ಗೆ ಹೇಳುವುದಾದರೆ, ಇಡೀ ಕರಾವಳಿ ಪ್ರದೇಶದಲ್ಲಿರುವ ಮೀನುಗಾರಿಕೆಯ ರಸ್ತೆಗಳು ಹಾಳಾಗಿವೆ, ಇದರ ದುರಸ್ತಿಗೆಂದು 5 ಲಕ್ಷ ರೂಪಾಯಿಗಳನ್ನಿಟ್ಟಿದ್ದಾರೆ. ಖಂಡಿತವಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಎಲ್ಲಾ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈವರೆವಿಗೂ ಹೇಳಿಕೆಯನ್ನು ಕೊಡುತ್ತಿದ್ದಾರೆಯೇ ವಿನ: ಅನುದಾನವನ್ನು ಒದಗಿಸಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆ ನಾವು ತಮಗೆ ಅಭಿನಂದನೆಯನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಮಂಗಳೂರು ನಗರಾಭಿವೃದ್ಧಿಯ ಬಗ್ಗೆ ಹೇಳುವುದಾದರೆ, ನಾನು ಒಂದು ವಿಷಯ ಸಮಿತಿಯಲ್ಲಿ ವರದಿಯನ್ನು ಓದಿದ್ದೇನೆ, 1.27 ಕಿ.ಮಿ. ರಸ್ತೆಯನ್ನು ಕಾಂಕ್ರೀಟ್ ಮಾಡುವುದಕ್ಕೆ 2.13 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾನು ಇಂಜಿನಿಯರ್ ಅಲ್ಲ, ನಾನು ಈ ಬಗ್ಗೆ ಇಂಜಿನಿಯರ್‌ರವರನ್ನು ಇದಕ್ಕೆ ಎಷ್ಟು ವೆಚ್ಚವಾಗಬಹುದು ಎಂದು ಕನ್‌ಸಲ್ಟ್ ಮಾಡಿದೆ. ಈ ಡ್ರೈನೇಜ್‌ಗೆ ಲಿವೆಲ್‌ಗೆ ಎಲ್ಲದಕ್ಕೂ ಲೆಕ್ಕವನ್ನು ಹಾಕಿದರೆ 4 ಲೈನ್ ಅಂದರೆ 14 ಮೀಟರ್ ಮಾಡಿರಬಹುದು. 1.3 ರೂಪಾಯಿಗಳು ಹೆಚ್ಚೆಂದರೆ 1.50 ಕೋಟಿ ರೂ.ಗಳು ಖರ್ಚಾಗಬಹುದು ಎಂದು ಹೇಳಿದ್ದಾರೆ. ಕಾರ್ಕಳದಿಂದ ಮಂಗಳೂರಿಗೆ ಜಲ್ಲಿ ತರುವುದಕ್ಕೆ ಲೀಡ್‌ನ್ನು ತೆಗೆದುಕೊಂಡಿದ್ದಾರೆ. ಕುಂದಾಪುರದಲ್ಲಿಯೂ ಸಹ ಜಲ್ಲಿಯಿರುತ್ತದೆ, ಅದನ್ನು ಕಳುಹಿಸಿದ್ದರೆ ನಮ್ಮಲ್ಲಿರುವವರಿಗೆ ಸ್ವಲ್ಪ ಆದಾಯ ಹೆಚ್ಚಾಗುತ್ತಿತು. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು, ಇದರ ಬಗ್ಗೆ ಸರ್ಕಾರದವರು ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಈ ವಿಷಯ ಬಂರುವುದರಿಂದ ಈಗಾಗಲೇ ನಾವು ಗಮನ ಸೆಳೆಯುವ ಸೂಚನೆಯ ಮೂಲಕ ಮೂವ್ ಮಾಡಿದ್ದೇವೆ. ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನವನ್ನು ಮಾಡಿದ್ದೇವೆ. ಇಷ್ಟೆಲ್ಲಾ ವ್ಯವಸ್ಥೆಗಳನ್ನು ಮಾಡಿದರೂ ಕೂಡ ಮಳೆ ನೀರು ಹರಿದು ಹೋಗುವುದಕ್ಕೆ ಡ್ರೈನೇಜ್ ಆಗಲಿ, ಫುಟಾಪಾತ್ ವ್ಯವಸ್ಥೆಯಾಗಲಿ, ಇಲ್ಲದಿರುವ ಬಗ್ಗೆ ಸಮಸ್ಯೆಯನ್ನು ಹಾಗೂ ಅಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಇದರ ಬಗ್ಗೆ ಎಷ್ಟು ಎಕ್ಸ್‌ಪೆನ್ಸ್‌ಸ್ ಆಗಿದೆ ಬಿಲ್ಲಿಂಗ್ ಎಷ್ಟು ಆಗಿದೆ, ಮತ್ತು ಎಷ್ಟು ಖರ್ಚಾಗಿದೆ ಇಲ್ಲಿ ಓವರ್ ಬಿಲ್ಲಿಂಗ್ ಆಗಿದೆ ಎನ್ನುವುದರ

ಬಗ್ಗೆ ಸಮಗ್ರವಾಗಿ ತನಿಖೆಯನ್ನು ಮಾಡಬೇಕೆಂದು ಒತ್ತಾಯವನ್ನು ಮಾಡಿದ್ದೇವೆ, ಈ ಒತ್ತಾಯದ ಬಗ್ಗೆ ಸನ್ಮಾನ್ಯ ಸದಸ್ಯರು ವಿಷಯ ಎತ್ತಿರುವುದರಿಂದ ಇದರ ಬಗ್ಗೆ ನಾನು ಆಗ್ರಹಪೂರ್ವಕವಾಗಿ ಸರ್ಕಾರ ಕೂಲಂಕಷವಾಗಿ ತನಿಖೆಯನ್ನು ನಡೆಸಬೇಕು. ವಿಷಯ ಸಮಿತಿಯಲ್ಲೂ ಕೂಡ ಸೂಚಿಸಿ ಹೇಳಿದ್ದಾರೆ. ಈ ಹಿನ್ನಲೆಯಲ್ಲಿ ಸರ್ಕಾರವು ಸಮಗ್ರವಾದ ತನಿಖೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಉಪಾಧ್ಯಕ್ಷರೆ, ಗೃಹ ಇಲಾಖೆ ಬಗ್ಗೆ ನಿನ್ನೆ ಮತ್ತು ಮೊನ್ನೆ ಇದರ ಬಗ್ಗೆ ಬಹಳಷ್ಟು ಚರ್ಚೆ ನಡೆಯಿತು. ನಾನು ಮಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದೆ ಹೇಳಿದ್ದೇನೆ. ಮೀನುಗಾರಿಕೆ ಸಚಿವರ ಬಗ್ಗೆ ನಾನು ಯಾವ ಆರೋಪವನ್ನು ಮಾಡಿರುವುದಿಲ್ಲ. ಅಧಿಕಾರಿಗಳನ್ನು ಖಾಯಂ ಆಗಿ ಒಂದೇ ಸ್ಥಳದಲ್ಲಿರುವವರನ್ನು ಗುರುತಿಸಿ ಅವರ ಆ್ಯಂಟಿಸಿಟೆಂಟ್ಸ್ ತಿಳಿದುಕೊಂಡು ವರ್ಗಾವಣೆಯನ್ನು ಮಾಡುವಂತದ್ದು ಬಹಳ ಅವಶ್ಯಕವಾಗಿರುತ್ತದೆ. ಏಕೆಂದರೆ, ಯಾರ್‍ಯಾರು ಎಲ್ಲೆಲ್ಲಿ ಸೇರಿಕೊಂಡಿದ್ದಾರೆನ್ನುವ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕು. ಮಾನ್ಯ ಸುರೇಶ್ ಕುಮಾರ್‌ರವರು ಮೊನ್ನೆ ದಿನ ಮಾತನಾಡುವಾಗ ಹೇಳಿದರು, ಕನ್ವಿಕ್ಷನ್‌ಗೆ 5 ಪರ್ಸೆಂಟ್ ಎನ್ನುವ ಬಗ್ಗೆ ಮಾಹಿತಿಯನ್ನು ಕೊಟ್ಟರು. ಇದಕ್ಕೆ ಒಂದು ಕಾರಣವಿದೆ, ನಮ್ಮಲ್ಲಿ ಒಂದು ಫೋರೆನ್ಸಿಕ್ ಲ್ಯಾಬೋರೋಟರಿ ಇದೆ (ಎಫ್‌ಎಸ್‌ಎಲ್) ಅದು ಈಗ ಸಿಕ್ ಆಗಿದೆ. ಒಂದು ಘಟನೆಯನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಬಳ್ಳಾರಿಯಲ್ಲಿ ನನ್ನ ಕ್ಷೇತ್ರದ ಒಬ್ಬ ಹುಡುಗ ನೀರಿಗೆ ಬಿದ್ದು ಸತ್ತನು. ಅವನ ತಲೆಬುರುಡೆಯನ್ನು 1996 ರಲ್ಲಿ ಫೋರೆನ್ಸಿಕ್ ಲ್ಯಾಬೋರೆಟರಿಗೆ ಕಳುಹಿಸಿದರು. ಕೊನೆಯಪಕ್ಷ ಸಂಸದೀಯ ವ್ಯವಹಾರಗಳ ಸಚಿವರು ಇದನ್ನು ಗಮನಿಸಬೇಕು. ನೀರಿಗೆ ಬಿದ್ದಿದ್ದಾನೆ ಎಂಬ ಬಗ್ಗೆ ಒಂದು ವರದಿಯಿದೆ, ಇನೊಂದು ಕಡೆ ಕೊಲೆ ಎಂದು ವರದಿಯಾಗಿದೆ. 1994 ರಲ್ಲಿ ಖರೀದಿ ಮಾಡಿದ ಎಲೆಕ್ಟ್ರಾನಿಕ್ ಸ್ಕಲ್ ಐಡೆಂಟಿಫಿಕೇಷನ್ ಡಿವೈಸ್ 1998 ರಲ್ಲಿ ಕೆಟ್ಟುಹೋಗಿದೆ. ಅದನ್ನು ಇವತ್ತಿನವರೆಗೂ ಕೂಡ ದುರಸ್ತಿ ಮಾಡಿರುವುದಿಲ್ಲ. ನಾನು ಇದರ ಬಗ್ಗೆ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಇವರಿಗೆ ದೂರವಾಣಿಯ ಮೂಲಕ ಮಾತನಾಡಿದೆ. ಇದನ್ನು ತಕ್ಷಣ ಇಲ್ಲಿ ದುರಸ್ತಿ ಮಾಡುವುದಕ್ಕಾಗುವುದಿಲ್ಲ. ಹೊರಗಡೆ ಕಳುಹಿಸಿ ದುರಸ್ಥಿ ಮಾಡಿಸುತ್ತೇನೆಂದು ಹೇಳಿದರು. ಆದರ ಬಗ್ಗೆ ಇವತ್ತಿನವರೆಗೂ ಕೂಡ ರಿಪೋರ್ಟ್ ಬಂದಿರುವುದಿಲ್ಲ. ಇದಕ್ಕೆ ಒಂದು ಸ್ಪೇರ್ ಇನ್‌ಸ್ಟ್ರುಮೆಂಟ್ ತರಬೇಕು, ಹಾಗೂ ಅಲ್ಲಿ ಇಡಬೇಕೆಂದು ಸರ್ಕಾರದ ಅಧಿಕಾರಿಗಳು ಅಲ್ಲಿರಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇವತ್ತಿನವರೆಗೂ ಅಲ್ಲಿ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅಲ್ಲಿ ಮೋಹನ್ ಎನ್ನುವ ಒಬ್ಬ ಡೈರೆಕ್ಟರ್ ಇದ್ದಾರೆ, ಅವರಿಗೆ ಇನ್ನೂ ಒಂಬತ್ತು ವರ್ಷ ಸರ್ವೀಸ್ ಇದೆ. ಆದರೆ ಬೇರೆ ರಾಜ್ಯದಲ್ಲಿ 400 ರಿಂದ 500 ಜನರಿರುವ ಸಂಸ್ಥೆಯಲ್ಲಿ ಇಲ್ಲಿ ಕೇವಲ 17 ಜನರು ಇದ್ದಾರೆ. 17 ಜನರಲ್ಲಿ

ಗುಂಪುಗಾರಿಕೆಯಾಗಿ ಕೇವಲ ಏಳು ಜನರಿಗೆ ಮಾತ್ರ ಕೆಲಸವನ್ನು ಕೊಡುತ್ತಿದ್ದಾರೆ. ಉಳಿದ 12 ಜನರಿಗೆ ಕೆಲಸವನ್ನು ಕೊಡುತ್ತಿಲ್ಲ. ಇದುವರೆಗೂ ಸರ್ಕಾರ ಈ ಬಗ್ಗೆ ಗಮನವನ್ನು ಹರಿಸಿಲ್ಲ. ಬೇರೆ ಬೇರೆ ಪೆಟ್ರೋಲ್ ಸ್ಯಾಂಪಲ್‌ನ್ನು ಕಳುಹಿಸುತ್ತಾರೆ, ಲಿಕ್ಕರ್ ಸ್ಯಾಂಪಲ್‌ಗಳನ್ನೂ ಸಹ ಕಳುಹಿಸುತ್ತಾರೆ. ಡೌರಿ ಡೆತ್ ಕೇಸ್‌ನಲ್ಲಿ ಇವೆಲ್ಲದರ ಬಗ್ಗೆ ಸ್ಯಾಂಪಲ್‌ಗಳನ್ನು ಕಳುಹಿಸುತ್ತಾರೆ. ಆದರೆ ಒಂದೇ ಒಂದು ರಿಪೋರ್ಟ್ ಇಲಾಖೆಗೆ ಬರದಿದ್ದರೆ ನಮ್ಮ ನ್ಯಾಯಾಲಯಕ್ಕೆ ಕೊಡದಿದ್ದರೆ ಇದರ ಬಗ್ಗೆ ಕನ್‌ವಿಕ್ಷನ್ ಆಗುವುದು ಹೇಗೆ? ಕನ್‌ವಿಕ್ಷನ್ ಆಗದುವುದೇ ಇಲ್ಲ. ಶ್ರೀ ಅಶ್ವತ್ಥಪ್ಪ ಎನ್ನುವವರು, ಕೊಶ್ಚನ್ ಡಾಕ್ಯುಮೆಂಟ್ ಎಕ್ಸ್‌ಪರ್ಟ್ ಅವರ ಮೇಲೆ ನ್ಯಾಯಾಲಯ ಸ್ಟ್ರಿಕ್ಚರ್ಸ್ ಪಾಸ್ ಮಾಡಿದೆ. ಇವತ್ತಿನವರೆಗೆ ಅವರ ಮೇಲೆ ಏನೂ ಕ್ರಮವನ್ನು ಕೈಗೊಂಡಿರುವುದಿಲ್ಲ. ಇಷ್ಟು ವರ್ಷಗಳವರೆವಿಗೆ ಏನು ರಿಪೋರ್ಟ್ ಕೊಟ್ಟಿದ್ದಾರೆ, ಇದನ್ನು ಬೇರೆಯಾವುದಾದರೂ ಒಂದು ಸೆಂಟರ್‌ಗೆ ಕಳುಹಿಸಿದರೆ ಅಲ್ಲಿಂದ ತಾವು ರಿಪೋರ್ಟ್‌ನ್ನು ತರಿಸಿಕೊಂಡರೆ ಪ್ರಾಯಶ: ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಫೋರೆನ್ಸಿಕ್ ಲ್ಯಾಬ್ ತಿಂಗಳಿಗೆ ಎಷ್ಟು ರಿಪೋರ್ಟ್‌ನ್ನು ಕಳುಹಿಸುತ್ತಿದೆ? ಏಕೆಂದರೆ ಬಹಳಷ್ಟು ರಿಪೋರ್ಟ್‌ಗಳನ್ನು ಕಳುಹಿಸುತ್ತಿದ್ದೇವೆಂದು ಹೆಗ್ಗಳಿಕೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಏಕೆಂದರೆ ಅವರೇನೂ ಇನ್ಸ್‌ಪೆಕ್ಷನ್ ಮಾಡುತ್ತಿಲ್ಲ ಇನ್‌ವೆಸ್ಟಿಗೇಷನ್ ಮಾಡುತ್ತಿಲ್ಲ. ಕುಳಿತಲ್ಲೇ ರಿಪೋರ್ಟ್ ಬರೆಯುತ್ತಿದ್ದಾರೆ. ಆದುದರಿಂದ ರಿಪೋರ್ಟ್ ಕೊಡಲು ಇವರಿಗೇನೂ ತೊಂದರೆಯಿಲ್ಲ. ಇಂತಹ ಸಂಸ್ಥೆಯಲ್ಲಿ ತಾವು ಗೃಹಸಚಿವರು ಸ್ವತ: ಹೋಗಿ ನೋಡಿ ತನಿಖೆ ಮಾಡಿ ಏನಾದರೂ ಕ್ರಮವನ್ನು ಕೈಗೊಳ್ಳಬೇಕು, ಏಕೆಂದರೆ, ಅಲ್ಲಿ ಒಬ್ಬರು ಎಲ್. ಪ್ರಕಾಶ್ ಎಂಬುವರು ಇದ್ದಾರೆ. ಅವರ ಮೇಲೆ ಮೆಮೋ ಇಷ್ಯೂ ಮಾಡಿದ್ದು, ಅವರು ಯಾವ ರಿಪೋರ್ಟ್‌ಗೂ ಸಹಿ ಮಾಡಬಾರದೆಂದು ಡೈರೆಕ್ಟರ್‌ರವರು ಆದೇಶ ಕೊಟ್ಟಿದ್ದಾರಂತೆ. ಇನ್ನೊಬ್ಬರು ಲೇಡಿ ಡಾಕ್ಟರ್ ಇದ್ದಾರಂತೆ, ಅವರಿಗೂ ಸಹ ಯಾವುದೇ ಪೇಪರ್ ಸಹ ಹೋಗುತ್ತಿಲ್ಲ, ಎಲ್ಲರನ್ನೂ ಬೈಪಾಸ್ ಮಾಡಿದ್ದಾರೆ. ಇತ್ತೀಚೆಗೆ ಯಾವುದೋ ಒಂದು ಕಂಪ್ಯಾರಿಸನ್ ಮೈಕ್ರೋಸ್ಕೋಪ್‌ನ್ನು 85 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಖರೀದಿಸಿದ್ದಾರೆ. ಸ್ಕ್ಯಾನಿಂಗ್ ಎಲೆಕ್ಟ್ರಾನಿಕ್ ಮೈಕ್ರೋಸ್ಕೋಪ್‌ನ್ನು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಖರೀದಿಸಿದ್ದಾರೆ. ಇವೆಲ್ಲವನ್ನು ಖರೀದಿಸಿ ಏನೊಂದು ಕೆಲಸವನ್ನು ಮಾಡುತ್ತಿಲ್ಲ. ಫೋರೆನ್ಸಿಕ್ ಲ್ಯಾಬೋರೇಟರಿ ಏನು ಸಿಕ್ ಆಗಿದೆ ಅದಕ್ಕೆ ಸ್ವಲ್ಪ ಔಷಧಯನ್ನು ಕೊಟ್ಟು ಸರಿಮಾಡುವಂತಹ ಕಾರ್ಯಕ್ರಮವನ್ನು ಸರ್ಕಾರವು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 1998ರಿಂದ ಇಲ್ಲಿಯವರೆಗೆ ಏನು ನಡೆದಿದೆ ಅದರ ಬಗ್ಗೆ ತಾವು ಸಮಗ್ರವಾಗ ತನಿಖೆಯನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಕೃಷಿಯ ಬಗ್ಗೆ ನಾನು ಕೆಲವು ವಿಷಯಗಳನ್ನು ಮಾತನಾಡಲಿಚ್ಛಿಸುತ್ತೇನೆ. ಕೃಷಿಯಲ್ಲಿ ನೀರಾದ ಬಗ್ಗೆ ಪ್ರಾಯಶ: ಮಾನ್ಯ ಅಧ್ಯಕ್ಷರು ರೂಲ್ 69ರಲ್ಲಿ ಮುಂದಿನ

ವಾರ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ. ನಮ್ಮ ಭಾಗದಲ್ಲಿ ನುಸಿರೋಗದ ಸಮಸ್ಯೆಯಿದೆ, ನಾನು ಸರ್ಕಾರವನ್ನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನೀರಾವನ್ನು ತೆಗೆಯುವುದರಿಂದ ನುಸಿರೋಗಕ್ಕೆ ಪರಿಹಾರವಲ್ಲದಿದ್ದರೂ ಸಹ ರೈತನಿಗೆ ಅದರಿಂದ ಆದಾಯವು ಬರುವುದಾದರೆ ಸರ್ಕಾರಕ್ಕೆ ಏತಕ್ಕೆ ಅವಕಾಶವನ್ನು ಕೊಡಬಾರದು? ಇದು ಶರಾಬ್ ಅಭಿವೃದ್ಧಿ ಅಲ್ಲ. ಶೇಕಡ 100ರಷ್ಟು ಸರ್ಕಾರದವರು ಸಪ್ಲೈ ಮಾಡಿರುವಂಥದ್ದು, ಎಲ್ಲಾ ಶರಾಬು ಅಂಗಡಿಯಲ್ಲಿ ಇದೆಯೇ? ಇದರ ಬಗ್ಗೆ ಒಂದು ವಿಷಯವನ್ನು ಸರ್ಕಾರವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಒಬ್ಬ ಗುತ್ತಿಗೆದಾರ ಎಷ್ಟು ಹಣವನ್ನು ಸರ್ಕಾರಕ್ಕೆ ಕಿಸ್ತು ಕಟ್ಟುತ್ತಾನೆ? ಅವನು ಎಷ್ಟು ಶರಾಬನ್ನು ಡ್ರಾ ಮಾಡುತ್ತಾನೆ? ಇದನ್ನು ತೆಗೆದುಕೊಂಡಾಗ, ಅವನು ಹಣವನ್ನು ಎಷ್ಟು ಸರ್ಕಾರಕ್ಕೆ ಕಟ್ಟುತ್ತಾನೆ ಅದಕ್ಕೆ ಸರಿಯಾಗಿ ಶರಾಬನ್ನು ಡ್ರಾ ಮಾಡುತ್ತಿಲ್ಲ. ಆದರೆ ಅವನು ಬೇರೆ ಎಲ್ಲಿಯೋ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾನೆ. ಹಾಗಾದರೆ ನೀರಾ ಯಾಕೇ? ಪ್ರಾಯಶ: ನೀರಾಕ್ಕೆ ಅವಕಾಶವನ್ನು ಕೊಟ್ಟಾಗ, ಇದರ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ, ಈ ಡ್ಯೂಪ್ಲಿಕೇಟ್ ಟ್ಯಾಡಿಯನ್ನು ಯಾರು ಉತ್ಪಾದನೆ ಮಾಡುತ್ತಾರೆ ಅವರಿಗೆ ಇದರಿಂದಾಗಿ ತೊಂದರೆಯಾಗುತ್ತದೆ. ಆದ್ದರಿಂದ ಈ ಎಕ್ಸೈಸ್ ಲಾಬಿಗೆ ಮಣಿಯದೆ ಸರ್ಕಾರದವರು ನೀರಾವನ್ನು ತೆಗೆಯುವುದಕ್ಕೆ ರೈತರಿಗೆ ಅವಕಾಶವನ್ನು ಮಾಡಿಕೊಡಬೇಕು. ಕಮರಿಪೇಟೆ, ಹುಬ್ಬಳ್ಳಿದ್ದು ವಿಸ್ಕಿ ಮತ್ತು ಬ್ರಾಂದಿ ಬರುತ್ತದೆ, ಅದರ ಬಗ್ಗೆ ಸರ್ಕಾರದವರು ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಇಂತಹ ಡ್ಯೂಪ್ಲಿಕೇಟ್ ವಿಸ್ಕಿ ಮತ್ತು ಬ್ರಾಂದಿ ಬರುವಾಗ ಅದು ಅಧಿಕಾರಿಗಳ ಗಮನಕ್ಕೆ ಬಾರದೇ ಬರುವುದಕ್ಕೆ ಸಾಧ್ಯವಿದೆಯೇ? ಇಲ್ಲಾ, ಇದನ್ನು ನಿಲ್ಲಿಸಬೇಕಾದರೆ positive will ಬೇಕಾಗುತ್ತದೆ. ಎಕ್ಸೈಸ್ ಕಾಂಟ್ರಾಕ್ಟರ್‌ಗೆ ಈಲ್ಡ್ ಆದಾಗ ಇದು ಯಾವುದನ್ನೂ ಮಾಡಲಿಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಇನ್ನು ಪವರ್ ಸೆಕ್ಟಾರ್ ಬಗ್ಗೆ ಹೇಳುವುದಾದರೆ, ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದೇನೆ. ಹಿಂದಿನ ಆಯವ್ಯಯ ಪತ್ರವನ್ನು ಮಂಡಿಸಿದಾಗ ಮಾತನಾಡಿದ್ದೇನೆ. ಅನೇಕ ವಿಷಯಗಳನ್ನು ಚರ್ಚೆ ಮಾಡಿದ್ದೇನೆ. ಆದರೆ ಸದನದಲ್ಲಿ ನನಗೆ ಉತ್ತರ ಸಿಕ್ಕಿಲ್ಲ. ನಾನು ನೇರವಾಗಿ ಕೆಲವು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಆದರೆ ಅದಕ್ಕೂ ಉತ್ತರ ಬಂದಿಲ್ಲ. ಕೊನೆಯದಾಗಿ ಈಗ ಕೆಇಆರ್‌ಸಿಗೆ ಪತ್ರವನ್ನು ಬರೆದಿದ್ದೇನೆ. ಯಾವುದಾದರೂ ಪ್ರಾಜೆಕ್ಟನ್ನು ಕ್ಲಿಯರ್ ಮಾಡುವಾಗ ನಮಗೊಂದು ಅವಕಾಶವನ್ನು ಕೊಡಬೇಕೆಂದು. ಆದರೆ ಮೊನ್ನೆ ದಿವಸ ಹೊಸ ಒಂದು ಪ್ರಾಜೆಕಟ್ಟಿಗೆ ಇದು ವಿಶೇಷವಾಗಿ ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ಬರುತ್ತದೊ ಏನೋ ನನಗೆ ಗೊತ್ತಿಲ್ಲ. ಸರ್ಕಾರ ಇದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ. ಯಾವುದೇ ಒಂದು ಹೊಸ ಪ್ರಾಜೆಕ್ಟನ್ನು ಕೊಡಬೇಕಾದರೆ, ಬಿಡ್ ರೂಟ್‌ನಲ್ಲಿ ಕೊಡಬೇಕಾಗುತ್ತದೆ. ಮಂಗಳೂರಿನಲ್ಲಿ ಒಂದು ಬಾರ್ಜ್ ಮೌಂಟೆಡ್ ಪವರ್ ಸ್ಟೇಷನ್‌ಗೆ ಪರ್ಮಿಷನ್ ಅನ್ನು ಕೊಡುತ್ತಾರೆ. ಈ

ಕೆಲಸವನ್ನು ಯುರೋ ಇಂಡಿಯ ಕಂಪನಿಯವರಿಗೆ ವಹಿಸಿದ್ದಾರೆ. ಬಾರ್ಜ್ ಮೌಂಟೆಡ್ ಪವರ್ ಸ್ಟೇಷನ್ ಅಲ್ಲಿ ಪ್ರಾರಂಭ ಮಾಡದೆ ಅದನ್ನು ಥರ್ಮಲ್ ಪ್ರಾಜೆಕ್ಟ್‌ಗೆ ಕನ್ವರ್ಟ್ ಮಾಡಲಿಕ್ಕೆ ಸರ್ಕಾರಕ್ಕೆ ಕೇಳುತ್ತಾರೆ, ಥರ್ಮಲ್ ಪ್ರಾಜೆಕ್ಟ್ ಮಾಡಲಿಕ್ಕೆ ಮಂಡ್ಯ, ಬೆಂಗಳೂರು ಭಾಗದಲ್ಲಿ ಅವಕಾಶ ಕೊಡಿಯೆಂದು ಸರ್ಕಾರವನ್ನು ಕೇಳುತ್ತಾರೆ. ಬಾರ್ಜ್ ಮೌಂಟೆಡ್ ಪವರ್ ಸ್ಟೇಷನ್ ಅನ್ನು ಥರ್ಮಲ್ ಪ್ರಾಜೆಕ್ಟ್‌ಗೆ ಕನ್ವರ್ಟ್ ಮಾಡಿದಾಗ ಅದು ಹೊಸ ಪ್ರಾಜೆಕ್ಟ್ ಆಗುತ್ತದೆ. The Government should call for fresh bid. ಅದನ್ನು ಮಾಡಲಿಲ್ಲ. ನಿನ್ನೆ ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನ ಕಂಟಿನ್ಯೂಡ್ ಬಿಡ್ ರೂಟ್ ಎಂದು ಪರಿಗಣಿಸಿ ಅವರಿಗೊಂದು ಅವಕಾಶವನ್ನು ಕೊಟ್ಟಿದ್ದೇವೆ ಎಂದು. ಅವರು ಪವರ್ ರೇಟ್ ಕಡಿಮೆ ಮಾಡುತ್ತಾರೆಂದು ಹೇಳಿದ್ದಾರೆ. ಕೆಪಿಟಿಸಿಎಲ್ ಅಧ್ಯಕ್ಷರು ರಿಪೋರ್ಟ್‌ನಲ್ಲಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಕಂಪನಿಯವರು ಸ್ಥಳವನ್ನು ಗುರುತಿಸಿಲ್ಲ, ಪ್ರಾಜೆಕ್ಟ್ ರಿಪೋರ್ಟ್ ಸಬ್‌ಮಿಟ್ ಮಾಡಿಲ್ಲವೆಂದು. Inspite of that, the Government gives permission to this. ಹಾಗಾದರೆ ಇವರು ಕಡಿಮೆ ರೇಟ್‌ನಲ್ಲಿ ಪವರ್ ಉತ್ಪತ್ತಿ ಮಾಡುವುದಾದರೆ, ಅದಕ್ಕಿಂತ ಕಡಿಮೆ ರೇಟ್‌ನಲ್ಲಿ ನಾನು ಮಾಡುತ್ತೇನೆ. ನನಗೆ ಅವಕಾಶ ಸರ್ಕಾರ ಕೊಡುತ್ತದೆಯೇ ಎಂದು ಕೇಳಲಿಕ್ಕೆ ಇಚ್ಛಿಪಡುತ್ತೇನೆ. ಈಗ ಜಿಂದಾಲ್‌ನವರಿಗೆ ಕೊಟ್ಟರು. ಅದರಲ್ಲಿ ಪರಿಸ್ಥಿತಿ ಹೀಗಿದೆ. ಒಂದು ಹೊಸ ಪ್ರಾಜೆಕ್ಟ್ ಇನ್ನೊಂದು ಕ್ಯಾಪ್ಟೀವ್ ಪವರ್‌ಗೆ ಕೆಪಿಟಿಸಿಎಲ್‌ನವರು ಒಂದು ಪ್ರಸ್ತಾವನೆಯನ್ನು ಇಡುತ್ತಾರೆ. ಹಿಂದೆ ರೇಟ್‌ನ ಬಗ್ಗೆ ಸರ್ಕಾರ ತೀರ್ಮಾನ ಮಾಡಿದೆ. ನಾವು ಅದೇ ರೀತಿ ಕೊಡುತ್ತೇವೆಂದು ಹೇಳುತ್ತಾರೆ. ಹಾಗಾದರೆ, ಇವರು ಕಮಿಟಿಯನ್ನು ಏಕೆ ಮಾಡಿದರು ರಿಪೋರ್ಟ್‌ನ್ನು ಏಕೆ ತರಿಸಿಕೊಂಡರು? ಆದರಿಂದ ಜನತೆಯ ಮೇಲೆ ಹೊರೆ ಬೀಳುತ್ತಿದೆ. 200 ಕೋಟಿ ರೂ. ಮಿಕ್ಕಿ ನಷ್ಟಾಗುತ್ತದೆ. ಇದನ್ನು ಪರಿಗಣಿಸಬೇಕು. ಯುನೋಕೋಲ್ ಬಿಡದಿಯದ್ದು ಕಡಿಮೆ ಟೆಂಡರ್ ಯಾರು ಹಾಕಿದ್ದಾರೆ ಅವರಿಗೆ ಇವರು ಕೊಡುತ್ತಿಲ್ಲ. ಜನರಲ್ ಎಲೆಕ್ಟ್ರಿಕಲ್ಸ್ ಅಮೇರಿಕಾದವರದ್ದು ಟೆಂಡರ್ ಹಾಕಿದರೆ ಸಬ್ ಸ್ಟ್ಯಾಂಡರ್ಡ್‌ದು ರಿಜೆಕ್ಟ್ ಮಾಡುತ್ತಾರೆ. ಎಬಿಬಿಗೆ ಅವಕಾಶವನ್ನು ಕೊಡುತ್ತಾರೆ. ಅವರದ್ದು ಟೆಂಡರ್ ರೇಟ್ ಇನ್ನೂ ಜಾಸ್ತಿಯಿದೆ. ಇದೆಲ್ಲವನ್ನೂ ನೋಡಿದಾಗ ಟ್ರಾನ್ಸ್‌ಪರೆನ್ಸಿಯ ಬಗ್ಗೆ ಒಂದು ಹೊಸದಾದ ವಿವರಣೆಯನ್ನು ಟ್ರಾನ್ಸ್‌ಪರೆನ್ಸಿ ಅಂದರೇನು ಎಂದು ಸರ್ಕಾರ ಕೊಡಬೇಕಾಗುತ್ತದೆ. ಇನ್ನೊಂದು ಮುಖ್ಯವಾಗಿ ಪವರ್ ಸೆಕ್ಟಾರ್‌ನಲ್ಲಿ ಹೇಳಬೇಕಾದರೆ, ನಿನ್ನೆ ಒಬ್ಬರು ಇಂಜಿನಿಯರ್ ಕಂಪ್ಲೈಂಟನ್ನು ಕೊಡುತ್ತಾರೆ. ದೆಹಲಿಯ ಒಂದು ಸಂಸ್ಥೆ ನನಗೆ ಚಿನ್ನದ ನಾಣ್ಯಗಳನ್ನು ಲಂಚ ಕೊಡಲಿಕ್ಕೆ ಬಂದು, ಆ ಬಗ್ಗೆ ಕೆಪಿಟಿಸಿಎಲ್ ಅಧ್ಯಕ್ಷರ ಜೊತೆಯಲ್ಲಿ ನೇರವಾಗಿ ದೂರವಾಣಿ ಮೂಲಕ ಮಾತನಾಡಿದಾಗ ಅವರು ಪೋಲೀಸ್ ಕಂಪ್ಲೈಂಟ್ ಕೊಡಿಯೆಂದು ಹೇಳುತ್ತಾರೆ. ಅವರ ಆದೇಶದ ಮೇರೆಗೆ ಇಂಜಿನಿಯರ್ ಪೋಲೀಸ್ ಕಂಪ್ಲೆಂಟನ್ನು ಕೊಡುತ್ತಾರೆ. ಆ ಕೇಸಿನಲ್ಲಿ "ಬಿ" ರಿಪೋರ್ಟ್‌ನ್ನು ಹಾಕಿ ಪುನ: ಅವರಿಗೆ

ಆರ್ಡರ್‌ನ್ನು ಪ್ಲೇಸ್ ಮಾಡುತ್ತಾರೆ. ಹಾಗಾದರೆ ಇವರು ಹೇಳಿದ್ದು ಸುಳ್ಳು ಎಂದಾದರೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೆಪಿಟಿಸಿಎಲ್ ಅಧ್ಯಕ್ಷರು ಇಂಜಿನಿಯರ್‌ಗೆ ಹೇಳಿ ಕಂಪ್ಲೈಂಟ್ ಕೊಟ್ಟಿದ್ದು ಸುಳ್ಳು ಎಂದು ಆದರೆ ಅಧಿಕಾರಿಗಳಿಗೆ ಯಾರಾದರೂ ಲಂಚ ಕೊಡಲಿಕ್ಕೆ ಬಂದಾಗ ಕಂಪ್ಲೈಂಟನ್ನು ಕೊಡಲಿಕ್ಕೆ ಯಾರು ಧೈರ್ಯವನ್ನು ಮಾಡುತ್ತಾರೆಂದು ಸದನದಲ್ಲಿ ತಿಳಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ರಿಸೋರ್ಸ್ ಮೊಬಲೈಸೇಷನ್ ಬಗ್ಗೆ ಒಂದೆರಡು ವಿಷಯವನ್ನು ಹೇಳಬಯಸುತ್ತೇನೆ. ಯೋಜನಾ ಮಂತ್ರಿಗಳು ಇಲ್ಲೇ ಇದ್ದಾರೆ. ಮಾನ್ಯ ಪಾಟೀಲ್‌ರವರು ಆಯವ್ಯಯದ ಬಗ್ಗೆ ಸುಮಾರು ಮಾತನಾಡಿದರು. ನಾನು ಓದುವಾಗ ಒಂದು ಕಡೆ ಇದು ಸಿಕ್ಕಿತು. It is the planned economy where everything is included in the Plan, except the economy. ಹಣ ಬಿಟ್ಟು ಬೇರೆ ಎಲ್ಲಾ ಇದೆ. ಇದನ್ನು ಸರಿಪಡಿಸಲಿಕ್ಕೆ ನಮ್ಮಲ್ಲಿ ಒಂಜದು ಪ್ಲಾನಿಂಗ್ ಬೋರ್ಡ್ ಇದೆ. ಪ್ಲಾನಿಂಗ್ ಬೋರ್ಡ್‌ನ ಅಧ್ಯಕ್ಷರೊಬ್ಬರು ಇದ್ದಾರೆ, ಬೋರ್ಡ್ ಕಾನ್ಸ್ಟಿಟ್ಯೂಟ್ ಆಗಿಲ್ಲ. ಪ್ಲಾನಿಂಗ್ ಬೋರ್ಡ್ ಒಂದು ಇದೆ. ಅಧ್ಯಕ್ಷರು ಇದ್ದಾರೆ, ಡೆಪ್ಯೂಟಿ ಛೇರ್ಮನ್ ಇದ್ದಾರೆ. ಆದರೆ ಡೆಪ್ಯೂಟಿ ಛೇರ್ಮನ್, he is planning everything except the State's economy ಇದನ್ನು ನೋಡಲಿಕ್ಕೆ ಅವರಿಗೆ ಅವಕಾಶವಿಲ್ಲ. ಒಂದು ಸಭೆ ಆಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಹಾಗಾದರೆ ಪ್ಲಾನಿಂಗ್ ಬೋರ್ಡ್ ಏತಕ್ಕೆ? ಒಂದು ವೇಳೆ ಅವರಿಗೆ ಇದನ್ನು ನೋಡಲಿಕ್ಕೆ ಸಮಯ ಇಲ್ಲದಿದ್ದರೆ ಬೇರೆಯವರಿಗೆ ಅವಕಾಶ ಮಾಡಿಕೊಡಬಹುದು. ನಮ್ಮ ಸಮಿತಿಯಲ್ಲಿ ಚರ್ಚೆಯಾಯಿತು, ಅವರು ಸಂಬಳವನ್ನು ತೆಗೆದುಕೊಂಡಿಲ್ಲವೆಂದು. ಅದು ಮುಖ್ಯವಲ್ಲ. ಅವರು ಸಂಬಳವನ್ನಾದರೂ ತೆಗೆದುಕೊಳ್ಳಲಿ ಬಿಡಲಿ, ರಾಜ್ಯದ ಹಿತದೃಷ್ಟಿಯಿಂದ ಏನೇನು ಆಗಬೇಕಾಗಿದೆ ಅದರ ಬಗ್ಗೆ ಅವರು ಹೆಚ್ಚಿನ ಗಮನವನ್ನು ಹರಿಸಬೇಕು.

ಇನ್ನು ಸಣ್ಣ ನೀರಾವರಿ ಇಲಾಖೆಯ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಭೆಯನ್ನು ಮಾಡಿದರು. ನಮಗೆಲ್ಲಾ ಬಹಳ ಸಂತೋಷವಾಯಿತು. ಸಮುದ್ರಕ್ಕೆ ಹೋಗುವ ನೀರನ್ನು ತಡೆದು, ಈ ಭಾಗದಲ್ಲಿ ಕೃಷ್ಣಾ ಕಾವೇರಿ ಕಾರ್ಯಕ್ರಮಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ನಮ್ಮ ಭಾಗಕ್ಕೆ ವರಾಹಿ ಇದೆ. ಅದು ಇನ್ನೂ ನಮಗೆ ಬಂದೇ ಇಲ್ಲ. ಬರೀ ಹೇಳಿಕೆಗಳನ್ನು ನೋಡುವುದನ್ನು ಬಿಟ್ಟರೆ ಸಣ್ಣ ನೀರಾವರಿಗೆ ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟು ಸಾಲ್ಟ್ ವಾಟರ್ ಎಕ್ಸ್‌ಕ್ಲೂಷನ್ ಡ್ಯಾಮ್ ಮಾಡಲಿಕ್ಕೆ ಸ್ವಲ್ಪ ಖರ್ಚು ಇದೆ. ಅದು ಅವರ ಕಾರ್ಯಕ್ರಮದಲ್ಲಿದೆ. ಪ್ರಾಯಶ: ನಮ್ಮ ಭಾಗದಲ್ಲಿ ಮೇಜರ್ ಇರಿಗೇಷನ್ ಯಾವುದೂ ಬೇಕಾಗುವುದಿಲ್ಲ. ಆ ರೀತಿ ಮಾಡಿದರೆ ಎಲ್ಲಾ ಭಾಗದಲ್ಲಿ ಜಲ ಮೇಲೆ

ಬರಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡುವುದನ್ನು ಬಿಟ್ಟು ನಮ್ಮಲ್ಲಿ ಕೆಲವು ವೆಂಟೆಡ್ ಡ್ಯಾಮ್‌ಗಳನ್ನು ಮಾಡುವ ಬಗ್ಗೆ ಮಾನ್ಯ ಸಚಿವರನ್ನು ಕೇಳಿದೆ, ಅನುದಾನ ಇಲ್ಲವೆಂದು ಹೇಳುತ್ತಾರೆ. ಆದರೆ ಮಾನ್ಯ ಪಾಟೀಲ್‌ರವರು ಹೇಳಿದರು ನಮ್ಮ ರಾಜ್ಯದಲ್ಲಿ ಎಲ್ಲಾ ಭಾಗದಲ್ಲಿ ಮುಖ್ಯವಾಗಿ ಬೇಕಾಗಿರುತಕ್ಕದ್ದು ಸಣ್ಣ ನೀರಾವರಿ. ಕೆರೆ ಹೂಳೆತ್ತುವಂತದ್ದು, ಚೆಕ್‌ಡ್ಯಾಮ್ಸ್ ಕಟ್ಟುವಂತಹದ್ದು ಇದನೆಲ್ಲಾ ಮಾಡಿದಾಗ ನಿಜವಾಗಿಯೂ ಗ್ರಾಮೀಣ ಪ್ರದೇಶದ ರೈತರಿಗೆ ತುಂಬ ಸಹಾಯವಾಗುತ್ತದೆ. ಎಲ್ಲಿಯಾದರೂ ಅಲ್ಪಸ್ವಲ್ಪ ಮಳೆ ಬಂದರೂ ನೀರನ್ನು ಸಂಗ್ರಹ ಮಾಡಲಿಕ್ಕೆ ಅವಕಾಶವಾಗುತ್ತದೆ. ಅದಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೇಳಿಕೊಳ್ಳುವುದೇನೆಂದರೆ, ಸಣ್ಣ ನೀರಾವರಿ ಇಲಾಖೆಗೆ ಇನ್ನು ಹೆಚ್ಚಿನ ಅನುದಾನವನ್ನು ಕೊಟ್ಟು ಕೆಲಸಕಾರ್ಯಗಳನ್ನು ಮಾಡಬೇಕು. ನಮ್ಮ ಭಾಗದಲ್ಲಿ ಸ್ಟ್ರೀಮ್ಸ್ ಎಲ್ಲಾ ಇದೆ ಅದನ್ನು ಡೀಸಿಲ್ಟ್ ಮಾಡಲಿಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಸ್ಟ್ರೀಮ್ಸ್ ಎಲ್ಲಾ ನೆಲದ ಮಟ್ಟಕ್ಕೆ ಬಂದಿದೆ. ಈ ಸಾರಿ ಹೆಚ್ಚು ಮಳೆಯೆಂದು ಹೇಳುತ್ತಾರೆ. ರಿಪೋರ್ಟ್‌ನಲ್ಲಿ ನಾರ್ಮಲ್ ಎಂದು ಇದೆ. ಆದರೆ ನಾವು ಒಂದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಬಿದ್ದ ಮಳೆಯ ನೀರೆಲ್ಲಾ ಸಮುದ್ರಕ್ಕೆ ಹೋಗುತ್ತದೆ. ಮಲೆನಾಡಿನ ಘಾಟಿನ ಮೇಲೆ ಬಂದಂತಹ ನೀರು ಮಾತ್ರ ಅಲ್ಲಿ ಸ್ವಲ್ಪ ಬಂದು ಅಂತರ್ಜಲ ಮಟ್ಟ ಏರಲಿಕ್ಕೆ ಸಹಾಯವಾಗುತ್ತದೆ. ನಾನು ಖಂಡಿತವಾಗಿಯೂ ಹೇಳುತ್ತೇನೆ, ಇದರ ಬಗ್ಗೆ ಜಾಗ್ರತೆಯನ್ನು ವಹಿಸದಿದ್ದರೆ ಮುಂದಿನ ತಿಂಗಳುಗಳಲ್ಲಿ ನಾವು ಕುಡಿಯುವ ನೀರಿನ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇವತ್ತು ಮಳೆ ಬಂದಿದೆ ಎಂದು ಸಂತೋಷಪಡುವ ಅವಶ್ಯಕತೆಯಿಲ್ಲ. ಇವತ್ತೂ ಕೂಡ ನಮ್ಮಲ್ಲಿ ಬಿಟ್ಟಿಗದ್ದೆ ಮಕ್ಕಿಯೊಂದು ಹೇಳುತ್ತೇನೆ. ಏರು ಪ್ರದೇಶಗಳಲ್ಲಿ ಸಾಗುವಳಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಬರಪೀಡಿತ ಪ್ರದೇಶಗಳ ಬಗ್ಗೆ ಯಾವ ರೀತಿಯ ಗಮನವನ್ನು ಹರಿಸಿದ್ದೇವೆ ಅದೇರೀತಿಯಲ್ಲಿ ನಮ್ಮ ಭಾಗದ ಕಡೆ ಸ್ವಲ್ಪ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಸಣ್ಣ ಕೈಗಾರಿಕೆಗಳ ಸಚಿವರು ಸದನದಲ್ಲಿ ಇಲ್ಲ. ಅವರು ಇದ್ದಿದ್ದರೆ ಎರಡು ವಿಷಯ ಮಾತನಾಡಬಹುದಿತ್ತು. ಅವರ ಭಾಗದಲ್ಲಿ ಟೆಂಡರ್ ಕರೆಯುವಂತಹದ್ದು ಟೆಂಡರ್ ಬಾಕ್ಸ್‌ಗೆ ನೀರು ಹಾಕುವಂತಹದ್ದು, ಟೆಂಡರ್ ಬಾಕ್ಸ್‌ಗೆ ಟೆಂಡರ್ ಹಾಕುವಾಗ ಅಟ್ಟಿಸಿಕೊಂಡು ಹೋಗುವಂತಹದ್ದು ಇದರ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಯಾಗಿದೆ. ಕೆಳಮನೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿಲ್ಲ. ಆದರೆ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ನಾವು ಮಾನ್ಯ ಮಂತ್ರಿಗಳಾದ ಹೆಚ್.ಕೆ. ಪಾಟೀಲ್‌ರವರ ಗಮನಕ್ಕೆ ದೂರವಾಣಿಯ ಮುಖಾಂತರ ಒಂದು ವಿಚಾರವನ್ನು ತಂದೆ. ಅವೊತ್ತು ಕೆಲವರಿಗೆ ಟೆಂಡರ್ ಬಾಕ್ಸ್‌ಗೆ ಟೆಂಡರ್ ಹಾಕಲಿಕ್ಕೆ ಬಿಡಲಿಲ್ಲ. ಆಮೇಲೆ ಸಚಿವರು ಎಂ.ಡಿ.ಯವರಿಗೆ ಫೋನ್ ಮಾಡಿ ಅವಕಾಶವನ್ನು ಮಾಡಿಕೊಟ್ಟರು. ಇಂತಹ ಪರಿಸ್ಥಿತಿ ನಿರ್ಮಾಣವಾಗದ ಹಾಗೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇನ್ನೂ ಹೆಚ್ಚಿನ ಗಮನವನ್ನು ಹರಿಸಬೇಕು. ಸಣ್ಣ ಕೈಗಾರಿಕಾ

ಇಲಾಖೆಯಲ್ಲಿ ಸಬ್ಸಿಡಿಯನ್ನು ಕೊಡಲಿಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಬೇರೆ ಬೇರೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ, ಬಾಂಡ್‌ಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಪ್ರಾಯಶಃ ಬಾಂಡ್‌ನ್ನು ಕೊಟ್ಟರೆ ತೊಂದರೆಯಿಲ್ಲ. ಅದರ ಮೇಲೆ ಬ್ಯಾಂಕಿನಿಂದ ಲೋನನ್ನು ತೆಗೆಯಲಿಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಬಾಂಡುಗಳನ್ನು 10-20 ವರ್ಷಗಳ ಕಾಲ ಇಟ್ಟುಕೊಂಡರೆ ಅವನು ಬಡ್ಡಿಯನ್ನು ಕಟ್ಟುತ್ತಾ ಹೋಗುವಂತಹದ್ದು ಅವನ ಯೂನಿಟ್ ಕ್ಲೋಸ್ ಆದಮೇಲೆ ಈ ಗ್ಲೋಬಲೈಸೇಷನ್, ಲಿಬರಲೈಸೇಷನ್‌ನಿಂದಾಗಿ ಭಾರತದಲ್ಲಿ ಎಲ್ಲಾ ಉದ್ದಿಮೆಗಳು ಬಂದ್ ಆಗುತ್ತಾ ಬಂದಿದೆ. ಇವತ್ತು ಪತ್ರಿಕೆಯಲ್ಲಿದೆ. ಚೈನಾದಿಂದ ಕಡಿಮೆ ದರದಲ್ಲಿ ಮೋಟರ್‌ಸೈಕಲ್‌ಗಳು ಕಮ್ಮಿ ದರದಲ್ಲಿ ಬಂದರೆ ಪ್ರಾಯಶಃ ಒಂದು ರೀತಿಯಲ್ಲಿ ನಾವು ತಪ್ಪು ಮಾಡಿದ್ದೇವೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಏಕೆಂದರೆ ಇಷ್ಟು ವರ್ಷಗಳ ಕಾಲ ನಮ್ಮ ಉದ್ದಿಮೆಯವರು, ಮೋಟಾರ್ ಕಂಪನಿಯವರು ಸಹ ಅಂಬಾಸಿಡರ್, ಫಿಯಟ್ ಕಾರುಗಳನ್ನು ಕೊಟ್ಟು ನಮಗೆ ಒಂದು ರೀತಿಯಲ್ಲಿ ಮೋಸವನ್ನು ಮಾಡಿಕೊಂಡು ಬಂದಿದ್ದರು. ಈ ಕಾರುಗಳಿಗೆ ಅಷ್ಟು ಹಣವನ್ನು ಕೊಡುತ್ತಿದ್ದೆವು. ಕೆಲವು ಕಾರುಗಳಿಗೆ ಹಣ ಜಾಸ್ತಿ ಕೊಟ್ಟರೂ ಕೂಡ ಮೈನ್‌ಟನೆನ್ಸ್ ಎಕ್ಸ್‌ಪೆಂಡೀಚರ್ ಇಲ್ಲ. ಅದನ್ನು ಇವರೇ ಹಿಂದೆ ಮಾಡಿಬಿಟ್ಟಿದ್ದರೆ ಹೊರಗಡೆಯಿಂದ ಮೋಟಾರ್‌ಗಳು ಇಲ್ಲಿ ಬರುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಇಂತಹ ವಿಷಯಗಳ ಬಗ್ಗೆ ನಾವು ಗಮನ ಹರಿಸದಿದ್ದರೆ ಮುಂದಿನ ದಿವಸಗಳಲ್ಲಿ ಸಣ್ಣ ಕೈಗಾರಿಕೆಗಳು ಬಂದ್ ಆಗುವಂಥ ಸ್ಥಿತಿ ಇದೆ. ಆದರೆ ಅವರ ಹತ್ತಿರ ಪ್ರಶ್ನೆಯನ್ನು ಕೇಳಿದಾಗ, ಸಿಕ್ ಯೂನಿಟ್ಸ್ ಎಷ್ಟು ಇವೆ ಎಂದು ನಮ್ಮ ಶಾಸಕರು ಕೆಲವರು ಕೇಳಿದರು. ಅದರಲ್ಲಿ ಅವರು ಒಂದು ಐದು ಪರ್ಸೆಂಟ್ ಸಹ ಸಿಕ್ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದರು. ಹಾಗಾದರೆ ಇವರಲ್ಲಿ ಕೆ.ಎಸ್.ಎಫ್.ಸಿ.ಯಿಂದ ಲೋನ್ ತೆಗೆದುಕೊಂಡು ಸಿಕ್ ಆಗಿದ್ದರೆ ಬಗ್ಗೆ ಮಾತ್ರ ಮಾಹಿತಿ ಇರುವಂಥಾದ್ದು. ಅದು ಬಿಟ್ಟರೆ ಬೇರೆ ರಾಷ್ಟ್ರೀಕೃತ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳಿಂದ ಏನು ಸಾಲ ತೆಗೆದುಕೊಂಡಿದ್ದು ಸಿಕ್ ಆಗಿವೆ, ಆ ಸಂಖ್ಯೆ ಬಹಳ ಇದೆ. ನನ್ನ ಅಭಿಪ್ರಾಯದ ಪ್ರಕಾರ ಶೇಕಡಾ 75ರಿಂದ 80 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ಇವತ್ತು ರೋಗಗ್ರಸ್ತವಾಗಿವೆ. ಇದರ ಬಗ್ಗೆ ಇವರು ಏನು ಗಮನವನ್ನು ಹರಿಸಿದ್ದಾರೆ ಎಂಬುದನ್ನು ನಾವು ಆಲೋಚನೆ ಮಾಡುತ್ತಾ ಇದರ ಬಗ್ಗೆ ಹೆಚ್ಚು ಗಮನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಬೆಲ್ ಹೊಡೆದಾದಮೇಲೆ ನಾನುಮಾತನಾಡುವುದಿಲ್ಲ. ಏಕೆಂದರೆ ಹಿರಿಯರು ಮಾತನಾಡುವಾಗ ನೀವು ಫೋರ್ಸ್ ಮಾಡಿ ನಿಲ್ಲಿಸುತ್ತೀರಿ...

ಉಪಾಧ್ಯಕ್ಷರು :— ಆ ತರಹ ಅಲ್ಲ. ಈಗ ಮಧ್ಯಾಹ್ನದ ವಿರಾಮ ವೇಳೆ ಆಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ನೀವು ಮುಗಿಸುವುದಾದರೆ ಇನ್ನೂ ಹತ್ತು ನಿಮಿಷ ಕುಳಿತುಕೊಳ್ಳೋಣ ಅಥವಾ ವಿರಾಮದ ನಂತರ ಬೇಕಾದರೆ ಮಾತನಾಡಬಹುದು ಎಂದು ನಾನು ಹೇಳುತ್ತಿದ್ದೆ...

ಮಾನ್ಯ ಸದಸ್ಯರು :— ಅವರು ಮುಗಿಸಿಬಿಟ್ಟಿದ್ದಾರೆ.

ಉಪಾಧ್ಯಕ್ಷರು :— ಮುಗಿಸಿದ್ದರೆ ಪರವಾಗಿಲ್ಲ. ಈಗ ಸದನವನ್ನು ಮೂರುಗಂಟೆ ವೇಳೆಗೆ ಮುಂದೂಡುತ್ತಿದ್ದೇನೆ.

(2 ಗಂಟೆ 2 ನಿಮಿಷಕ್ಕೆ ಸದನ ಮುಂದೂಡಲ್ಪಟ್ಟು ಪುನ: ಮಧ್ಯಾಹ್ನ 3 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು 3-10 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್) ರವರು ಅಧ್ಯಕ್ಷ ಪೀಠದಲ್ಲಿದ್ದರು)

+ ಶ್ರೀ ಎಸ್.ಎಚ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಅಧ್ಯಕ್ಷರೇ, ಈ ಮುಂಗಡ ಪತ್ರದ ಮೇಲೆ ನಾನು ನನ್ನ ಚರ್ಚೆಯನ್ನು ಪ್ರಾರಂಭಿಸುತ್ತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಉತ್ಸವಗಳನ್ನು ನಡೆಸುವುದಕ್ಕೆ ಸರ್ಕಾರದವರು ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಆದರೆ ಅದನ್ನು ಎಲ್ಲಾ ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಮಾಡುವಂತಹ ವ್ಯವಸ್ಥೆ ಇಲ್ಲ. ಅವರು ಯಾವ ಯಾವುದೋ ಸಂದಂರ್ಭಗಳಲ್ಲಿ ಒಂದೊಂದು ಜಿಲ್ಲೆಯಲ್ಲಿ ಮಾಡುತ್ತಾರೆ, ಒಂದೊಂದು ಜಿಲ್ಲೆಯಲ್ಲಿ ಆ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವುದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಅಧಿಕಾರಿಗಳ ಕೊರತೆ ಇರುವುದರಿಂದ ಅಲ್ಲಿ ಇಂತಹ ಒಂದು ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ ಮತ್ತು ಅವರು ಇದನ್ನು ಮಾಡುವಾಗ ಒಂದು ಸರ್ಕಾರಿ ಕಾರ್ಯಕ್ರಮದ ರೀತಿಯಲ್ಲಿ ಮಾಡುತ್ತಿದ್ದಾರೆ. ಅದರ ಬದಲು ಅಲ್ಲಿ ಇರುವ ಸಂಘ-ಸಂಸ್ಥೆಗಳು ಮತ್ತು ಅಲ್ಲಿರತಕ್ಕಂಥ ಸ್ವಯಂ ಸೇವಾ ಸಂಸ್ಥೆಗಳನ್ನು ಇನ್‌ವಾಲ್ವ್ ಮಾಡಿಕೊಂಡು ಜಿಲ್ಲಾ ಮಟ್ಟದಲ್ಲಿ ಎರಡು ಮೂರು ದಿನದ ಕಾರ್ಯಕ್ರಮ ಮಾಡಿದರೆ ಅದು ಸಮರ್ಪಕವಾಗಿ ಮತ್ತು ವ್ಯವಸ್ಥಿತವಾಗಿ ಆಗುತ್ತದೆ ಎನ್ನುವ ಒಂದು ವಿಚಾರವನ್ನು ತಿಳಿಸುತ್ತಾ, ಅದೇ ರೀತಿಯಲ್ಲಿ ಬಯಲು ರಂಗಮಂದಿರಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ತೆರೆಯಬೇಕು, ಅದೂ ಅಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬೇಕಾದಷ್ಟು ಕಾರ್ಯಕ್ರಮಗಳು ಘೋಷಣೆಗಳು ನಡೆಯುತ್ತಿರುತ್ತವೆ. ಅದರಲ್ಲಿ ಕಾರ್ಯರೂಪಕ್ಕೆ ಬರುವುದು ಕೆಲವೇ ಕೆಲವು ಮಾತ್ರ. ಅವು ಬರೀ

ಪ್ರಚಾರದಲ್ಲಿರುವಂತಹ ಒಂದು ಸನ್ನಿವೇಶ ಮಾತ್ರ ಇದೆ. ಕಲಾವಿದರಿಗೆ ಮತ್ತು ಸಾಹಿತಿಗಳಿಗೆ ಮಾಶಾಸನ ಕೊಡುವಂತಹ ಒಂದು ವ್ಯವಸ್ಥೆಗೆ 3600 ರೂಪಾಯಿಗಳು ಎಂದು ಅವರ ಆದಾಯದ ಮಿತಿಯನ್ನು ನಿಗದಿಗೊಳಿಸಿದ್ದಾರೆ. ಇವತ್ತು 3600 ರೂಪಾಯಿಗಳು ಏನೇನೂ ಅಲ್ಲ. ಆದ್ದರಿಂದ ಅವರ ಆದಾಯಾದ ಮಿತಿಯನ್ನು ಕನಿಷ್ಠಪಕ್ಷ 18 ಸಾವಿರ ರೂಪಾಯಿಗಳಿಗಾದರೂ ಏರಿಸಿದರೆ ಬಹಳಷ್ಟು ಜನ ಕಲಾವಿದರು ಮತ್ತು ಸಾಹಿತಿಗಳು ಆ ಮಾಸಾಶನವನ್ನು ಪಡೆಯುವುದಕ್ಕೆ ಎಲಿಜಿಬಿಲಿಟಿ ಬರುತ್ತದೆ. ಸರ್ಕಾರ ಸುಮಾರು8-10 ಅಕಾಡೆಮಿಗಳನ್ನು ರಚನೆ ಮಾಡಿ ಅದಕ್ಕೆ ಅಧ್ಯಕ್ಷರುಗಳನ್ನು ನೇಮಕ ಮಾಡುತ್ತಾರೆ. ಅವು ಲಲತಕಲಾ ಅಕಾಡೆಮಿ ಇರಬಹುದು, ಜಾನಪದ ಅಕಾಡೆಮಿ ಇರಬಹುದು, ನಾಟಕ ಅಕಾಡೆಮಿ ಇರಬಹುದು, ಇವುಗಳಿಗೆ ಬಹಳ ಪ್ರಚಾರ ಸಿಗುತ್ತಿದೆ. ಆದರೆ ಅವರು ಆ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಸಾಕಷ್ಟು ಧನ ಸಹಾಯವನ್ನು ಬಜೆಟ್‌ನಲ್ಲಿ ಪ್ರಾವಿಜನ್ ಮಾಡದೇ ಇರುವುದರಿಂದ ಅವರು ಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರತಿಯೊಂದು ಅಕಾಡೆಮಿಗಳಿಗೆ ಅಧ್ಯಕ್ಷರಾಗಲು ಪೈಪೋಟಿ ಇದೆ. ಅಧ್ಯಕ್ಷರಾದವರು ಅಲ್ಲಿ ಸಮರ್ಪಕವಾಗಿ ಅಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಮತ್ತು ಈ ಗಡಿನಾಡು ಸಮಸ್ಯೆಯ ಬಗ್ಗೆ ಅಧ್ಯಯನ ಮಾಡಲು ಒಂದು ಆಯೋಗವನ್ನು ರಚನೆ ಮಾಡಿ ಅದನ್ನು ಇದ್ದಕಿದ್ದ ಹಾಗೆ ಆ ಆಯೋಗವನ್ನು ರದ್ದುಪಡಿಸಿದರು, ಅವರು ಮಧ್ಯಕಾಲಿಕ ಒಂದು ವರದಿಯನ್ನು ಸಲ್ಲಿಸುದರು, ಆ ವರದಿ ಏನಾಯಿತು? ಆ ವರದಿ ಮೇಲೆ ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕ್ರೊಂಡರು ಎನ್ನುವ ಬಗ್ಗೆ ಸರ್ಕಾರ ಈ ಮುಂಗಡ ಪತ್ರದಲ್ಲಿ ಪ್ರಸ್ತಾಪ ಮಾಡಿಲ್ಲ. ಆ ವರದಿ ಏನಾಗಿದೆ ಎನ್ನುವುದನ್ನು ಸರ್ಕಾರ ತಿಳಿಸಬೇಕು. ಮತ್ತು ಈ ಆಯೋಗವನ್ನು ಸರ್ಕಾರ ಮುಂದುವರಿಸುತ್ತೀರಾ ಅಥವಾ ಅಲ್ಲಿಗೆ ಕೊನೆಗೊಳಿಸುತ್ತೀರಾ ಎನ್ನುವ ವಿಚಾರವನ್ನು ಸರ್ಕಾರ ತಿಳಿಸಬೇಕು. ಅದರ ಜೊತೆಗೆ ಮೈಸೂರು ನಗರದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಎಂದು ಹೇಳಿ ಇದೆ. ಈ ಪ್ರಾಧಿಕಾರ ಮೈಸೂರು ದಸರಾ ಸಂದರ್ಭದಲ್ಲಿ ಕೆಲಸ ಮಾಡುವುದನ್ನು ಬಿಟ್ಟರೆ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಆಗಲಿ ಅಥವಾ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಆಗಲಿ ಬೆಂಗಳೂರು ನಗರದಲ್ಲಿ ಆಗಲಿ ಈ ರೀತಿ ವಸ್ತು ಪ್ರದರ್ಶನದ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಈ ದಸರಾ ವಸ್ತು ಪ್ರದರ್ಶನದವರು ಪ್ರತಿ ವರ್ಷ ಮಳಿಗೆಗಳನ್ನು ಆಕ್ಷನ್ ಮಾಡುವುದು, ಮಳಿಗೆಗಳನ್ನು ನಿರ್ಮಾಣ ಮಾಡುವುದು, ಇದೇ ಒಂದು ಪರಿಪಾಠವಾಗಿದೆ. ಇದನ್ನು ತಪ್ಪಿಸಿ ಪ್ರತಿ ವರ್ಷ ದಸರಾ ಉತ್ಸವ ಪ್ರಾರಂಭವಾದಂತಹ ಸಂದರ್ಭದಲ್ಲಿ ಉದ್ಘಾಟನೆ ಮಾಡುವಂತಹ ಸಂದರ್ಭದಲ್ಲಿ ಒಂದು ಘೋಷಣೆಯನ್ನು ಮಾಡುತ್ತಾರೆ, ಅದೇನೆಂದರೆ ಇದನ್ನು ಪ್ರಗತಿ ಮೈದಾನ್ ಮಾದರಿಯಲ್ಲಿ ಖಾಯಂ ವಸ್ತು ಪ್ರದರ್ಶನ ಮಾದರಿಯಲ್ಲಿ ಮೈಸೂರು ನಗರದಲ್ಲಿ ಮಾಡುತ್ತೇವೆಂದು ಹೇಳುತ್ತಾರೆ. ಮೈಸೂರು ನಗರಕ್ಕೆ ಪ್ರತಿ ವರ್ಷ

ದಸರಾ ಸಂದರ್ಭದಲ್ಲಿ ಅಸಂಖ್ಯಾತ ವೀಕ್ಷಕರು ವಿದೇಶಗಳಿಂದ ಬರುತ್ತಾರೆ. ಅಂತಹ ಒಂದು ಸಂದರ್ಭದಲ್ಲಿ ಮೈಸೂರು ನಗರದಲ್ಲಿ ವಸ್ತು ಪ್ರದರ್ಶನ ಏನು ಇದೆ ಅದನ್ನು ಖಾಯಂ ವಸ್ತುಪ್ರದರ್ಶನವನ್ನಾಗಿ ನಿರ್ಮಾಣ ಮಾಡಿದರೆ ಅನುಕೂಲವಾಗುತ್ತದೆ. ಪ್ರತಿವರ್ಷ ಮಳಿಗೆಗಳನ್ನು ಆಕ್ಷನ್ ಮಾಡುವುದು, ನಿರ್ಮಾಣ ಮಾಡುವುದು ಇದೇ ಕಾಮಗಾರಿಯ ಕೆಲಸ ಮಾಡುತ್ತಿದ್ದಾರೆ, ಆದಕ್ಕಾಗಿಯೇ ಕೆಲವು ಗುತ್ತಿಗೆದಾರರು ವಸ್ತುಪ್ರದರ್ಶನ ಪ್ರಾಧಿಕಾರದಲ್ಲಿ ಖಾಯಂ ಗುತ್ತಿಗೆದಾರರಾಗಿಯೇ ಉಳಿದುಬಿಟ್ಟಿದ್ದಾರೆ. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರವು ಮೈಸೂರಿಗೆ ಮಾತ್ರ ಸೀಮಿತವಾಗಿದ್ದು ಇದು ರಾಜ್ಯದ ಎಲ್ಲಾ ಕಡೆ ಆಗಬೇಕು. ಬೇರೆ ಬೇರೆ ರಾಜ್ಯದಲ್ಲಿ ಪ್ರವಾಸ್ಯೋದ್ಯಮಕ್ಕೆ ಹೆಚ್ಚು ಒತ್ತುಕೊಟ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಪ್ರವಾಸ್ಯೋದ್ಯಮಕ್ಕೆ ಸಾಕಷ್ಟು ಸಿರಿ ಮಲೆನಾಡು ಪ್ರದೇಶದಲ್ಲಿದ್ದರೂ ಕೂಡ ಅದನ್ನು ಸಮರ್ಪಕವಾಗಿ ಬಳಸಿಕೊಂಡು ಪ್ರವಾಸ್ಯೋದ್ಯಮವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತಿಲ್ಲ. ಪ್ರವಾಸ್ಯೋದ್ಯಮಕ್ಕೆ ಕೊಟ್ಟಿರುವ ಅನುದಾನ ಬಹಳ ಕಡಿಮೆ ಇದೆ. ನಮ್ಮ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹಿಮದ್ ಗೋಪಾಲಸ್ವಾಮಿ ಬೆಟ್ಟವೆಂದು ಇದೆ, ಅಲ್ಲಿ ಸದಾ ಹಿಮವು ದೇವರ ಸನ್ನಿಧಿಯಲ್ಲಿ ಬೀಳುತ್ತಿರುತ್ತದೆ. ಅಲ್ಲಿನ ಪರಿಸರ ಬಹಳ ಚೆನ್ನಾಗಿದೆ. ಅಲ್ಲಿ ಪ್ರವಾಸ್ಯೋದ್ಯಮ ಧಾಮವನ್ನು ಅಬಿವೃದ್ಧಿಪಡಿಸಿಯೆಂದು ಕೇಳಿದರೆ ಹಣಕಾಸಿನ ಸಮಸ್ಯೆ ಇದೆ ಮುಂದೆ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಸಚಿವರು ಯಾವಾಗಲೂ ಹೇಳುತ್ತಿರುತ್ತಾರೆ. ಪ್ರತಿ ವರ್ಷ ಹೀಗೆ ಹೇಳಿಕೊಂಡು ಹೋದರೆ ಪ್ರಯೋಜನವಾಗುವುದಿಲ್ಲ. ಕೇಂದ್ರದಲ್ಲಿ ನಮ್ಮ ರಾಜ್ಯದವರೇ ಪ್ರವಾಸ್ಯೋದ್ಯಮ ಸಚಿವರಾಗಿದ್ದಾರೆ. ಅವರೂ ಮತ್ತು ನೀವು ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರೆ ಪ್ರವಾಸ್ಯೋದ್ಯಮದಲ್ಲಿ ಹೆಚ್ಚಿನ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿದ್ದರೂ ಪ್ರವಾಸಿಗರನ್ನು ಆಕರ್ಷಣೆ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪ್ರವಾಸ್ಯೋದ್ಯಮಕ್ಕೆ ಹೆಚ್ಚಿನ ಅನುದಾನವನ್ನು ಕೊಟ್ಟು ಅಭಿವೃದ್ಧಿಪಡಿಸಲು ಸರ್ಕಾರ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಲೋಕ ಶಿಕ್ಷಣ ಇಲಾಖೆಯೊಂಬುದೊಂದಿದೆ. ಎಷ್ಟೋ ಜನರಿಗೆ ಇದು ಏನು ಕೆಲಸ ಮಾಡುತ್ತಿದೆ ಎಂಬ ಬಗ್ಗೆ ಮನವರಿಕೆಯಾಗಿಲ್ಲ. ಸಾಕ್ಷರತಾ ಆಂದೋಲನ 1987ರಲ್ಲಿ ಪ್ರಾರಂಭವಾದಾಗ ನಮ್ಮ ರಾಜ್ಯದಲ್ಲೂ ಸಾಕ್ಷರತಾ ಆಂಧೋಲನವನ್ನು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದೊಂದು ಸಮಿತಿಗಳನ್ನು ಮಾಡಿ ಅನಕ್ಷರಸ್ತರನ್ನು ಅಕ್ಷರಸ್ತರನ್ನಾಗಿ ಮಾಡುವ ಕೆಲಸ ಪ್ರಾರಂಭವಾಯಿತು. ಆದರೆ ಹೊಸದಾಗಿ ಜಿಲ್ಲೆಗಳೇನು ರಚನೆಯಾಗಿದೆ ಅಲ್ಲಿ ಈ ಕಾರ್ಯಕ್ರಮ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿಯೇ ಗೊತ್ತಿಲ್ಲ. ಒಂದು ಮಾಹಿತಿಯ ಪ್ರಕಾರ ಸುಮಾರು 67ರಷ್ಟು ಜನರನ್ನು ಸಾಕ್ಷರಸ್ತರನ್ನಾಗಿ ಮಾಡಿದ್ದೇವೆ ಎಂಬ ವಿಚಾರ ತಿಳಿದು ಬಂದಿದೆ. ಉಳಿದಿರುವಂಥ ಜನರಿಗೆ ಸಾಕ್ಷರತೆಯನ್ನು ಕೊಡಿಸತಕ್ಕಂಥ ಮುಂದುವರೆದ

ಯೋಜನೆ ಏನಿದೆ ಅದನ್ನು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಕಾರ್ಯಕ್ರಮ ಮಹತ್ವವನ್ನೇ ಕಳೆದುಕೊಂಡು ಈ ಕಾರ್ಯಕ್ರಮ ಸ್ಥಗಿತವಾಗಿದೆ. ಈ ಕಾರ್ಯಕ್ರಮ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ತಿಳಿಸಬೇಕಾಗಿ ವಿನಂತಿಸುವೆ. ಸಾರ್ವಜನಿಕ ಗ್ರಂಥಾಲಯವೆಂಬ ಒಂದು ಇಲಾಖೆಯಿದೆ. ಇದಕ್ಕೆ ಒಬ್ಬರು ಖಾಯಂ ನಿರ್ದೇಶಕರು ಇರುತ್ತಾರೆ. ಕೆಲವರದ್ದೇ ಸೀಮಿತವಾದಂಥ ಪ್ರಕಾಶಕರ ಪುಸ್ತಕಗಳು ಪ್ರಕಟವಾಗಬೇಕು, ಬೇರೆಯವರು ಭಾಗವಹಿಸಿ ಪುಸ್ತಕಗಳನ್ನು ಪ್ರಕಟಿಸುವಂಥ ವ್ಯವಸ್ಥೆ ಅಲ್ಲಿ ಇಲ್ಲ. ಒಂದು ಲಿಮಿಟೆಡ್ ಕಂಪನಿಯ ರೀತಿಯಲ್ಲಿ ಆ ಇಲಾಖೆ ಕೆಲಸ ನಿರ್ವಹಿಸುತ್ತಿದೆ. ಉದಾಹರಣೆಗೆ, ವಿಶ್ರಾಂತ ಉಪಕುಲಪತಿಗಳಾದ ದೇಜಗೌಡರವರು ನಿಜಲಿಂಗಪ್ಪನವರ ಬಗ್ಗೆ ಕನ್ನಡದಲ್ಲಿ ಬರೆದಂಥ ಕರ್ನಾಟಕ ರುವಾರಿಯೆಂಬ ಒಂದು ಕನ್ನಡ ಪುಸ್ತಕವನ್ನು ಖರೀದಿ ಮಾಡಿ ಎಲ್ಲಾ ಗ್ರಂಥಾಲಯಗಳಿಗೆ ಕೊಡಿಸಿ ಎಂದರೆ ನಿಜಲಿಂಗಪ್ಪನವರ ಬಗ್ಗೆ ಇಂಗ್ಲೀಷ್‌ನಲ್ಲಿ ಬರೆದಿರುವ ಪುಸ್ತಕವನ್ನು ಮೂರು ಲಕ್ಷ ರೂ. ವೆಚ್ಚದಲ್ಲಿ ಖರೀದಿ ಮಾಡಿಸಿ ಗ್ರಾಮಾಂತರ ಪ್ರದೇಶದ ಗ್ರಂಥಾಲಯಗಳಿಗೆ ಕೊಡಿಸುತ್ತಾರೆ. ಗ್ರಾಮಾಂತರದಲ್ಲಿ ಇಂಗ್ಲೀಷ್ ಪುಸ್ತಕವನ್ನು ಯಾರು ಓದುತ್ತಾರೆ ಪುಸ್ತಕಗಳನ್ನು ಆಯ್ಕೆ ಮಾಡುವಲ್ಲಿ ಸಹ ಬೇಕಾದಷ್ಟು ಅವ್ಯವಹಾರ ನಡೆಯುತ್ತಿದೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿ ಪ್ರಮುಖವಾಗಿಟ್ಟುಕೊಂಡಿರುವಾಗ ಗ್ರಾಮಾಂತರದಲ್ಲಿರುವ ಗ್ರಂಥಾಲಯಗಳಲ್ಲಿ ನಿಜಲಿಂಗಪ್ಪನವರ ಬಗ್ಗೆ ಕನ್ನಡ ಪುಸ್ತಕ ಒದಗಿಸುವುದರ ಬದಲಾಗಿ ಅದನ್ನು ತಿರಸ್ಕರಿಸಿ ಇಂಗ್ಲೀಷ್ ಪುಸ್ತಕವನ್ನು ತೆಗೆದುಕೊಳ್ಳುತ್ತಾರೆ. ಇಂತಹ ಒಂದು ವ್ಯವಸ್ಥೆ ಇದೆ. ಈಗ ಒಂದು ಪಂಚಾಯಿತಿಯಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಎಂಟು ಹತ್ತು ಹಳ್ಳಿಗಳಲ್ಲಿ ಸಾಧನಸಲಕರಣೆಗಳು ಇರುವಂಥದ್ದು ಇರುತ್ತದೆ. ಅಂಥ ಗ್ರಾಮಗಳಲ್ಲಿ ಗ್ರಂಥಾಲಯಕ್ಕೆ ಸಹಾಯ ಮಾಡುವಂಥವರಿಗೂ ಹಾಗೂ ಅದಕ್ಕೆ ಬೇಕಾದ ಸಲಕರಣೆಗಳನ್ನು ಕೊಡುವ ಅವಕಾಶ ಇಲ್ಲದಿರುವಂಥ ಪರಿಸ್ಥಿತಿಯಾಗಿದೆ. ಆದ್ದರಿಂದ ಗ್ರಾಮ ಪಂಚಾಯಿತಿ ಕೇಂದ್ರದಲ್ಲೇ ಇದನ್ನು ಮಾಡದೆಯೇ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅನೇಕ ಜಿಲ್ಲೆಗಳಲ್ಲಿ ಬರಗಾಲದಿಂದ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ. ಎಲ್ಲಾ ಕಡೆ ನಾನೂರು ಅಡಿಗಳವರೆಗೆ ಹೋದರೂ ನೀರು ಬಾರದಿರುವ ಪರಿಸ್ಥಿತಿ ಇದೆ. ಕೆಲವು ಕಡೆ ಸಣ್ಣಪುಟ್ಟ ರಿಪೇರಿ ಮಾಡಿಸಿ ನೀರು ಕೊಡುವ ವ್ಯವಸ್ಥೆ ಇದೆ. ಆದರೆ ಪಂಚಾಯಿತಿ ಕಾಯ್ದೆಯ ಪ್ರಕಾರ ಗ್ರಾಮಪಂಚಾಯಿತಿಗಳಿಗೆ ಓವರ್‌ಹೆಡ್ ಟ್ಯಾಂಕ್‌ನ ನೀರು ಸರಬರಾಜು ವ್ಯವಸ್ಥೆ ಇದೆ. ಅದಕ್ಕೆ ಮೋಟಾರು ಕೆಟ್ಟುಹೋದರೆ ದುರಸ್ತಿ ಮಾಡುವುದನ್ನು ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ವಹಿಸಿಬಿಟ್ಟಿದ್ದಾರೆ. ಯಾವುದೇ ಗ್ರಾಮ ಪಂಚಾಯಿತಿಯಲ್ಲಿ ಹಣಕಾಸಿನ ಲಭ್ಯತೆ ಇರುವುದಿಲ್ಲ. ಆದ್ದರಿಂದ ಏನಾದರೂ ಮೋಟಾರ್ ಕೆಟ್ಟುಹೋದರೆ ದುರಸ್ತಿ ಮಾಡಿಸಲು ತಿಂಗಳುಗಟ್ಟಲೆ ಕಾಯಬೇಕಾಗುತ್ತದೆ.

ಪಂಚಾಯಿತಿಯವರು ದುರಸ್ತಿ ಮಾಡಿಸದಿದ್ದಾಗ ಜನರು ಶಾಸಕರ ಹತ್ತಿರ ಬಂದು ದುಂಬಾಲುಬೀಳುತ್ತಾರೆ. ನಾವು ಜಿಲ್ಲಾಪಂಚಾಯಿತಿಯವರಿಗೆ ರಿಪೇರಿ ಮಾಡಿ ಎಂದರೆ ಅವರು ಗ್ರಾಮಪಂಚಾಯಿತಿಯವರು ಅದನ್ನು ಮಾಡಿಕೊಳ್ಳಬೇಕು ಎಂದು ಹೇಳಿಬಿಡುತ್ತಾರೆ. ಇದರಿಂದಾಗಿ ಎಷ್ಟೋ ಕಡೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗಿಲ್ಲ. ಅದೇ ರೀತಿ ಬೋರ್‌ವೆಲ್ ಕೆಟ್ಟು ಹೋದರೆ ದುರಸ್ತಿ ಮಾಡುವ ಅಧಿಕಾರ ತಾಲ್ಲೂಕು ಪಂಚಾಯಿತಿಗೆ ಇದೆ. ತಾಲ್ಲೂಕು ಪಂಚಾಯಿತಿಗಳಿಂದ ಬೋರ್‌ವೆಲ್‌ನ್ನು ರಿಪೇರಿ ಮಾಡಿಸುವ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಹಿಂದೆ ಇದು ಜಿಲ್ಲಾಪಂಚಾಯಿತಿಯ ತಾಂತ್ರಿಕ ವಿಭಾಗದಲ್ಲಿದ್ದಾಗ ಅವರು ಹೇಗಾದರು ಮ್ಯಾನೇಜ್ ಮಾಡಿ ಸಮರ್ಪಕವಾಗಿ ಎಲ್ಲೂ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುತ್ತಿದ್ದರು. ಎಲ್ಲಿ ಬರಗಾಲವಿದೆ, ಕುಡಿಯುವ ನೀರಿಗೆ ತೊಂದರೆ ಇದೆ ಅಲ್ಲಾದರೂ ತಾತ್ಕಾಲಿಕವಾಗಿ ರಿಪೇರಿ ಕೆಲಸದ ಮೆನೇಜ್‌ಮೆಂಟ್‌ನ್ನು ಜಿಲ್ಲಾ ಪಂಚಾಯಿತಿಯ ತಾಂತ್ರಿಕ ವಿಭಾಗಕ್ಕೆ ವಹಿಸಿ ಕೆಲಸ ಮಾಡಿಕೊಡಬೇಕು. ಇದರಿಂದ ಜನರ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಅನೇಕ ತಾಲ್ಲೂಕುಗಳಿಗೆ ನದಿ ನೀರಿನ ಸೌಲಭ್ಯವಿಲ್ಲ. ಉದಾಹರಣೆಗೆ, ಗುಂಡ್ಲುಪೇಟೆ ತಾಲ್ಲೂಕಿಗೆ ಯಾವುದೇ ನದಿ ನೀರಿನ ಸೌಲಭ್ಯವಿಲ್ಲ. ಪೂರ್ಣ ಒಣ ಭೂಮಿಯಿಂದ ಕೂಡಿರುವ ತಾಲ್ಲೂಕಾಗಿದೆ. ಅನೇಕ ತಾಲ್ಲೂಕುಗಳಲ್ಲಿ ಮೇಜರ್ ಇರಿಗೇಷನ್, ಮೀಡಿಯಂ ಇರಿಗೇಷನ್‌ಗಾಗಿ ಸಾವಿರಾರು ಕೋಟಿ ಹಣವನ್ನು ಹಾಕಿ ನೀರಾವರಿ ಯೋಜನೆಗಳನ್ನು ಮಾಡಿ ಕುಡಿಯುವ ನೀರನ್ನು ವ್ಯವಸಾಯಕ್ಕೆ ನೀರನ್ನು ಭೂಮಿಗೆ ನೀರನ್ನು ಕೊಡತಕ್ಕ ವ್ಯವಸ್ಥೆ ಇದೆ. ಯಾವುದೇ ನದಿ ನೀರಿನ್ನು ತರಲು ಸಾಧ್ಯವಿಲ್ಲದಿರುವ ತಾಲ್ಲೂಕುಗಳಿಗೆ, ನೀರಾವರಿ ಯೋಜನೆಯಿಂದ ವಂಚಿತವಾಗಿರುವ ತಾಲ್ಲೂಕುಗಳಿಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ಏನು ಕೆರೆಕಟ್ಟೆಗಳಿದೆ ಅದಕ್ಕೆ ಹೆಚ್ಚಿನ ಅನುದಾನವನ್ನು ಕೊಟ್ಟು ಅಭಿವೃದ್ಧಿಪಡಿಸಲು ಮಹತ್ವ ಕೊಡಬೇಕಾಗುತ್ತದೆ. ನೀರಾವರಿ ಪ್ರದೇಶದಲ್ಲೂ ಸಣ್ಣ ನೀರಾವರಿಯಿಂದ ಅಷ್ಟೇ ಅನುದಾನ, ನೀರಾವರಿಯಲ್ಲದ ಪ್ರದೇಶಕ್ಕೂ ಅಷ್ಟೇ ಅನುದಾನವನ್ನು ಕೊಡುವುದರಿಂದ ತಾರತಮ್ಯ ಮಾಡಿದಂತಾಗುತ್ತದೆ. ಅದನ್ನು ಸರಿದೂಗಿಸಲು, ಯಾವುದೇ ನೀರಾವರಿ ಯೋಜನೆಯ ಅಡಿಯಲ್ಲಿ ಒಳಪಡದಿರುವ ತಾಲ್ಲೂಕುಗಳಿಗೆ ಸಣ್ಣ ನೀರಾವರಿ ಇಲಾಖೆಯಿಂದ ಸಮುದಾಯ ಇರಿಗೇಷನ್ ಇರಬಹುದು, ಸಮಾಜ ಕಲ್ಯಾಣ ಇಲಾಖೆಯಿಂದೇನು ಗಂಗಾ ಕಲ್ಯಾಣ ಯೋಜನೆ ಮಾಡುತ್ತಿದ್ದಾರೆ ಅಂಥದ್ದನ್ನು ಪ್ರತಿಯೊಂದು ಗ್ರಾಮಗಳಲ್ಲಿ ಹತ್ತು ಹದಿನೈದು ಜನ ವ್ಯವಸಾಯಗಾರರನ್ನು ಒಟ್ಟುಗೂಡಿಸಿ ಸರ್ಕಾರವೇ ಕೊಳವೆಬಾವಿ ಮೋಟಾರನ್ನು ಅಳವಡಿಸಿ ನೀರಾವರಿ ವ್ಯವಸ್ಥೆಯನ್ನು ಮಾಡಬೇಕು. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ನನ್ನ ಕ್ಷೇತ್ರದ ಬಗ್ಗೆ ಸರ್ಕಾರದವರ ಗಮನ ಸೆಳೆಯಬಯಸುತ್ತೇನೆ. ಬೆಳೆ ಪರಿಹಾರ ಹಣವನ್ನು ಕೊಡುವಲ್ಲಿ ಸರ್ಕಾರ ಬಹಳ ನಿಧಾನ ಮಾಡುತ್ತದೆ. ಆನೆ ಬಂದು ಫಸಲನ್ನು ಹಾಳು ಮಾಡುತ್ತದೆ, ಬೇರೆ ಬೇರೆ ಕಾರಣದಿಂದ ಬೆಳೆ ನಾಶವಾದಾಗ ಬೆಲೆ ಪರಿಹಾರಕ್ಕೆ ರೈತರು ಅರ್ಜಿಯನ್ನು ಹಾಕಿರುತ್ತಾರೆ, ಪರಿಹಾರದ ಮೊತ್ತವೂ ಬಹಳ

ಕಡಿಮೆ ಇರುತ್ತದೆ, ಆ ಹಣವನ್ನು ಪಡೆಯುವಷ್ಟರಲ್ಲಿ ಅಷ್ಟೇ ಹಣ ರೈತರಿಗೆ ಖರ್ಚಾಗಿರುತ್ತದೆ. ಆದ್ದರಿಂದ ಅರ್ಜಿಯನ್ನು ಕೊಟ್ಟ ಹದಿನೈದು ಇಪತ್ತು ದಿವಸಗಳಲ್ಲಿ ರೈತರಿಗೆ ಪರಿಹಾರವನ್ನು ಒದಗಿಸುವ ವ್ಯವಸ್ಥೆಯಾಗಬೇಕು. ಮತ್ತೆ ಅರಣ್ಯದ ಅಂಚಿನ ಪ್ರದೇಶಗಳಲ್ಲಿ ಆನೇ ತಡೆ ಕಂದಕಗಳನ್ನು ನಿರ್ಮಿಸಿ ಅಲ್ಲಿ ಒಂದು ಸೋಲಾರ್ ಫೆನ್ಸಿಂಗ್ ಹಾಕಿ ಕಾಡುಪ್ರಾಣಿಗಳು ಕೃಷಿ ಭೂಮಿ ಕಡೆ ಬರದೇ ಇರುವಂತಹ ವ್ಯವಸ್ಥೆಯನ್ನು ಮಾಡಬೇಕು. ಅಂಚಿನ ಪ್ರದೇಶದಲ್ಲಿರುವ ರೈತರು ಮನೆಮಠ ಬಿಟ್ಟು ದಿನಾ ರಾತ್ರಿ ಹೊತ್ತು ಈ ಕಾಡುಪ್ರಾಣಿಗಳನ್ನು ಕಾಯ್ದುಕೊಂಡಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಯಾವುದೇ ರೀತಿಯಾದ ಒಂದು ಸ್ಕೀಂ ಅರಣ್ಯ ಇಲಾಖೆಯಲ್ಲಿಲ್ಲ. ಶಾಸಕರುಗಳು ಒತ್ತಡ ತಂದು ವೈಯಕ್ತಿಕವಾಗಿ ಇಂತಹ ಸ್ಕೀಮ್‌ಗಳನ್ನು ಮಂಜೂರು ಮಾಡಿಸಬೇಕೇ ಹೊರತು ಅರಣ್ಯ ಇಲಾಖೆಯ ಕಾರ್ಯಕ್ರಮಗಳಲ್ಲಿ ಆನೆ ತಡೆ ಕಂದಕ ನಿರ್ಮಿಸುವ ವ್ಯವಸ್ಥೆಯಿಲ್ಲ. ಅದನ್ನು ಇಲಾಖೆಯ ಕಾರ್ಯಕ್ರಮಗಳ ವ್ಯಾಪ್ತಿಗೆ ಸೇರಿಸಿ ಮಾಡಬೇಕು. ಇನ್ನು ಬಂಡೀಪುರ ಕಾದಿಟ್ಟ ಅರಣ್ಯವಿದೆ, ಅಲ್ಲಿ ಯಾವುದೇ ಮರ ಬಿದ್ದುಹೋಗಲಿ ಏನೇ ಆಗಲಿ ಯಾರೂ ಮುಟ್ಟಲು ಅವಕಾಶವಿಲ್ಲ ಮತ್ತೆ ಅಲ್ಲಿ ಖಾಸಗಿ ವ್ಯಕ್ತಿಗಳು ಅರಣ್ಯ ಪ್ರವೇಶಿಸಲು ಅವಕಾಶವಿಲ್ಲ. ಆದರೆ 20, 30 ವರ್ಷಗಳ ಹಿಂದೆ ಒಣಗಿ ಬಿದ್ದುಹೋಗಿರುವ ಮರಗಳನ್ನು ಎತ್ತಿಹಾಕುವ ವ್ಯವಸ್ಥೆ ಇಲ್ಲ. ಇದರಿಂದ ಬೇಸಿಗೆ ಕಾಲದಲ್ಲಿ ಅವು ಕಾಳ್ಗಿಚ್ಚಾಗಿ ಬೆಂಕಿಯಿಂದ ಕಾಡು ನಾಶವಾಗುತ್ತಿದೆ. ಆದ್ದರಿಂದ ಅಂಥವನ್ನು ಐದು ಹತ್ತು ವರ್ಷಕ್ಕೊಂದು ಸಲವಾದರೂ ಹಾಗೆ ಒಣಗಿ ಬಿದ್ದಿರುವ ಮರಗಳನ್ನು ಹೊರಗಡೆ ಸಾಗಿಸುವ ವ್ಯವಸ್ಥೆಯನ್ನು ಮಾಡಬೇಕು.

ರೂರಲ್ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಗ್ರಾಮೀಣ ಇಂಧನಶಕ್ತಿ ಎಂದು ಏನಿದೆ ಇದನ್ನು ಸ್ವಲ್ಪ ಸೀಮಿತವಾದ ರೀತಿ ಮಾಡುತ್ತಿದ್ದಾರೆ. ಇದಕ್ಕೆ ಹೆಚ್ಚಿನ ಮಹತ್ವ ಕೊಡುವುದರಿಂದ ಗ್ರಾಮಾಂತರದಲ್ಲಿ ಇಂಧನದ ಕೊರತೆ ನೀಗಬಹುದಾಗಿದೆ. ಇವತ್ತು ಇನ್ನೂ ಅನೇಕ ವಿಚಾರಗಳನ್ನು ಮಾತನಾಡಬೇಕೆಂದಿದ್ದರೂ ಕಾಲಾವಕಾಶ ಇಲ್ಲದೇ ಇರುವುದರಿಂದ ನನ್ನನ್ನು ಬಹಳ ಇಕ್ಕಟಿಗೆ ಸಿಲುಕಿಸುತ್ತಿದ್ದೀರಿ. ಈ ವಿಚಾರಗಳ ಬಗ್ಗೆ ಸರ್ಕಾರ ಉತ್ತರ ಕೊಡುವಾಗ ತಿಳಿಸಬೇಕೆಂದು ಕೋರಿ ತಮಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಎಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) :— ಅಧ್ಯಕ್ಷರೇ, ನಮ್ಮ ದೇಶ ಇವತ್ತು ಕೃಷಿಗೆ ಹೆಚ್ಚಿನ ಆದ್ಯತೆ ಕೊಡುತ್ತಿರುವ ದೇಶವಾಗಿದೆ. ಆದರೆ ರೈತ ಇವತ್ತು ಅನೇಕ ವಿಚಾರಗಳಲ್ಲಿ ಬಹಳ ಹಿಂದುಳಿದಿದ್ದಾನೆ. ಕೃಷಿಗೆ ನಮ್ಮ ಈ ಸರ್ಕಾರ ಹೆಚ್ಚಿನ ಆದ್ಯತೆ ಕೊಟ್ಟಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ ಕೆರೆ ಆಶ್ರಿತ ಭೂಮಿ ಬಹಳ ಇದ್ದರೂ ಕೆರೆಗಳಲ್ಲಿ ನೀರಿಲ್ಲ ಆದ್ದರಿಂದ ಕೆರೆಯಲ್ಲಿರುವ ಹೂಳನ್ನು ತೆಗೆಸಿ ಆದಷ್ಟು ಜಾಗ್ರತೆ ಮಳೆ ನೀರನ್ನು ಸಂಗ್ರಹಮಾಡುವುದರಿಂದ ಕೃಷಿಗೆ ಹೆಚ್ಚಿನ ಆದ್ಯತೆ ಕೊಟ್ಟಂತಾಗುವುದು. ರೈತರಿಗೂ ನಾವು ಸಹಕಾರ ಕೊಟ್ಟಂತಾಗುವುದು.

ಇವತ್ತು ವಿದ್ಯುತ್ ದೀಪ, ಅಲಂಕಾರ ಬರೀ ಪಟ್ಟಣದಲ್ಲೇ ಇದೆ. ವಿದ್ಯುದ್ದೀಪದ ವಿಷಯದಲ್ಲಿ ಹಳ್ಳಿ ರೈತ ಬಹಳ ಹಿಂದೆಬಿದ್ದಿದ್ದಾನೆಂದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರ ರೈತರಿಗೆ ಹೆಚ್ಚಿನ ರೀತಿಯಲ್ಲಿ ಒದಗಿಸಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಚಾರ, ಸರ್ಕಾರ ಮನಸು ಮಾಡಿದರೆ ಪ್ರತಿ ಗ್ರಾಮದ ಒಳಗಡೆ ಕನಿಷ್ಟ ಒಂದು ಕಿಲೋಮೀಟರ್ ಆದರೂ ಡಾಂಬರೀಕರಣ ಮಾಡಿದರೆ ನಿಜವಾಗಲೂ ರೈತರಿಗೆ ಸಂತೋಷ ಕೊಟ್ಟಂತಾಗುವುದು. ಏಕೆಂದರೆ ಊರೊಳಗಿನ ರಸ್ತೆ ಸರಿಯಿಲ್ಲದೆ ಅಲ್ಲಿನ ರೈತ ಧೂಳುಮಯವಾಗಿರುತ್ತಾನೆ. ಅವರೂ ನಮ್ಮಂತೆಯೇ ಪ್ರಜೆಗಳು, ನಾವು ಬರೀ ಪಟ್ಟಣದವರನ್ನೇ ನೋಡಬಾರದು. ಗ್ರಾಮಾಂತರಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಕನಿಷ್ಟ ಒಂದು ಕಿಲೋಮೀಟರ್ ಡಾಂಬರೀಕರಣ ಮಾಡಿಕೊಟ್ಟರೆ ಅವರಿಗೆ ಹೆಚ್ಚಿನ ರೀತಿ ಸಹಕಾರ ಕೊಟ್ಟಂತಾಗುವುದು. ಏಕೆಂದರೆ ಕೃಷಿ ನಂಬಿರುರ ರೈತ ಇವತ್ತು ನಿಷ್ಕ್ರಿಯನಾಗಿದ್ದಾನೆ. ಅವನು ಬೆಂಗಳೂರಿಗೆ ಬರುವಷ್ಟೂ ಶಕ್ತಿ ಇಲ್ಲ ಅಂಥವರಿಂದ ವೋಟು ಪಡೆದು ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ಒಂದು ರೀತಿಯ ಸಂತೋಷ. ಆದರೆ ಯಾವತ್ತಿಗೂ ಅವನನ್ನು ನಾವು ಮರೆಯಬಾರದು ಎಂದು ಅಧ್ಯಕ್ಷರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ತೋಟಗಾರಿಕೆ. ತೋಟಗಾರಿಕೆ ಇವತ್ತು ಬಹಳ ಮುಖ್ಯ. ನಮ್ಮ ಕ್ಷೇತ್ರದಲ್ಲೂ ಅಡಿಕೆ, ತೆಂಗು, ಬಾಳೆ, ಕಬ್ಬು ಇದ್ದರೂ ಭತ್ತದ ಕಣಜವೂ ಹೌದು. ಆದ್ದರಿಂದ ನುಸಿರೋಗಪೀಡೆ ವಿಚಾರದಲ್ಲಿ ಸರ್ಕಾರ ನಮ್ಮ ಜಿಲ್ಲೆಗೆ ಹೆಚ್ಚಿನ ಆದ್ಯತೆ ಕೊಟ್ಟಿದೆ. ಅದು ಮತ್ತೆ ಹಬ್ಬದಂತೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಅದೇ ರೀತಿ ಪಾಮ್ ಆಯಿಲ್ ಮರಗಳನ್ನು ಬೆಳೆಯಲು ಸರ್ಕಾರ ಎಲ್ಲಾ ರೀತಿಯ ಪ್ರೋತ್ಸಾಹ ಕೊಡುತ್ತಿತ್ತು ಆದರೆ ಇವತ್ತು ಪಾಮ್ ಆಯಿಲ್ ಗಿಡಗಳನ್ನು ರೈತರು ಕಿತ್ತುಹಾಕುತ್ತಿದ್ದಾರೆ. ಇದು ನಿಜವಾಗಲೂ ದು:ಖಪಡಬೇಕಾದ ವಿಚಾರ. ಎಣ್ಣೆಕಾಳು ಕೊಡುವ ಆ ಮರವನ್ನು ಇವತ್ತು ಉಳಿಸಬೇಕಾಗಿದೆ. ಏಕೆಂದರೆ ಮನುಷ್ಯನಿಗೆ ಅದು ಆಶ್ರಯದಾತ ಆಗಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದರೂ ಇವತ್ತು ತಾತ್ಸಾರ ಭಾವನೆಯಿಂದ ಅದನ್ನು ನೋಡುತ್ತಿದ್ದೇವೆ. ಹಾಗಾಗುವುದು ಬೇಡವೆಂದು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ನಮ್ಮಲ್ಲಿ ಕೃಷಿ ಸಂಬಂಧಿತ ಕಾಲೇಜಿದ್ದರೂ ಅಲ್ಲಿ ಅನೇಕ ಸಂಶೋಧನೆ ಮಾಡುವ ಅನೇಕ ವಿದ್ವಾಂಸರೂ ಇದ್ದಾರೆ,. ಅವರಿಂದ ಅಡಿಕೆ ಮೇಲೆ ಸಂಶೋಧನೆ ನಡೆಸಬೇಕೆಂದು ಅಧ್ಯಕ್ಷರಲ್ಲಿ ಕೇಳುತ್ತಿದ್ದೇನೆ. ಅಡಿಕೆಯನ್ನು ಎಲ್ಲಾ ಭಾಗದಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಒಂದು ರೀತಿ ಮನಗೆ ದು:ಖವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸಹಕಾರ ಕೊಟ್ಟು ಅಡಿಕೆಧಾರಣೆಯನ್ನು ಉತ್ತಮವಾಗಿ ಉಳಿಸಿಕೊಳ್ಳಲು ಅವಕಾಶ ಕೊಟ್ಟಿದ್ದಾರೆ. ಇವತ್ತು ಭತ್ತಕ್ಕೆ ಬೆಲೆಯಿಲ್ಲ. ರಾಗಿಗೆ, ಜೋಳಕ್ಕೆ, ಬೆಲೆ ಇಲ್ಲ ಆದರೆ ಅಡಿಕೆಗೆ ಸ್ವಲ್ಪ ಬೆಲೆ ಇದೆ. ಅದನ್ನು ಉಳಿಸಿ ಕೊಡುವುದು ಸರ್ಕಾರದ ಕರ್ತವ್ಯ. ಹಾಗೆ ಉಳಿಸಿಕೊಟ್ಟಿರುರ ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಧನ್ಯವಾದ ಅರ್ಪಿಸುತ್ತಿದ್ದೇವೆ.

ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳಿಗೆ ರಾಜ್ಯದಲ್ಲಿ ಎಲ್ಲಾ ರೀತಿಯ ಸಹಕಾರವನ್ನೂ ಕೊಡಬೇಕು. ಏಕೆಂದರೆ ನಮಗೆ ಅನೇಕ ರೀತಿಯ ರೋಗಗಳು ಬರುತ್ತಿವೆ ಅದನ್ನು ತಡೆಗಟ್ಟಲು ಸರ್ಕಾರ ಎಲ್ಲಾ ಪ್ರಯತ್ನ ಮಾಡಬೇಕು. ಕೆಲವು ರೋಗಗಳು ಯಾವ ರೀತಿ ಹರಡುತ್ತವೆ ಎಂದು ಗೊತ್ತಾಗುವುದಿಲ್ಲ. ಅದನ್ನು ಸಂಶೋಧನೆ ಮಾಡುವ ಅನೇಕ ಯೋಜನೆಗಳನ್ನು ತಾಲ್ಲೂಕು ಜಿಲ್ಲಾ ಕೇಂದ್ರಗಳಲ್ಲಿ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಹಾಗೆಯೇ ಮಲೆನಾಡಿನಲ್ಲಿ ಬಹಳ ಹೆಚ್ಚಿನ ಪ್ರದೇಶದಲ್ಲಿ ಮಂಗನಕಾಯಿಲೆ ಹಬ್ಬಿದೆ. ಅದರ ಬಗ್ಗೆ ಸಂಶೋಧನೆ ನಡೆಸಲಾಗುತ್ತಿತ್ತು, ಆದರೆ ಅದನ್ನು ಅಲ್ಲಿಂದ ಸ್ಥಳಾಂತರಿಸಲಾಗುತ್ತಿದೆಯೊಂದು ಗೊತ್ತಾಗಿದೆ. ಅದನ್ನು ಸ್ಥಳಾಂತರಿಸಬಾರದೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಪ್ರಮುಖ ವಿಷಯವೇನೆಂದರೆ, ರಾಜ್ಯದ ಎಲ್ಲಾ ಭಾಗಗಳಲ್ಲೂ ರೈತರು ಬಗರ್‌ಹುಕಂ ಸಾಗುವಳಿ ಮಾಡುತ್ತಿದ್ದಾರೆ. ಇದು 30-40 ವರ್ಷಗಳಿಂದ ನಡೆದಿದೆ. ಅಂಥವರಿಗೆ ಒಂದು ರೀತಿ ಅರಣ್ಯದವರ ಕಾಟ, ಒಂದು ರೀತಿ ಸರ್ಕಾರದವರ ಕಾಟ, ಅಂದರೆ ಬೇರೆ ಇಲಾಖೆಗಳ ಕಾಟ. ಆದ್ದರಿಂದ ಅಂತಹ ಬಗರ್‌ಹುಕುಂ. ಸಾಗುವಳಿದಾರನಿಗೆ ಸರ್ಕಾರ ಮನಸ್ಸು ಮಾಡಿ ಪಟ್ಟಾ ಕೊಟ್ಟರೆ ಅರ್ಧ ಎಕರೆ ಒಂದು ಎಕರೆ ಎರಡೆಕರೆ ಮಾಡಿರುವ ಸಾಗುವಳಿದಾರನಿಗೆ ನಿಜವಾಗಿ ಆಶ್ರಯ ಕೊಟ್ಟಂತಾಗುವುದು ಇಲ್ಲದೇ ಹೋದರೆ ಈ ಭೂಮಿ ತನ್ನದಲ್ಲವೆಂದು ತಿಳಿದು, ಇದು ಯಾವತ್ತು ನನಗೆ ಸಿಗುವುದೋ ಎಂದು ಎಲ್ಲರಲ್ಲೂ ಭಿಕ್ಷಾಟನೆ ಮಾಡುತ್ತಿದ್ದಾನೆ. ಒಬ್ಬ ಮಂತ್ರಿ ಬರಲಿ, ಅಥವಾ ಹಿರಿಯ ರಾಜಕಾರಣಿ ಬರಲಿ ಎಲ್ಲರ ಹತ್ತಿರವೂ ಕೇಳುತ್ತಿದ್ದಾನೆ. ಯಾವತ್ತು ನನಗೆ ಸಕ್ರಮ ಮಾಡಿಕೊಡುತ್ತೀರಿ ಎಂದು ಕೇಳುತ್ತಿದ್ದಾನೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಆದಷ್ಟು ಬೇಗ ಸಕ್ರಮ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿ ರೇಷ್ಮೆ. ನಮ್ಮ ಕ್ಷೇತ್ರದಲ್ಲಿ ಕೋಟ್ಯಾಂತರ ರೂಪಾಯಿಗಳ ಕಟ್ಟಡ ಕಟ್ಟಿದ್ದಾರೆ. ಆದರೆ ರೇಷ್ಮೆ ಅಭಿವೃದ್ಧಿ ಇವತ್ತು ಆಗುತ್ತಿಲ್ಲ. ಆ ಭಾಗದಲ್ಲಿ ರೇಷ್ಮೆ ಅಭಿವೃದ್ಧಿಪಡಿಸಬೇಕೆಂದು ಅಧ್ಯಕ್ಷರಲ್ಲಿ ಕೇಳುತ್ತಿದ್ದೇನೆ. ಇನ್ನು ಬೋರ್‌ವೆಲ್‌ಗಳ ವಿಚಾರ. ನಾವು ಪಟ್ಟಣದಲ್ಲಿ ನೋಡಿರಬಹುದು. ಗ್ರಾಮಾಂತರದಲ್ಲೂ ನೋಡಬಹುದು. ಒಬ್ಬ ಬೋರ್ ಹಾಕಿಸಿದರೆ ಪಕ್ಕದ ಇನ್ನೊಬ್ಬ ಬೋರ್ ಹಾಕಿಸುತ್ತಾನೆ. ಯಾಕೆಂದರೆ ತನಗೂ ನೀರು ಬೇಕು ಎಂದು. ಆದರೆ ಅಂತರ್ಜಲ ಇಷ್ಟು ಅಡಿ ದೂರವಿದ್ದರೆ ನೀರು ಸಿಕ್ಕುತ್ತದೆ. ಇದನ್ನು ಮರೆತು ತನ್ನ ಬೆಳೆ ಉಳಿಸಿಕೊಳ್ಳಲು ಅಕ್ಕಪಕ್ಕದಲ್ಲೇ ಬೋರ್ ಹಾಕುತ್ತಿರುವ ರೈತನಿಗೆ ಒಂದು ನಿಯಮದ ಕಡಿವಾಣವನ್ನು ಹಾಕಿ ಇಷ್ಟೇ ದೂರದಲ್ಲಿ ಹಾಕಬೇಕೆಂದು ಯೋಜನೆ ಮಾಡಿಕೊಟ್ಟರೆ ಆ ನೀತಿ ಫಲಪ್ರದವಾಗುವುದು. ಈಗ

ಕೆರೆಗಳಲ್ಲೂ ನೀರಿಲ್ಲ, ಬೋರ್‌ವೆಲ್‌ನಲ್ಲೂ ನೀರಿಲ್ಲ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಆಲೋಚನೇ ಮಾಡಬೇಕೆಂದು ಸಚಿವರಲ್ಲಿ ಕೇಳುತ್ತಿದ್ದೇನೆ.

ಇನ್ನು ಪ್ರಾಥಮಿಕ ಪ್ರೌಢಶಿಕ್ಷಣ ಸಚಿವರಲ್ಲಿ ನಾನು ಕೇಳುವುದಿಷ್ಟೆ ಅನೇಕ ಹಳ್ಳಿಗಳಲ್ಲಿ ಶಾಲೆಗಲೇನೋ ಇವೆ. ಅವುಗಳ ದುಸ್ಥಿತಿಯನ್ನು ನಮ್ಮ ಸರ್ಕಾರ ರಿಪೇರಿ ಮಾಡಿಸುತ್ತಿದೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿಲ್ಲ. ಅನೇಕ ಶಾಲೆಗಳು ಈಗಾಗಲೇ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಆದ್ದರಿಂದ ಸರ್ಕಾರ ವಿಶೇಷ ಆದ್ಯತೆಯನ್ನು ಶಾಲಾಕಟ್ಟಡಕ್ಕೆ ಅಂಗನವಾಡಿ ಕಟ್ಟಡಗಳಿಗೆ ಕೊಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರದವರನ್ನು

3.40 ಪಿ.ಎಂ.

ಕೇಳುತ್ತಿದ್ದೇನೆ. ಕೆಲವು ಮಕ್ಕಳು ಪಟ್ಟಣದಲ್ಲಿ ಉತ್ತಮ ಶಾಲೆಗಳಲ್ಲಿ ಓದುತ್ತಾರೆ. ಆದರೆ ಇನ್ನು ರೈತರ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು ಹಳ್ಳಿ ಗ್ರಾಮಗಳಲ್ಲಿ ಓದತಕ್ಕ ಮಕ್ಕಳುಗಳಿಗೆ ಉತ್ತಮವಾಗಿರುವ ಕಟ್ಟಡವನ್ನು ಕೊಟ್ಟರೆ ನಿಜವಾಗಿಯೂ ಆ ಮಕ್ಕಳು ಈ ದೇಶದಲ್ಲಿ ಉತ್ತಮ ಪ್ರಜೆಯಾಗಿ ಹುಟ್ಟಿ ಉನ್ನತವಾದ ವ್ಯಾಸಂಗವನ್ನು ಮಾಡುವುದಕ್ಕೆ ಅವಕಾಶವಿದೆ ಎನ್ನುವ ಸಂತೋಷವಾದ ಭಾವನೆ ಮಕ್ಕಳಲ್ಲೂ ಬರುತ್ತದೆ. ಆ ಮಕ್ಕಳ ಭವಿಷ್ಯಕ್ಕೋಸ್ಕರ ಈ ಶಾಲೆಯನ್ನು ಅಭಿವೃದ್ಧಿಪಡಿಸತಕ್ಕದ್ದು. ಇದನ್ನು ಸರ್ಕಾರ ಗಮನಿಸಬೇಕು. ಆದೇ ರೀತಿ ವಯಸ್ಕರ ಶಿಕ್ಷಣ ಸಮಿತಿ ಬಗ್ಗೆ ಹೇಳುವುದಾದದರೆ ಆ ಇಲಾಖೆ ಎಲ್ಲಿ ಕೆಲಸ ಮಾಡುತ್ತದೆ, ಏನು ಮಾಡುತ್ತಿದೆ ಎಂಬುದು ಯಾರಿಗೂ ಗೊತ್ತಿಲ್ಲ. ನಮ್ಮ ಕ್ಷೇತ್ರದಲ್ಲೂ ಆ ಇಲಾಖೆ ಇದೆ. ಆದರೆ ಆ ಇಲಾಖೆ ಏನಾಗಿದೆ ಎಂಬುದು ಗೊತ್ತಿಲ್ಲ ಯಾರು ಕೆಲಸ ಮಾಡುತ್ತಾರೆ, ಯಾರು ಹೋಗುತ್ತಾರೆ ಎಂಬುದೂ ಗೊತ್ತಾಗುತ್ತಿಲ್ಲ. ಸರ್ಕಾರ ಆದರ ಬಗ್ಗೆ ಹೆಚ್ಚಿನ ಕಡಿವಾಣವನ್ನು ಹಾಕಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ವಯಸ್ಕರಿಗೂ ಕೂಡ ಕಡೆಯ ಪಕ್ಷ ಸಹಿ ಮಾಡುವುದನ್ನು ಕಲ್ಪಿಸಿಕೊಟ್ಟರೂ ಸಾಕು. ಸಹಿ ಮಾಡದೆ ಹೆಬ್ಬೆಟ್ಟನ್ನು ಒತ್ತಬಾರದು ನಾವು "ಅಕ್ಷರ ತುಂಗಾ"ಎನ್ನುವ ಕಾರ್ಯಕ್ರಮವನ್ನು ಮಾಡಿದ್ದೇವೆ. ನಮ್ಮ ಜಿಲ್ಲೆಯಲ್ಲೂ ಕೂಡ ಸಾಕ್ಷರತಾ ಆಂದೋಲನ ಆಗಿತ್ತು ಎಂದು ಹಿಂದಿ ಸರ್ಕಾರ ಹೇಳಿತ್ತು. ಆದರೆ ನಾವು ನೋಡಿದಾಗ ಆ ಸಾಕ್ಷರತಾ ಆಂದೋಲನಾ ಇನ್ನೂ ಆಗಿಲ್ಲ. ರೈತ ಕೂಡ ಸಹಿ ಮಾಡುವ ಹಾಗೆ ಮಾಡಬೇಕೆನ್ನುವ ಉದ್ದೇಶದಿಂದ ಮಾನ್ಯ ಸರ್ಕಾರ ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತೇನೆ. ಆದೇ ರೀತಿ ಕೃಷಿ ಕಾರ್ಮಿಕರ ಬಗ್ಗೆ ನೋಡಿದರೆ ಅವರಿಗೆ ಹೆಚ್ಚಿಗೆ ಸಂಬಂಳ ಸಿಗುತ್ತಿಲ್ಲ. ಆದಕ್ಕಾಗಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಇದ್ದಾರೆ. ಅವರಿಗೆ ಹೆಚ್ಚಿಗೆ ಕೂಲಿ ಕೊಡುವ ಬಗ್ಗೆ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಹಾಗೆಯೇ ಸೋಲಾರ್ ಎನರ್ಜಿಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇವತ್ತು ಮಳೆಯೇ ಬರುತ್ತಿಲ್ಲ. ಮಳೆ ಇಲ್ಲದೆ ಬೆಳೆಯ ಜೊತೆಗೆ ಬೀದಿ ದೀಪದ ಒಂದು

ತೊಂದರೆಯು ಜಾಸ್ತಿಯಾಗಿದೆ. ಬೀದಿ ದೀಪ ಉರಿಸುವುದನ್ನೇ ನಿಲ್ಲಿಸಬೇಕಾದ ಪರಿಸ್ಥಿತಿ ಬರುತ್ತಿದೆ. ಆದ್ದರಿಂದ ಸೋಲಾರ್ ಎನರ್ಜಿಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಟ್ಟರೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ವಿಧಾನಸೌಧದ ಸುತ್ತಮುತ್ತ ಸೋಲಾರ್ ಎನರ್ಜಿಯನ್ನು ನೀವು ಮಾಡಿದರೆ ಜನಗಳಿಗೆ ಗೊತ್ತಾಗುತ್ತದೆ. ಸೋಲಾರ್ ಎನರ್ಜಿಯಿಂದ ರಾತ್ರಿ ಹೊತ್ತು ನಾವು ದೀಪವನ್ನು ಬೆಳಗಿಸಬಹುದು ಎಂದು ಅವರಿಗೆ ಗೊತ್ತಾಗುತ್ತದೆ. ಇವತ್ತು ಅದು ದುಬಾರಿ ಎಂದು ಹೇಳಬಹುದು. ಆದರೆ ಎಲ್ಲಾ ಭಾಗದಲ್ಲೂ ಅದು ಬಂದಿದೆ ಕಡಿಮೆಗೆ ಸಿಕ್ಕಿ ಉತ್ತಮ ಪ್ರಮಾಣದಲ್ಲಿ ಕೆಲಸವಾಗಿ ಜನಗಳಿಗೂ ಅನುಕೂಲವಾಗುತ್ತದೆ. ಅದರಂತೆ ಹಣ್ಣು ಸಂಸ್ಕರಣಾ ಕೇಂದ್ರವನ್ನು ಎಲ್ಲಾ ತಾಲ್ಲೂಕುಗಳಲ್ಲೂ ಮಾಡಬೇಕು. ಇದು ಬಹಳ ಮುಖ್ಯವಾದ ಅಂಶ. ನಾವು ಹಣ್ಣನ್ನು ಬೆಳೆಯುತ್ತೇವೆ. ಬೆಳೆದ ಹಣ್ಣನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದರೆ ಬಹಳ ಕಡಿಮೆ ದರದಲ್ಲಿ ಹೋಗುತ್ತದೆ. ತರಕಾರಿ ಕೂಡ ಮಾರುಕಟ್ಟೆಗೆ ತಂದರೆ ಅದನ್ನು ಬೆಳೆದ ರೈತನಿಗೆ ಕೊಟ್ಟಿರುವ ಕೂಲಿ ಕೂಡ ಹುಟ್ಟುವುದಿಲ್ಲ. ಅದಕ್ಕೂ ಕೂಡ ಸರ್ಕಾರ ಮಧ್ಯವರ್ತಿ ವಹಿಸಿ ಸರ್ಕಾರ ನೇರವಾಗಿ ಅದನ್ನು ಖರೀದಿ ಮಾಡುವ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ನಮ್ಮ ಎಪಿಎಂಸಿ ಯಾರ್ಡ್‌ಗಳನ್ನು ನೋಡಿದರೆ ದು:ಖವಾಗುತ್ತಿದೆ. ರೈತ ತಂದಿರುವ ಮಾಲಿಗೆ ನಿಜವಾದ ಬೆಲೆ ಕೂಡ ಸಿಗುವುದಿಲ್ಲ. ಪೂರ್ಣ ಬೇಡ, ಸ್ವಲ್ಪವಾದರೂ ಕೂಡ ಹಣ ಸಿಗುವುದಿಲ್ಲ. ಇದು ಬಹಳ ಮುಖ್ಯವಾದ ಅಂಶ. ಇವತ್ತು ಕಾಯಿ ರೇಟನ್ನು ನೋಡಿದರೆ ಗಗನಕ್ಕೆ ಹೋಗಬೇಕಾಗಿತ್ತು. ಇನ್ನು 5 ರೂಪಾಯಿ ಬಂದಿಲ್ಲ. ಈಗ ಎರಡು ರೂಪಾಯಿಗೆ ಬಂದಿದೆ. ಇದು ನಿಜವಾಗಿಯೂ ಶೋಚನೀಯ ಸ್ಥಿತಿ. ರೈತನಿಗೆ ಒಂದು ರೀತಿ ನುಸಿ ರೋಗ, ಬೆಳೆ ಹಾನಿ, ಬೀರೂರು, ಕಡೂರಿನಲ್ಲಿ ನೋಡಿದರೆ ಕಪ್ಪು ಹುಳು ರೋಗ ಬಂದಿದೆ. ಮೊನ್ನೆ ಕೂಡ ನಾನು ಆ ಭಾಗಕ್ಕೆ ಹೋದಾಗ ರೈತರು ಅದನ್ನು ತೆಗೆದುಕೊಂಡು ಬಂದು ತೋರಿಸಿದರು. ಅದನ್ನು ನೋಡಿದರೆ ನನಗ ದು:ಖವಾಗುತ್ತದೆ. ಅದೇನೋ ಲ್ಯಾಂಪ್ ಹಿಡಿದರೆ ಮಾತ್ರ ಒಳಗಡೆ ಬಂದು ಸೇರಿಕೊಳ್ಳುತ್ತದಂತೆ. ಅದೆಷ್ಟು ದಿವಸ ಹಿಡಿಯುವುದಕ್ಕಾಗುತ್ತದೆ? ಅದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಆ ಬೆಳೆಯನ್ನು ಉಳಿಸಬೇಕೆಂದು ಹೇಳುತ್ತೇನೆ. ಮಳೆಯನ್ನು ಶೇಖರಣೆ ಮಾಡುವ್ ಒಡ್ಡುಗಳನ್ನು ಅದು ಹಳ್ಳಿ ಗ್ರಾಮಗಳಲ್ಲೇ ಇರಬಹುದು ಅಥವಾ ಯಾವುದೇ ಜಮೀನು ಇರಬಹುದು. ಅದನ್ನು ಮಾಡಬೇಕೆಂದು ಹೇಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಜಾರಗಲ್ ಹಳ್ಳ ಎಂದು ಇದೆ. ಬಹಳ ವರ್ಷಗಳಿಂದಲೂ ಕೂಡ ಅದು ನೆನೆಗುದಿಗೆ ಬಿದ್ದಿರುವ ಹಳ್ಳ. ಅರಣ್ಯ ಇಲಾಖೆಯವರು ಇದು ನಮ್ಮದು ಎಂದು ಹೇಳುತ್ತಾರೆ. ಮೊನ್ನೆ ಕೂಡ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಸಭೆ ಮಾಡಿದಾಗ ಇದು ಸರ್ಕಾರಕ್ಕೆ ಸೇರಿದ್ದು, ಫಾರೆಸ್ಟ್ ಇಲಾಖೆಗೆ ಸೇರಿಲ್ಲ ಎಂದು ಹೇಳುತ್ತಾರೆ. ಇದರ ಜಿಜ್ಞಾಸೆಯಲ್ಲಿ ಸಾವಿರಾರು ಜನರಿಗೆ ಕುಡಿಯುವ ನೀರು ಇವತ್ತು ಸಿಗುತ್ತಿಲ್ಲ. ಮಾನ್ಯ

ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಪತ್ರವನ್ನು ನಾವೆಲ್ಲಾ ಬಂದು ಕೊಟ್ಟಿದ್ದೇವೆ. ಇದನ್ನು ಆದಷ್ಟು ಜಾಗ್ರತೆ ಮಾಡಿಕೊಟ್ಟರೆ ಸಾವಿರಾರು ಎಕರೆಗೆ ನೀರನ್ನು ಕೊಟ್ಟಹಾಗೆ ಆಗುತ್ತದೆ. ಏಕೆಂದರೆ ಇವರೆಲ್ಲಾ ಶರಾವತಿ ಮುಳುಗಡೆಯಿಂದ ಬಂದಗಿರುವ ಜನರು. ಇಡೀ ಕರ್ನಾಟಕಕ್ಕೇ ನಾವು ದೀಪವನ್ನು ಕೊಟ್ಟು ಆ ದೀಪದ ಕೆಳಗೆ ಅವರು ಕತ್ತಲಲ್ಲಿ ವಾಸ ಮಾಡುತ್ತಿದ್ದಾರೆ. ನಿಜವಾಗಿಯೂ ಈ ಜಾರಗಲ್ ಹಳ್ಳಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಸಾವಿರಾರು ಜನರಿಗೆ ನೀರನ್ನು ಕೊಟ್ಟ ಹಾಗೆ ಆಗುತ್ತದೆ. ಏಕೆಂದರೆ ಅಲ್ಲಿ ಕುಡಿಯುವ ನೀರಿನ ತೊಂದರೆಯೂ ಕೂಡ ಇದೆ. ಅಂಥ ಯೋಜನೆಗೂ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ಶಿವಮೊಗ್ಗದಲ್ಲೂ ಕೂಡ ಈ ಗಾಜನೂರು ಡ್ಯಾಮನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ. ಬಹಳ ಸಂತೋಷ. ಅದು ಆದಷ್ಟು ಜಾಗ್ರತೆ ಪ್ರಗತಿಪರವಾಗಿ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ರೀತಿಯಲ್ಲಿ ಸೇವೆಯನ್ನು ಕೊಡುವ ಯೋಜನೆಯನ್ನು ನಮ್ಮ ಸರ್ಕಾರ ಇವತ್ತು ಅದನ್ನು ಬೃಹತ್ ಪ್ರಮಾಣದಲ್ಲಿ ಮಾಡುತ್ತಿದೆ. ಬಹಳ ಸಂತೋಷ. ಆದಷ್ಟು ಜಾಗ್ರತೆ ಅದನ್ನು ಮುಗಿಸುಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೀನಿ. ನೀರಾವರಿ ಇಲಾಖೆಯಲ್ಲಿ ನಮ್ಮಲ್ಲಿ ಅಚ್ಚುಕಟ್ಟು ಪ್ರದೇಶ ಜಾಸ್ತಿ. ಹಿಂದಿನಿಂದಲೂ ಕೂಡ ನಮಗೆ ಮಲತಾಯಿ ಧೋರಣೆಯಾಗಿದೆ. ಅದು ಆಗಬಾರದು. ಏಕೆಂದರೆ ನೀರು ಶೇಖರಣೆಯಾಗಿ ಚಾನಲ್‌ನಲ್ಲಿ ಬಂದರೆ ಪೂರ್ಣ ನೀರೆಲ್ಲಾ ಹಾಳಾಗುತ್ತಿದೆ. ಎರಡು ಭಾಗದಲ್ಲೂ ಕೂಡ ಆ ನೀರನ್ನು ಶೇಖರಣೆ ಮಾಡುವ ನಿಲ್ಲಿಸುವ ಯೋಜನೆಯನ್ನು ಹಾಕಿಕೊಂಡರೆ ಒಂದು ಉತ್ತಮ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ರೈತರಿಗೆ ಸರಾಗವಾಗಿ ನೀರು ಸಿಗುವುದಕ್ಕೆ ಒಂದು ಅವಕಾಶವಾಗುತ್ತದೆ. ಇದು ಬಹಳ ಪ್ರಮುಖವಾದ ಅಂಶ. ಇವತ್ತು ಎರಡು ನದಿಗಳು ತುಂಗಾ ಮತ್ತು ಭದ್ರಾ ಎರಡೂ ಸೇರತಕ್ಕ ಒಂದು ವಿಚಾರ ಇದೆ. ಆ ನೀರು ಶೇಖರಣೆಯಾಗಿ ಪ್ರತಿಯೊಬ್ಬರಿಗೂ ಕೂಡ ನೀರು ಸಿಗುತ್ತದೆ. ಈ ಯೋಜನೆ ಬಗ್ಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ರೈತರಿಗೆ ಅನೇಕ ವಿಚಾರಗಳಲ್ಲೂ ಆದಷ್ಟು ಹೆಚ್ಚಿನ ಮಟ್ಟಿಗೆ ಅವರಿಗೆ ಅನುಕೂಲವನ್ನು ಮಾಡಿಕೊಡಬೇಕು. ನಿಜವಾಗಿ ರೈತನ ಕಣ್ಣೀರನ್ನು ಒರೆಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಂಡು ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಮಂಡಿಸಿರುವ ಬೇಡಿಕೆಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಈಗಾಗಲೇ ವಿವಿಧ ಇಲಾಖೆಗಳ ಬೇಡಿಕೆಗಳ ಬಗ್ಗೆ ಅನೇಕ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಬಂದಿರುವುದು ನೀರಾವರಿ ಪ್ರದೇಶದಿಂದ. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಸುಮಾರು 365 ದಿವಸಗಳೂ ಕೂಡ ಕಾವೇರಿಯ ವರಪ್ರಸಾದದಿಂದ ನೀರು ನಮಗೆ ಬಹುತೇಕ

ಸರಾಸರಿ ಲಭ್ಯವಾಗತಕ್ಕ ಪ್ರದೇಶದಿಂದ ಬಂದಿರುವವನು. ಆದರೆ ಸುಮಾರು ಎರಡು ಲಕ್ಷ ಎಕರೆಗಳ ಕೃಷಿ ಪ್ರದೇಶವನ್ನು ಹೊಂದಿರತಕ್ಕದ್ದು ನಮ್ಮ ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶ. ನಿರ್ವಹಣಾ ಕಾಮಗಾರಿಗಳು ಸಮರ್ಪಕವಾಗಿಲ್ಲದೆ ನಾಲೆಯ ಕೊನೆಯ ಭಾಗದ ರೈತರಿಗೆ ನೀರಿನ ಕೊರತೆಯನ್ನು ಅನುಭವಿಸುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಕಾರಣವಿಷ್ಟೆ ಏನು ನೀರಾವರಿ ಇಲಾಖೆಯಿಂದ ತಲಾನುಧಾನವನ್ನು ಪ್ರತಿ ಎಕರೆಗೆ ವಾರ್ಷಿಕವಾಗಿ ಕೊಡುತ್ತಿದ್ದಾರೆ, ಅದು ಕೇವಲ ಅಲ್ಲಿರತಕ್ಕ ವಾಹನಗಳ ಇತರೆ ಒಂದು ಸಾಧನಗಳ ನಿರ್ವಹಣೆಗೆ ಸಾಕಾಗುತ್ತದೆಯೇ ಹೊರತು ನಮ್ಮ ಒಂದು ನಾಲೆಯ ಸಿಲ್ಟನ್ನು ತೆಗೆಯುವುದಾಗಲಿ, ಅಥವಾ ನಾಲಾ ರಿಪೇರಿ ಮಾಡುವುದಾಗಲಿ, ಪಿಕಪ್‌ನ್ನು ದುರಸ್ತಿ ಮಾಡುವುದಾಗಲೀ ನಮಗೆ ಸಾಲದೆ ನೀರಿನ ಒಂದು ಸಮಸ್ಯೆಯನ್ನು ಅನುಭವಿಸಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಸರ್ಕಾರ ಕೊಡುತ್ತಿರುವುದನ್ನು ಲೆಕ್ಕ ಹಾಕಿದರೆ ಪ್ರತಿ ಎಕರೆಗೆ 70 ರೂಪಾಯಿ ಬರಬಹುದು. ಇದನ್ನು ದುಪ್ಪಟ್ಟು ಮಾಡಬೇಕೆಂದು ನಾನಾದರೂ ಕೂಡ ಸರ್ಕಾರದಲ್ಲಿ ನಿವೇದನೆ ಮಾಡುತ್ತೇನೆ. ಈ ಹಿಂದೆ ನಮ್ಮ ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ನಾಲೆಯ ಕೊನೆಯ ಭಾಗದ ರೈತರಿಗೆ ಅನುಕಾಲವಾಗಬೇಕೆಂದು ಹೇಳಿ ಸುಮಾರು 17 ರಿಂದ 18 ಏತ ನೀರಾವರಿ ಕಾಮಗಾರಿಗಳನ್ನು ಸುಮಾರು ಐದು ಕೋಟಿ ರೂಪಾಯಿ ವೆಚ್ಚದಲ್ಲಿ ತೆಗೆದುಕೊಂಡಿತ್ತು. ಆ ಕಾರ್ಯ ಬಹುತೇಕ ತುಂಬಾ ನಿಧಾನಗತಿಯಲ್ಲಿ ನಡೆಯುತ್ತಿದ್ದು ಈಗ ಒಂದು ಮಳೆಯ ಏರುಪೇರಿನಿಂದ ನಮಗೆ ನೀರು ಬಹಳಷ್ಟು ಮುಖ್ಯವಾಗಿರುವುದರಿಂದ ನಿಗದಿತ ಈ ಒಂದು ಆಯವ್ಯಯ ವರ್ಷದ ಕೊನೆಯಲ್ಲಿ ಮುಗಿಸುವ ಹಾಗೆ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಹಾಗೆಯೇ ಸಣ್ಣ ನೀರಾವರಿ ಇಲಾಖೆಯಲ್ಲೂ ಅನೇಕ ಏತ ನೀರಾವರಿಗಳನ್ನು ಕೆರೆಗಳ ದುರಸ್ತಿ ಕಾರ್ಯಗಳನ್ನು ಮಂಡ್ಯ ಜಿಲ್ಲೆಯಲ್ಲಿ ತೆಗೆದುಕೊಂಡಿದ್ದು ಅವೆಲ್ಲಾ ಅನುದಾನದ ಕೊರತೆಯಿಂದಾಗಿ ಅಪೂರ್ಣವಾಗಿದೆ. ಇಡೀ ಜಿಲ್ಲೆಯಲ್ಲಿ ಸುಮಾರು 30-40 ಏತನೀರಾವರಿ ಕಾಮಗಾರಿಗಳನ್ನು ನಮ್ಮ ಪಾಂಡವಪುರ ಉಪವಿಬಾಗ ಮಂಡ್ಯ ಉಪವಿಭಾಗದಲ್ಲೂ ಕೂಡ ಸಣ್ಣ ನೀರಾವರಿಯನ್ನು ತೆಗೆದುಕೊಂಡಿದೆ. ಹಾಗೆಯೇ ಕೆರೆ ಕೆಲಸವನ್ನೂ ಕೂಡ ತೆಗೆದುಕೊಂಡಿರುವುದು ಅನುದಾನದ ಕೊರತೆಯಾಗಿರುವ ಕಾಲದಲ್ಲಿ ತೆಗೆದುಕೊಂಡಿದ್ದಾರೆ. ಆ ಸಣ್ಣ ನೀರಾವರಿ ಇಲಾಖೆಯಲ್ಲೂ ಕೂಡ ಮಂಡ್ಯ ಜಿಲ್ಲೆ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಬೇಕೆನ್ನುವುದನ್ನು ನಾನಾದರೂ ಕೂಡ ಈ ಸದನದಲ್ಲಿ ಪ್ರಸ್ತಾವಿಸಬಯಸುತ್ತೇನೆ. ಹಾಗೆಯೇ ಇತ್ತೀಚೆಗೆ ನೀರಾವರಿ ಸಹಕಾರ ಸಂಘಗಳನ್ನು ಈ ಒಂದು ರೈತರ ನೀರಿನ ನಿರ್ವಹಣೆಯನ್ನು ರೈತರ ಜವಾಬ್ದಾರಿಗೆ ಬಿಡಬೇಕು, ಸಮರ್ಪಕವಾಗಿ ಅವರಲ್ಲಿನ ಸಹಕಾರದಿಂದ, ಸಹಮತದಿಂದ ನೀರನ್ನು ಹಾಯಿಸುವ ವ್ಯವಸ್ಥೆಯನ್ನು ತರಬೇಕೆಂದು ಹೇಳಿ ಸರ್ಕಾರ ಮನಸ್ಸು ಮಾಡಿರತಕ್ಕದ್ದು, ಪ್ರಯತ್ನ ಮಾಡಿರತಕ್ಕದ್ದು ಬಹಳ ಸ್ವಾಗತಾರ್ಹವಾದ ವಿಚಾರ. ಆದರೆ ಆ ನೀರಾವರಿ ಆ

ನೀರಾವರಿ ಸಹಕಾರ ಸಂಘಗಳೂ ಕೂಡ ಇನ್ನು ರಚನೆಯಾಗತಕ್ಕದ್ದು ಅದನ್ನೂ ಶೈಶವಾವಸ್ಥೆಯಲ್ಲೇ ಇದೆ. ಅದು ಬಹಳ ತೀರ ಅವಶ್ಯಕತೆ ಇದೆ. ಕಾರಣವಿಷ್ಟೆ. ನೀರು ಬಹಳ ತುಂಬಾ ಅಪರೂಪದ ವಸ್ತುವಾಗುತ್ತಿದೆ. ಆ ನೀರಿನ ಸದ್ಬಳಕೆ ಆಗಬೇಕೆನ್ನುವ ರೀತಿಯಲ್ಲಿ ಎಷ್ಟು ಬೇಕೊ ಅಷ್ಟು ನೀರನ್ನು ಹಾಯಿಸಿಕೊಳ್ಳತಕ್ಕ ಒಂದು ವ್ಯವಸ್ಥೆಗೆ ಈ ನೀರಾವರಿ ಸಹಕಾರ ಸಂಘಗಳು ಪೂರಕವಾಗಿರುವ ಒಂದು ಅಂಶ. ಆದ್ದರಿಂದ ನೀರಾವರಿ ಸಹಕಾರ ಸಂಘಗಳನ್ನು ಮಾಡಬೇಕೆಂದು ಹೇಳಿ ನಮ್ಮ ಕೃಷಿ ಇಲಾಖೆ ಹಾಗೂ ನೀರಾವರಿ ಇಲಾಖೆ ಜಂಟಿಯಾಗಿ ಈ ರೈತನಿಗೆ ನೀರಿನ ಒಂದು ಮಹತ್ವವನ್ನು ತಿಳಿಯಪಡಿಸಿ ಆ ನೀರು ಪೋಲಾಗದೆ ಅವರಿಗೆ ಬೇಕಾದಷ್ಟು ಮಾತ್ರ ವೈಜ್ಞಾನಿಕವಾಗಿ ನೀರನ್ನು ಹಾಯಿಸತಕ್ಕ ಅಥವಾ ನೀರನ್ನು ಪಡೆದುಕೊಳ್ಳುವ ಒಂದು ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈ ಜಲಸಂವರ್ಧನೆ ಕಾರ್ಯಕ್ರಮ ರಾಜ್ಯ ಸರ್ಕಾರದ ಹೆಗ್ಗಳಿಕೆಯ ಕಾರ್ಯಕ್ರಮವಾಗಿದೆ, ಈ ಕಾರ್ಯಕ್ರಮದಡಿಯಲ್ಲಿ ನಮ್ಮ ವಿಶ್ವೇಶ್ವರಯ್ಯ ನಾಲಾ ಅಚುಕಟ್ಟು ಪ್ರದೇಶದಲ್ಲೂ ಕೂಡ ಕೆರೆ ನಮಗೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಇದ್ದ ಹಾಗೆ. ಆ ಕೆರೆಗಳನ್ನು ಕೂಡ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿ ಮಾಡುತ್ತೇನೆ. ಇವತ್ತು ಬಾರಿ ನೀರಾವರಿ ಪ್ರದೇಶದಲ್ಲಿರುವ ಕೆರೆಗಳ ನಿರ್ವಹಣೆಗೆ ನಮ್ಮ ಸಣ್ಣ ನೀರಾವರಿ ಇಲಾಖೆಯಿಂದ ಹಣವನ್ನು ಕೊಡಬೇಕಾಗುತ್ತದೆ. ಆದರೆ ವರ್ಷದ ಕೊನೆಯಲ್ಲಿ ಇಲಾಖೆಗೆ ಹಣ ಬಂದು ಈ ಕೆರೆಗಳ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ; ಜೊತೆಗೆ ಕೆರೆಗಳ ಒತ್ತುವರಿ ಕೂಡಾ ಈಗಾಗಲೇ ಆಗಿ ಕೆರೆಗಳು ಇವೆಯೋ ಇಲ್ಲವೋ ಎನ್ನುವ ರೀತಿಯಲ್ಲಾಗಿದೆ. ಆದರೆ ಕೆರೆಗಳು ಇರುವುದು ತುಂಬಾ ಅವಶ್ಯಕತೆ ಇದೆ, ಈ ಜನಸಂವರ್ಧನೆ ಯೋಜನೆಯಡಿಯಲ್ಲಿ ಕೆರೆಗಳನ್ನು ಉತ್ತಮಪಡಿಸುವುದರ ಜೊತೆಗೆ ಒತ್ತುವರಿಯಾಗಿರುವ ಕೆರೆಗಳನ್ನು ತೆರವು ಮಾಡಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಟ್ಟಾರೆ ಕಾವೇರಿ ಜಲಾಯನ ಪ್ರದೇಶದಲ್ಲಿ ಹೇಮಾವತಿ ಇರಬಹುದು, ಹಾರಂಗಿ ಇರಬಹುದು, ವಿಶ್ವೇಶ್ವರಯ್ಯ ಅಚ್ಚುಕಟ್ಟು ಪ್ರದೇಶದ ವರುಣಾ ನಾಲೆ ಇರಬಹುದು. ಈ ಕಾಮಗಾರಿಗಳು ನಾವು ನಿರೀಕ್ಷೆ ಮಾಡಿದ ರೀತಿಯಲ್ಲಿ ನಡೆಯದೆ ಯೋಜನೆ ಕುಂಟುತ್ತಾ ನಡೆಯುತ್ತಿದೆ. ಈಗ ಕೃಷ್ಣಾ ಜಲಭಾಗ್ಯ ನಿಗಮವೆಂದು ಸ್ಥಾಪಿಸಿ ಬಹಳ ಹೆಚ್ಚು ಒತ್ತನ್ನು ಕೊಟ್ಟು ನೀರಾವರಿ ಕಾಮಗಾರಿಗಳು ಸುಗಮವಾಗಿ ವೇಗವಾಗಿ ಆಗಬೇಕೆಂದು ಇಚ್ಛೆಯನ್ನು ಸರ್ಕಾರ ಏನು ಹೊಂದಿದೆಯೋ ಅದೇ ರೀತಿಯಲ್ಲಿ ನಮ್ಮ ಕಾವೇರಿ ಜಲಾಯನ ಪ್ರದೇಶದಲ್ಲೂ ಕೂಡ ಒಂದು ಕಾವೇರಿ ಜಲಭಾಗ್ಯ ನಿಗಮವನ್ನು ಪ್ರಾರಂಭ ಮಾಡುವುದು, ಇನ್ನು ನಮ್ಮ ಹೇಮಾವತಿ ಯೋಜನೆಯಲ್ಲಿರುವ ನೀರು ಇನ್ನು ಅನೇಕ ರೈತರಿಗೆ ತಲುಪಿಲ್ಲ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಾಗಬೇಕಾಗಿದೆ. ನಮ್ಮ ವಿಶ್ವೇಶ್ವರಯ್ಯ ನಾಲಾ ಕಾಮಗಾರಿಯು ಕೂಡ ಅಪೂರ್ಣವಾಗಿದೆ, ವರುಣ

ಕಾಮಗಾರಿಯೂ ಕೂಡ ಪೂರ್ಣವಾಗಬೇಕಾಗಿದೆ. ಇಷ್ಟೆಲ್ಲಾ ಕಾರ್ಯಕ್ರಮಗಳಿಗೆ ಒತ್ತು ಕೊಡುವ ರೀತಿಯಲ್ಲಿ ಒಂದು ಕಾವೇರಿ ಜಲಭಾಗ್ಯ ನಿಗಮವನ್ನೂ ಕೂಡ ಪ್ರಾರಂಭ ಮಾಡಬೇಕೆಂದು ಆಶಯವನ್ನು ವ್ಯಕ್ತಪಡಿಸುತ್ತೇನೆ. ತಮಗೆ ಗೊತ್ತಿರುವಂತೆ ನಮ್ಮಲ್ಲಿ ವರುಣ ನಾಲಾ ಚಳುವಳಿ ಬಹಳ ವ್ಯಾಪಕವಾಗಿದ್ದು, ಚಳುವಳಿ ನಡೆದ ಸಂದರ್ಭದಲ್ಲಿ ರೈತರು ಹಾಗೂ ಸರ್ಕಾರ ನಡುವೆ ಒಪ್ಪಂದವಾಗಿ ಅನೇಕವು ಜಾರಿಗೆ ಬಂದಿವೆ. ಈಗಾಗಲೇ 2-3 ವರ್ಷಗಳು ಪ್ರಾಯೋಗಿಕವಾಗಿ ವರುಣ ನಾಲೆಗೆ ನೀರನ್ನು ತರಿಸಿ, ನಂತರ ರೈತರಿಗೆ ಕೃಷಿಗೆ ನೀರು ಬಿಡುವುದಾಗಿದೆ. ಅದರಲ್ಲಿ ಬಹಳ ಪ್ರಮುಖವಾಗಿ ವರುಣ ಹಾಗೂ ವಿಶ್ವೇಶ್ವರಯ್ಯ ನಾಲಾ ಪ್ರದೇಶದ ರೈತರು ಬೆಳೆಯುವ ಕ್ರಾಪಿಂಗ್ ಪ್ಯಾಟ್ರನ್ ಏನು, ಅವರಿಗೆ ಎಷ್ಟೆಷ್ಟು ನೀರು ಬಿಡಬೇಕು, ಎಷ್ಟು ವೇಳೆ ನೀರು ಬಿಡಬೇಕು, ಹೀಗೆಲ್ಲಾ ಉಸ್ತುವಾರಿಯನ್ನು ಗಮನಿಸುವುದಕ್ಕೆ ಉಸ್ತುವಾರಿ ಸಮಿತಿಯನ್ನು ನೇಮಕ ಮಾಡಬೇಕೆಂದು ನಮ್ಮ ಮಂಡ್ಯ ರೈತರು ಹಾಗೂ ಸರ್ಕಾರದ ನಡುವೆ ಒಪ್ಪಂದವಾಗಿದೆ. ಈ ಬಗ್ಗೆ ಇನ್ನು ಆದೇಶ ಹೊರ ಬಂದಿಲ್ಲ. ಸರ್ಕಾರ ಆ ಉಸ್ತುವಾರಿ ಸಮಿತಿಯನ್ನು ಸ್ಟ್ಯಾಚ್ಯುಟರಿ ಪವರ್ಸ್ ಕೊಟ್ಟು ಕೃಪೆ ಮಾಡಬೇಕೆಂದು ಹೇಳುತ್ತೇನೆ. ಬಹಳ ಪ್ರಮುಖವಾಗಿ, ಕಾವೇರಿ ವಿವಾದದ ಸಮಸ್ಯೆಗೆ ಇನ್ನೇನು ಉತ್ತರ ಸಿಗುತ್ತದೆಂಬುದನ್ನು ನಾನು ತಮಿಳುನಾಡಿನ ಪತ್ರಿಕೆಯಲ್ಲಿ ನೋಡಿದೆ. ಕಾವೇರಿ ವಿವಾದದ ಹಿನ್ನಲೆಯಲ್ಲಿ ಈ ಎರಡು ಸದನಗಳಲ್ಲೂ ರಾಷ್ಟ್ರೀಯ ಜಲ ನೀತಿಯಡಿಯಲ್ಲಿ ಈ ವಿವಾದಕ್ಕೆ ಪರಿಹಾರ ಒದಗಿಸಿಕೊಡಬೇಕೆಂದು ನಿರ್ಣಯವಾಗಿತ್ತು. ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮುಖಾಂತರ ರಾಷ್ಟ್ರೀಯ ಜಲನೀತಿಯನ್ನು ರೂಪಿಸಲು ಒತ್ತಾಯವನ್ನು ಶೀಘ್ರವಾಗಿ ತರಬೇಕು, ಕಾವೇರಿ ಜಲವಿವಾದ ಪರಿಸಮಾಪ್ತಿಯಾಗಬೇಕು ಎನ್ನುವ ಒತ್ತಾಯಪೂರ್ವಕ ಮನವಿಯನ್ನು ಸರ್ಕಾರಕ್ಕೆ ಮಾಡುತ್ತೇನೆ. ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಕೃಷಿಕ ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಒದಗಿಸಿಕೊಡುವ ವ್ಯವಸ್ಥೆ ತೋಟಗಾರಿಕೆ ಇಲಾಖೆಯಲ್ಲಿದೆ. ಆದರೆ ಏಕರೂಪದ ಮಾರುಕಟ್ಟೆಯ ವ್ಯವಸ್ಥೆ ಇಲ್ಲ, ಈಗ ಮೂರು ರೀತಿಯ ಮಾರುಕಟ್ಟೆ ವ್ಯವಸ್ಥೆ ಇದೆ, ಅದಕ್ಕೆ ಬದಲಾಗಿ ಏಕ ರೂಪದ ಮಾರುಕಟ್ಟೆಯ ವ್ಯವಸ್ಥೆಯನ್ನು ತಂದರೆ ನಮ್ಮ ರೈತರು ಹಾಗೂ ಸಂಸ್ಥೆಗಳ ನಡುವೆ ಸಹಕಾರ, ಸಾಮರಸ್ಯವಿರುತ್ತದೆ ಹಾಗೂ ರೈತರಿಗೆ ಮಾರುಕಟ್ಟೆಯ ಸೌಲಭ್ಯ ಇನ್ನು ಉತ್ತಮವಾಗಿರುತ್ತದೆಂದು ಹೇಳುತ್ತೇನೆ. ನಮ್ಮ ತೋಟಗಾರಿಕೆ ಸಚಿವರು ಈ ತೋಟಗಾರಿಕೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಈಗಿರುವ ಮೂರು ಸಂಸ್ಥೆಗಳ ನಡುವೆ ಇಲ್ಲದಿರುವ ಸಾಮರಸ್ಯವನ್ನು ಸರಿಪಡಿಸಬೇಕು, ಇದಕ್ಕಾಗಿ ಏಕ ರೂಪದ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆತರಬೇಕು. ನಮ್ಮ ರಾಜ್ಯ ತೋಟಗಾರಿಕಾ ವಲಯದಲ್ಲಿ ರಾಷ್ಟ್ರದಲ್ಲಿ ಅಗ್ರಗಣ್ಯ ಸ್ಥಾನವನ್ನು ಹೊಂದಿದೆ, ನಮ್ಮ ತೋಟಗಾರಿಕ ಅಧಿಕಾರಿಗಳು ರೈತರ ನಡುವೆ ನಿರಂತರ ಸಂಪರ್ಕವನ್ನಿಟ್ಟುಕೊಂಡು, ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಷ್ಟೆ ಅಲ್ಲ ಮಾರುಕಟ್ಟೆ ವ್ಯವಸ್ಥೆಯನ್ನು ಆ ರೈತರಿಗೆ ಒದಗಿಸಿಕೊಡುವಲ್ಲಿ ಸಹಕಾರಿಯಾಗಿರಬೇಕೆಂದು ಹೇಳುತ್ತೇನೆ.

ಇನ್ನು ಬಹಳ ಚರ್ಚೆಗೆ ಒಳಪಟ್ಟಿರುವ ವಿಷಯವೆಂದರೆ ಈ ನುಸಿರೋಗದ ವಿಚಾರ, ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲಾಗುತ್ತಿಲ್ಲ. ರೈತರ ಬೇಡಿಕೆಗೆ ಅನುಗುಣವಾಗಿ ನುಸಿರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ಇನ್ನು ಹೆಚ್ಚು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡು ಯಶಸ್ವಿಯಾಗಬೇಕು. ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲೂ ಕೂಡ ಇತರೆ ಜಿಲ್ಲೆಗಳಂತೆ ನೀರಾ ಚಳುವಳಿ ಬಹಳ ವ್ಯಾಪಕವಾಗಿ ಹಬ್ಬಿದೆ. ನಮ್ಮ ರೈತರ ಬೇಡಿಕೆಯೂ ಕೂಡ ನೀರಾ ಇಳಿಸಲು ಸರ್ಕಾರ ಅನುಮತಿ ಕೊಡಬೇಕೆಂಬುದಾಗಿದೆ. ಸರ್ಕಾರದ ಬಹಳ ವಿಶಾಲ ದೃಷ್ಟಿಯಿಂದ ನೋಡಿ ಪ್ರಾಯೋಗಿಕವಾಗಿ ನಮ್ಮ ರೈತರ ಸಮಸ್ಯೆಗೆ ಸ್ಪಂದಿಸುವ ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಕ್ಕರೆ ಬಗ್ಗೆ ಹೇಳುವುದಾದರೆ, ನಾನು ಕಬ್ಬನ್ನು ಬೆಳೆಯುವ ಪ್ರದೇಶದಿಂದ ಬಂದವನಾಗಿದ್ದೇನೆ, ರಾಜ್ಯ ಸರ್ಕಾರಿ ಸಕ್ಕರೆ ಗೋದಾಮುಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಇದ್ದು, ಸಕ್ಕರೆಗೆ ಬೇಡಿಕೆಯಿಲ್ಲದೆ, ಸಕ್ಕರೆ ಉದ್ಯಮ ಬಹಳ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ಇದರಿಂದಾಗಿ ರೈತನಿಗೆ ಅವಧಿಗೂ ಮೀರಿ ಅವನ ಕಬ್ಬಿನ ಬೆಲೆಯನ್ನು ನೀಡುವುದಕ್ಕೆ ಇವತ್ತು ಸಕ್ಕರೆ ಕಾರ್ಖಾನೆಗಳಿಂದಾಗುತ್ತಿಲ್ಲ. ಆದಕಾರಣ ಈ ಸಕ್ಕರೆ ಉದ್ಯಮದ ನೆರವಿಗೆ ಸರ್ಕಾರ ಬರುವ ದೃಷ್ಟಿಯಲ್ಲಿ ಈಗಾಗಲೇ ಆವರ್ತ ನಿಧಿಯನ್ನು ಸ್ಥಾಪಿಸಿ ರೈತರ ನೆರವಿಗೆ ಸರ್ಕಾರ ಬರದಿರುವುದನ್ನು ಇಲ್ಲಿ ನೆನೆಸಿಕೊಳ್ಳುತ್ತೇನೆ. ಯಾವುದಾದರೂ ಒಂದು ನಿಧಿಯನ್ನು ಈ ಸಕ್ಕರೆ ಕಾರ್ಖಾನೆಗಳಿಗೆ ಪೂರಕವಾಗಿ ಸ್ಥಾಪಿಸುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕು, ಇದರಿಂದ ರೈತನಿಗೆ ಕೊಡಬೇಕಾದ ಬೆಲೆಯನ್ನು ಅಷ್ಟೋ ಇಷ್ಟೋ ಕೊಡುವುದಕ್ಕೆ ಸುಗಮವಾಗುತ್ತದೆಂದು ಹೇಳುತ್ತೇನೆ. ಈ ಸಕ್ಕರೆ ಕಾರ್ಖಾನೆಗಳಲ್ಲಿ ಸಮಗ್ರವಾಗಿ ಸಕ್ಕರೆ ಉತ್ಪಾದನೆ ಮಾಡುವ ಉತ್ಪಾದನಾ ವೆಚ್ಚವನ್ನು ತಗ್ಗಿಸದಿದ್ದರೆ, ರೈತನಿಗೆ ಬೆಲೆ ಕೊಡುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲದೆ ಇತರೆ ಉಪ ಉತ್ಪನ್ನಗಳಿಗೂ ಕೂಡ ಪ್ರೋತ್ಸಾಹ ಕೊಡುವ ಅವಶ್ಯಕತೆ ಹಿಂದೆಂದಿಗಿಂತ ತುಂಬಾ ಇದೆ. ಕೋಜನರೇಷನ್ ಘಟಕಗಳನ್ನು ಸ್ಥಾಪಿಸಬೇಕು, ತನ್ಮೂಲಕ ವಿದ್ಯುತ್ ಅನ್ನು ಉತ್ಪಾದಿಸಿ ರಾಜ್ಯದ ಗ್ರಿಡ್‌ಗೆ ಕೊಟ್ಟು ಈ ಕಾರ್ಖಾನೆಗಳು ಸ್ವಾವಲಂಬನೆಯಾಗುವುದಕ್ಕೆ ಪೂರಕವಾಗುತ್ತದೆ. ಅದಕ್ಕೆ ಒಂದು ನಿಗದಿತವಾದ ವೇಳೆಯನ್ನು ನಿಗದಿ ಮಾಡಬೇಕು, ಉದಾಹರಣೆಗೆ ಮೈಸೂರು ಸಕ್ಕರೆಯಲ್ಲಿ ಹತ್ತಾರು ವರ್ಷಗಳ ಹಿಂದೆ 35 ಕೋಟಿ ರೂಪಾಯಿಗಳಲ್ಲಿ ಕೋ-ಜನರೇಷನ್ ಘಟಕವನ್ನು ಪ್ರಾರಂಭ ಮಾಡಬೇಕೆಂದು ಯೋಚಿಸಲಾಗಿತ್ತು. ಇವತ್ತು ಆ ಯೋಜನೆಗೆ 65 ಕೋಟಿ ರೂಪಾಯಿ ಆದರೂ ಇನ್ನು ಕೂಡ ಪ್ರಾರಂಭ ಮಾಡುವುದಕ್ಕಾಗಿಲ್ಲ, ಇನ್ನು ಪೂರ್ವಭಾವಿ ಸಿದ್ಧತೆಯು ಕೂಡ ಇಲ್ಲ. ಹಣದ ವೆಚ್ಚ ಜಾಸ್ತಿಯಾದಂತೆ ದಿನೆ ದಿನೆ ಯೋಜನೆಯ ವೆಚ್ಚ ಜಾಸ್ತಿಯಾದಂತೆ ಅದರ ಹೊರೆ ರೈತನ ಮೇಲೆ ಬಿಳುತ್ತದೆ. ಖಾಸಗಿ ಅಥವಾ ಸರ್ಕಾರಿ ಸಕ್ಕರೆ ಕಾರ್ಖಾನೆಗಳಾಗಲಿ ಕೋಜನರೇಷನ್ ಘಟಕಗಳ ಸ್ಥಾಪನೆಗೂ ಕೂಡ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು

ಕೊಡಬೇಕು. ವಿಶೇಷವಾಗಿ ಈ ಸಕ್ಕರೆ ಕಾರ್ಖಾನೆಗಳಿಗೆ ರೀಲಿಸ್ ಆಗುವಂತಹ ಸಕ್ಕರೆಗೆ ಸಂಬಂಧಿಸಿದಂತೆ ನಮ್ಮ ರಾಜ್ಯಮಟ್ಟದಲ್ಲಿ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿ ನಮಗೆ ಸಕ್ಕರೆ ಬಿಡುಗಡೆಯಾಗುವಂತಹ ರೀತಿಯಲ್ಲಿ ಸರ್ಕಾರ ಪೂರಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಕೃಷಿ ಬಗ್ಗೆ ಈಗಾಗಲೇ ಸಾಕಷ್ಟು ಮಾತನಾಡಲಾಗಿದೆ. ಕೃಷಿಗೆ ಕೈಗಾರಿಕೆಯ ಸ್ಥಾನವನ್ನು ನೀಡಬೇಕೆಂಬುದು ರೈತರ ಒಕ್ಕೊರಲಿನ ಆಶಯಾಗಿದೆ ಅದನ್ನು ನಾನು ಪುಷ್ಟಿಕರಿಸುತ್ತೇನೆ. ಇವತ್ತು ರೈತನ ಕೃಷಿ ಸಾಮಾನು ಪರಿಕರಗಳ ಬೆಲೆ ಹೆಚ್ಚಾದರು ಕೂಡ, ರೈತ ಬೆಳೆದ ಬೆಳೆಯ ಬೆಲೆ ಸ್ಥಗಿತವಾಗಿ ಅಲ್ಲಿ ಕುಳಿತಿರುವ ಕಾಲದಲ್ಲಿ ಸಾಲದ ಹೊರೆ ಹೆಚ್ಚಾಗಿ ರೈತ ಆತ್ಮಹತ್ಯೆಗೆ ಪ್ರಯತ್ನಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ರಾಜ್ಯ ಸರ್ಕಾರ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಿ ಅದು ಕಾರ್ಯೋನ್ಮುಕ್ರವಾಗಿದೆ. ಆದರೆ ರೈತನಿಗೆ ತಾನು ಬೆಳೆದ ಬೆಳೆಯ ಬೆಲೆ ನಿಗದಿ ಮಾಡುವ ಸ್ವಾತ್ರಂತ್ಯ ಇನ್ನು ಬಂದಿಲ್ಲ. ರೈತನ ಅನಿಸಿಕೆಗೆ ತಕ್ಕಂತೆ ಬೆಲೆಯನ್ನು ನಿಗದಿ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಈ ಎಪಿಎಂಸಿಗಳಲ್ಲಿ ಈ ಎಲೆಕ್ಟ್ರಾನಿಕ್ಸ್ ತೂಕದ ಯಂತ್ರಗಳನ್ನು ಅಳವಡಿಸಬೇಕೆನ್ನುವ ಪ್ರಯತ್ನ ಇನ್ನೂ ಸಫಲವಾಗಿಲ್ಲ. ನಾವು ವೈಜ್ಞಾನಿಕ ಯುಗದಲ್ಲಿರುವ ಕಾರಣ ಈ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನೂ ಕೂಡ ವ್ಯಾಪಕವಾಗಿ ಬಳಸುವಂತಾಗಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರು ಇದುವರೆಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ವ್ಯಕ್ತಪಡಿಸಿ ಈ ಬೇಡಿಕೆಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಒಂದು ಪ್ರಕಟಣೆ ಇದೆ.

4. ಪ್ರಕಟಣೆ

ವಿಷಯ: W.T.O. ಕುರಿತಂತೆ ನಡೆಯಲಿರುವ ಚರ್ಚೆಯಲ್ಲಿ ಸದಸ್ಯರುಗಳು ಭಾಗವಹಿಸಲು ಮನವಿ

"ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯೂಟಿಓಗೆ) ಕುರಿತಂತೆ ದಿನಾಂಕ: 26.7.2001 ರಂದು ಸಂಜೆ 5.00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಚರ್ಚೆ ನಡೆಯಲಿದ್ದು, ಸದರಿ ಚರ್ಚೆಯಲ್ಲಿ ಭಾರತ ಸರ್ಕಾರದ ಕೃಷಿ ಕಾರ್ಯಪಡೆಯ ಅಧ್ಯಕ್ಷರಾದ ಶ್ರೀ ಶರದ್ ಜೋಶಿಯವರು ಭಾಗವಹಿಸಲಿದ್ದು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಉಪಸ್ಥಿತರಿದ್ದು ಹಾಗೂ ಕರ್ನಾಟಕ ಸರ್ಕಾರದ ಎಲ್ಲಾ ಸಚಿವರು ಇದರಲ್ಲಿ ಭಾಗವಹಿಸಲಿದ್ದಾರೆ. ಆದುದರಿಂದ, ತಾವೂ ಕೂಡ ವಿಶ್ವ ವ್ಯಾಪಾರ ಸಂಘಟನೆ ಕುರಿತ ಚರ್ಚೆಯ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ."

5. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಈಗಾಗಲೇ ಈ ರಾಜ್ಯದ ಬೃಹತ್ ಆಯವ್ಯಯದ ಅಂಗೀಕಾರದ ಕೊನೆಯ ಹಂತದಲ್ಲಿದ್ದು, ಪ್ರಮುಖವಾದ ವಿವಿಧ ಇಲಾಖೆಗಳ ಬೇಡಿಕೆಗಳ ಅನುಮೋದನೆಗೆ ಸರ್ಕಾರ ಕಾಯುತ್ತಿರುವಂಥ ಸಂದರ್ಭದಲ್ಲಿ ನಾನು ಕೇವಲ ಎರಡು ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚು ಗಮನಹರಿಸುವುದಕ್ಕೆ ಇಚ್ಛಿಸುತ್ತೇನೆ. ಅಧಿವೇಶನ ಪ್ರಾರಂಭವಾದಂದಿನಿಂದ ಈ ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ 70 ಭಾಗದಷ್ಟಿರುವ ರೈತರ ಹಿತಚಿಂತನೆ ಕುರಿತಂತೆ ನಾವೆಲ್ಲರೂ ಚರ್ಚಿಸುತ್ತಿದ್ದು, ಇದರ ಫಲಶೃತಿ ರೈತರಿಗೆ, ಜನ ಸಾಮಾನ್ಯರಿಗೆ ತಲುಪಿದಾಗ ಮಾತ್ರ ಚರ್ಚೆ ಸಾರ್ಥಕವಾಗುತ್ತದೆ. ಇವೊತ್ತು ರಾಜ್ಯ ಬರದ ಕಠಿಣ ಪರಿಸ್ಥಿತಿ ಎದುರಿಸುತ್ತಿರುವ ಸಂದರ್ಭದಲ್ಲಿ ಹಾಗೂ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರುವಂಥ ರೈತರು ಇರುವ ಅಲ್ಪಸ್ವಲ್ಪ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರ ವಿದ್ಯುತ್ ಸರಬರಾಜನ್ನು ಯಾವ ರೀತಿ ಮಾಡುತ್ತದೆಂಬ ಬಗ್ಗೆ ವಿಶೇಷ ಆಸಕ್ತಿಯಿಂದ ನಮ್ಮ ಕಡೆ ನೋಡುತ್ತಿದ್ದಾರೆ. ಕಳೆದ ಬಾರಿಯ ಅಧಿವೇಶನದ ಸಂದರ್ಭದಲ್ಲಿ ಏಪ್ರಿಲ್ ತಿಂಗಳಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ 'ತಮಿಳುನಾಡಿನ ಮಾದರಿಯಲ್ಲಿ ಮೇ 1ನೇ ತಾರೀಖಿನಿಂದ ರಾತ್ರಿ ಹತ್ತು ಗಂಟೆಯಿಂದ ಬೆಳಗ್ಗೆ ಆರು ಗಂಟೆವರೆಗೆ ತಡೆರಹಿತವಾಗಿ ವಿದ್ಯುತ್ ಸರಬರಾಜು ಮಾಡಲಾಗುವುದು' ಎಂದು ಘೋಷಿಸಿದರು. ಈಗ ಸದನದಲ್ಲಿದ್ದ ನಾವೆಲ್ಲರೂ ಕೂಡ ಪಕ್ಷಾತೀತವಾಗಿ ಮೇಜು ತಟ್ಟುವ ಮೂಲಕ ಘೋಷಣೆಯನ್ನು ಸ್ವಾಗತಿಸಿದೆವು. ಅನಂತರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಘೋಷಣೆ ಕಾರ್ಯರೂಪಕ್ಕೆ ಬಾರದಿದ್ದಾಗ ನನಗನ್ನಿಸಿದ್ದು ಏನೆಂದರೆ "ಏಪ್ರಿಲ್ ಒಂದನೇ ತಾರೀಖಿನಂದು ನಾವೆಲ್ಲರೂ "ಏಪ್ರಿಲ್ ಫೂಲ್" ಆಗಿದ್ದೇವೆಯೇ ಎಂಬ ಭಾವನೆ ನಮ್ಮನ್ನು ಕಾಡುತ್ತಿದೆ. ಮತ್ತೊಮ್ಮೆ ಜೂನ್ ತಿಂಗಳನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯಲ್ಲಿ ಮಾತನಾಡುತ್ತಾ ನಾನು ರೈತರಿಗೆ ಕೊಟ್ಟಿರುವಂಥ ಮಾತನ್ನು ಯಾರಿಗೆ ನಡೆಸುವುದಕ್ಕೆ ಸಾಧ್ಯವಿಲ್ಲವೋ, ಆ ಇಲಾಖೆಯವರು ಯಾರೇ ಆಗಿರಬಹುದು, ಅಂತಹ ಪರಿಸ್ಥಿತಿ ನಿರ್ಮಾಣವಾಗುವುದಾದರೆ 'ತಲೆಗಳು ಉರುಳುತ್ತವೆ' (ಹೆಡ್ ವಿಲ್ ರೋಲ್) ಎಂದು ಹೇಳುವ ಮೂಲಕ ಇಲಾಖೆಯವರನ್ನು ತಲ್ಲಣಗೊಳಿಸಿದರು. ಇದರಿಂದ ನಾವು ಬಹಳಷ್ಟು ನಿರೀಕ್ಷಿಸಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದಂತೆ ಇವೊತ್ತಿನ ವರೆಗೆ ನಿಗದಿತ ಅವಧಿಯಲ್ಲಿ ವಿದ್ಯುತ್ ಸರಬರಾಜಾಗಿಲ್ಲ ಮತ್ತು ಯಾವುದೇ ತಲೆಗಳೂ ಕೂಡ ಉರುಳಿದ್ದು ಕಾಣುತ್ತಿಲ್ಲ. ಅಂದರೆ, ಘೋಷಣೆಗಳು ಕೇವಲ ಘೋಷಣೆಗಳಾಗಿಯೇ ಉಳಿಯುವಂಥ ವ್ಯವಸ್ಥೆಗಳು ವಿದ್ಯುತ್ ಇಲಾಖೆ-ಯಲ್ಲಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಗ್ರಾಮೀಣ ಪ್ರದೇಶದ ರೈತರಿಗೆ ಒದಗಿಸಲಾಗುತ್ತಿರುವ

ವಿದ್ಯುತ್ ಸೌಕರ್ಯವನ್ನು ಹೆಚ್ಚಿಸುವುದಕ್ಕೋಸ್ಕರ ಭಾರತ ಸರ್ಕಾರ ವಿಶೇಷವಾಗಿ ತ್ವರಿತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸರ್ಕಾರಕ್ಕೆ ಕಳೆದೆರಡು ತಿಂಗಳಿನಲ್ಲಿ 295 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಆ ಬಗ್ಗೆ ಯಾವುದೇ ಮನವಿ ಸಲ್ಲಿಸದಿದ್ದರೂ ಕೂಡ ಭಾರತ ಸರ್ಕಾರ ರಾಜ್ಯ ಸರ್ಕಾರಕ್ಕೆ ಇಷ್ಟು ಮೊತ್ತದಲ್ಲಿ ಹಣ ಬಿಡುಗಡೆ ಮಾಡಿದೆ. ಈಗ ಸದನದಲ್ಲಿ ವಿದ್ಯುತ್ ಖಾತೆಗೆ ಸಂಬಂಧಿಸಿದ ಇಬ್ಬರೂ ಮಂತ್ರಿಗಳೂ ಇಲ್ಲ. ನಾನು ಸರ್ಕಾರದಿಂದ ನಿರೀಕ್ಷಿಸಿದ್ದು ಏನೆಂದರೆ, ಇಂತಹ ಪ್ರಮುಖ ಕ್ಷೇತ್ರದ ಬಗ್ಗೆ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲೀ ಮತ್ತು ವಿದ್ಯುತ್ ಖಾತೆಯ ಸಹಾಯಕ ಸಚಿವರಾಗಲೀ ಇಬ್ಬರೂ ಇಲ್ಲದಿರುವುದರಿಂದ ನಾನು ಈ ಕುರಿತು ಮಾತನಾಡುವಂಥ ಅವಶ್ಯಕತೆಯಿದೆಯೇ ಎಂದು ಯೋಚಿಸುತ್ತಿದ್ದೇನೆ. ಉಪಾಧ್ಯಕ್ಷರಾದ ತಾವು ಹೇಗೆ ಹೇಳುತ್ತಿರೋ ಹಾಗೆ ನಾನು ನಡೆದು ಕೊಳ್ಳುತ್ತೇನೆ. ಸಚಿವರುಗಳು ಸದನಕ್ಕೆ ಬಂದ ನಂತರ ಮಾತನಾಡಿ ಎಂದರೆ ಹಾಗೆಯೇ ಮಾಡುತ್ತೇನೆ. ಸಂಬಂಧಪಟ್ಟ ಸಚಿವರು ಇಲ್ಲದಿರುವುದರಿಂದ ಇಲ್ಲಿ ನಾನು ಯಾರನ್ನು ಉದ್ದೇಶಿಸಿ ಮಾತನಾಡಬೇಕು? ಕೇವಲ ಮಾಧ್ಯಮದವರಿಗೋಸ್ಕರ ಮಾತನಾಡುವುದಾದರೆ ಮಾತನಾಡುತ್ತೇನೆ. ಬದಲಿಗೆ 'ಬೇಡ, ಇಡೀ ರಾಜ್ಯದ ವ್ಯವಸ್ಥೆ ಇದಲ್ಲ' ಎನ್ನುವುದಾದರೆ ಕುಳಿತುಕೊಳ್ಳುತ್ತೇನೆ. ತಾವು ಹೇಗೆ ಹೇಳುತ್ತೀರೋ ನಾನು ಹಾಗೆ ಮಾಡುತ್ತೇನೆ.

ಉಪಾಧ್ಯಕ್ಷರು :— ಇದು ನಿಮಗೆ ಬಿಟ್ಟಿರುವ ವಿಷಯ. ಸಂಬಂಧಪಟ್ಟ ಸಚಿವರು ಬಂದ ನಂತರವೇ ತಾವು ಮಾತನಾಡುವುದಾದರೆ ಈಗ ಕುಳಿತುಕೊಳ್ಳಿ. ಅವರು ಬಂದಾಗ ಮಾತನಾಡಿ. ಸಚಿವರು ಮೇಲ್ಮನೆಯಲ್ಲಿರುವುದರಿಂದ ಇಲ್ಲಿಗೆ ಬರುವವರೆಗೂ ಕಾಯಬೇಕು.

(ಆ ಹಂತದಲ್ಲಿ ಇಂದನ ರಾಜ್ಯ ಸಚಿವರಾದ ಶ್ರೀ ವೀರಕುಮಾರ್ ಎ. ಪಾಟೀಲ್‌ರವರು ಸದನಕ್ಕೆ ಆಗಮಿಸಿದರು)

ಉಪಾಧ್ಯಕ್ಷರು :— ಈಗ ಸಚಿವರು ಬಂದಿರುವುದರಿಂದ ತಾವು ಮಾತನ್ನು ಮುಂದುವರೆಸಬಹುದು.

ಶ್ರೀ ಎ. ರಾಮದಾಸ್ :— ರಾಜ್ಯವು ವಿದ್ಯುತ್ ಕ್ಷೇತ್ರದಲ್ಲಿ ಬಹಳ ಕಠಿಣ ಪರಿಸ್ಥಿತಿ ಎದುರಿಸುತ್ತಿರುವಂಥ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ತ್ವರಿತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ ಬಿಡುಗಡೆ ಮಾಡಿದ ಹಣದಲ್ಲಿ ರೈತಾಪಿ ವರ್ಗವು ತಮ್ಮ ಪಂಪುಸೆಟ್ಟುಗಳಿಗೆ ವಿದ್ಯುತ್ ಸೌಕರ್ಯ ಕಲ್ಪಿಸಿಕೊಳ್ಳುವ ಸಲುವಾಗಿ ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು, ಅರ್ಜಿಗಳನ್ನು ತಕ್ಷಣದಲ್ಲಿ ವಿಲೇವಾರಿಗೊಳಿಸುವುದಕ್ಕೆ ಅಗತ್ಯವಾದ

ಹೊಸ ಯೋಜನೆಯನ್ನು ರಾಜ್ಯ ಸರ್ಕಾರವು ಘೋಷಿಸಿ ಕಾರ್ಯ ರೂಪಕ್ಕೆ ತರುತ್ತದೆಂದು ನಾವು ಇಟ್ಟುಕೊಂಡಿದ್ದ ನಿರೀಕ್ಷೆ ಫಲಿಸಿಲ್ಲ. ಆದುದರಿಂದ, ಸರ್ಕಾರ ಈಗಲಾದರೂ ಈ ನಿಟ್ಟಿನಲ್ಲಿ ಹೊಸ ಕಾರ್ಯಕ್ರಮ ರೂಪಿಸಿ ತಮ್ಮ ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಣ ಸೌಲಭ್ಯ ಕಲ್ಪಿಸಿಕೊಡುವ ಸಂಬಂಧ ಸಲ್ಲಿಸಿರುವ ಅರ್ಜಿಗಳನ್ನು ತಕ್ಷಣದಲ್ಲಿ ವಿಲೇವಾರಿಗೊಳಿಸಿ ಸದರಿ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ವಿಶೇಷವಾದ ಕ್ರಮ ಕೈಗೊಳ್ಳಬೇಕೆಂದು ಹೇಳಲಿಚ್ಛಿಸುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಇಡೀ ರಾಷ್ಟ್ರದಲ್ಲಿ ಕರ್ನಾಟಕ ಸರ್ಕಾರ ಅಗ್ಗದ ದರದಲ್ಲಿ ವಿದ್ಯುತ ಉತ್ಪಾದಿಸುವ ರಾಜ್ಯವಾಗಿದೆ. ಸರ್ಕಾರ ನೀಡಿರುವ ಮಾಹಿತಿ ಪ್ರಕಾರ ಹೈಡಲ್ ಪವರ್‌ನಲ್ಲಿ ಒಂದು ಯೂನಿಟ್ ವಿದ್ಯುತ್ ಉತ್ಪಾದಿಸಲು ಖರ್ಚಾಗುತ್ತಿರುವ ಹಣ ನಲವತ್ತು ಪೈಸೆಯಾಗಿದ್ದರೆ, ಥರ್ಮಲ್ ಪವರ್‌ನ ಒಂದು ಯೂನಿಟ್‌ಗೆ ಎರಡು ರೂಪಾಯಿ 23 ಪೈಸೆ ಹಾಗೂ ಸೆಂಟ್ರಲ್ ಗ್ರಿಡ್‌ನಿಂದ ಒಂದು ಯೂನಿಟ್‌ಗೆ 1 ರೂಪಾಯಿ 73 ಪೈಸೆ ತೆತ್ತು ವಿದ್ಯುತ್ ಖರೀದಿಸುತ್ತಿದೆ. ಅಲ್ಲದೆ, ವಿದ್ಯುತ್ ಕ್ಷೇತ್ರ ಬರ ಎದುರಿಸುವಂಥ ಸಂದರ್ಭದಲ್ಲಿ ಪಕ್ಕದ ರಾಜ್ಯಗಳಿಂದ ಒಂದು ಯೂನಿಟ್‌ಗೆ ಎರಡು ರೂಪಾಯಿ 41 ಪೈಸೆ ತೆತ್ತು ವಿದ್ಯುತ್ ಖರೀದಿಸುತ್ತಿದೆ. ನನಗೆ ಆಶ್ಚರ್ಯವಾಗುವುದೇನೆಂದರೆ, ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್‌ಗಳಿಂದ ರಾಜ್ಯ ಸರ್ಕಾರ ಒಂದು ಯೂನಿಟ್ ವಿದ್ಯುತ್‌ಗೆ ಏಳು ರೂಪಾಯಿ 16 ಪೈಸೆ ತೆತ್ತು ವಿದ್ಯುತ್ ಕೊಳ್ಳುವಂಥ ವ್ಯವಸ್ಥೆ ಮಾಡಿದೆ. ರಾಜ್ಯ ಸರ್ಕಾರವೇ ಸಲ್ಲಿಸಿರುವ ಕೆ.ಇ.ಆರ್.ಸಿ. ವರದಿಯಲ್ಲಿ ಈ ಕುರಿತು ತಿಳಿಸಿದ್ದು ಸರ್ಕಾರ ಈ ರಾಜ್ಯವನ್ನು ಯಾವ ದಿಕ್ಕಿನತ್ತ ತೆಗೆದುಕೊಂಡು ಹೋಗುತ್ತಿದೆ ಎಂಬ ಬಗ್ಗೆ ನಾವೆಲ್ಲರೂ ಯೋಚಿಸಬೇಕಾಗುತ್ತದೆ. ರಾಜ್ಯದಲ್ಲಿನ ವಿದ್ಯುತ್ ಕ್ಷೇತ್ರದ ಸುಧಾರಣೆಗಾಗಿ 1999ರಲ್ಲಿ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಒಂದು ಕಾಯ್ದೆಯನ್ನು ಅಂಗೀಕರಿಸಲಾಗಿದ್ದು, ಇದರ ಫಲಿತಾಂಶ ಏನಾಯಿತು? ಅಲ್ಲದೆ ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಷನ್ ಕಮೀಷನ್ ಸಹ ನೇಮಿಸಿ, ಇದಕ್ಕೆ ಕೊಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಫಲಿತಾಂಶ ಏನಾಗಿದೆ? 1995-96ರಲ್ಲಿ ಶೇಕಡ 16 ರಷ್ಟು ನಷ್ಟ ವಿದ್ಯುತ್ ಪ್ರಸರಣಾ ಮತ್ತು ವಿತರಣೆಯಲ್ಲಿದ್ದರೆ, 1996ರಲ್ಲಿ ಸಹ ಅಷ್ಟೇ ಶೇಕಡಾ ಇದ್ದು, ಕಳೆದ ವರ್ಷ ಶೇಕಡ 38 ರಷ್ಟು ಪ್ರಸರಣಾ, ವಿತರಣಾ ನಷ್ಟದ ಜೊತೆಗೆ ವಿದ್ಯುತ್ ಕಳ್ಳತನವೂ ಆಗಿದೆ. ಇಷ್ಟು ಪ್ರಮಾಣದಲ್ಲಿ ರಾಜ್ಯದಲ್ಲಿ ವಿದ್ಯುತ್ ನಷ್ಟವಾಗುತ್ತಿರುವುದರಿಂದ ಸರ್ಕಾರ ಯಾವ ದಿಕ್ಕಿನಲ್ಲಿ ತನ್ನ ಚಿಂತನೆ ನಡೆಸಿದೆ ಎಂಬುದನ್ನು ಕೇಳಬಯಸುತ್ತೇನೆ. ವಿದ್ಯುತ್ ಪ್ರಸರಣಾ ಮತ್ತು ವಿತರಣೆಯಲ್ಲಿನ ನಷ್ಟವನ್ನು ತಡೆಗಟ್ಟಿ ಅಪ್-ಗ್ರೇಡ್ ಮಾಡುವುದಕ್ಕೋಸ್ಕರ 1997ರಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಮತ್ತು ರೂರಲ್ ಎಲೆಕ್ಟ್ರಿಸಿಟಿ ಕಾರ್ಪೊರೇಷನ್‌ನಿಂದ ಸುಮಾರು 1,474 ಕೋಟಿ ರೂಪಾಯಿಗಳಷ್ಟು ಸಾಲದ ಹಣ ತಂದಿರಿ. ಈ ರೀತಿ ತಂದಿರುವ ಹಣವನ್ನು ಕಳೆದ ಮೂರು ವರ್ಷಗಳಲ್ಲಿ

ವಿನಿಯೋಗಿಸಿದ ಬಳಿಕ ಶೇಕಡ 16ರಷ್ಟಿದ್ದ ವಿದ್ಯುತ್ ಪ್ರಸರಣ ಹಾಗೂ ವಿತರಣಾ ನಷ್ಟ ಶೇಕಡ 38ರಷ್ಟಾಯಿತು! ಅಂದರೆ, ನಷ್ಟದಲ್ಲಿ ಶೇಕಡ 12 ರಷ್ಟು ಹೆಚ್ಚಾಗಿದೆಯೆಂದಾಗ ತಂದಂಥ ಸಾಲದ ಹಣದಿಂದ ಉಪಯೋಗವೇನಾಗಿದೆ? ವಿದ್ಯುತ್ ಕಳ್ಳತನದ ವಿಚಾರವಾಗಿ ಹೇಳುವುದಾದರೆ, ವಿದ್ಯುತ್ ಕಳ್ಳತನವನ್ನು ತಡೆಗಟ್ಟಲು ವಿಚಕ್ಷಣಾ ದಳ (ವಿಜಿಲೆನ್ಸ್ ಸ್ಕ್ವಾಡ್) ಏನಿತ್ತು, ಅದನ್ನು ಸರ್ಕಾರ 'ಪೊಲೀಸ್ ಠಾಣೆ'ಯಾಗಿ ಪರಿವರ್ತಿಸಿ ಕಾನೂನು ಮಾಡಿದಾಗ ಸರ್ಕಾರಿ ಆಜ್ಞೆಯನ್ನು ಆ ಸಂಬಂಧವಾಗಿ ಹೊರಡಿಸಿತು. ಮತ್ತು ಪೊಲೀಸ್ ಠಾಣೆಯಾಗಿ ಪರಿವರ್ತಿಸಿದ ಬಳಿಕ ಅದಕ್ಕೆ ಹೆಚ್ಚಿನ ಸ್ವಾಯತ್ತತೆ ನೀಡಿದಾಗ ನಾವು ಸರ್ಕಾರದ ಕ್ರಮವನ್ನು ಸ್ವಾಗತಿಸಿದೆವು ಹಾಗೂ ಇದರಿಂದ ತಕ್ಷಣದಲ್ಲಿ ಒಳ್ಳೆಯ ರೀತಿಯ ಪರಿಣಾಮಗಳುಂಟಾಗಬಹುದೆಂದು ನಿರೀಕ್ಷಿಸಿದ್ದೆವು. ಇದರ ಬಗ್ಗೆ ನಾವು ಹೇಳಲೇಬೇಕಾಗಿದೆ.

4.10 ಪಿ.ಎಂ.

ಕಳೆದಬಾರಿ ಇದೇ ಸದನದಲ್ಲಿ ಈ ವಿಷಯವನ್ನು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಕಾಗೋಡುತಿಮ್ಮಪ್ಪನವರು ಬಹಳ ವಿಚಾರಗಳನ್ನು ನೋಟ್ ಮಾಡಿದ್ದರು. ಕಳೆದ ಬಾರಿಗೆ ಹೋಲಿಕೆ ಮಾಡಿದಾಗ ವಿದ್ಯುತ್ ಕಳ್ಳತನವನ್ನು 2.4 ಪರ್‌ಸೆಂಟ್‌ಗೆ ನಿಲ್ಲಿಸಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇವೆ. ಆ ರೀತಿ 2.4 ಪರ್‌ಸೆಂಟ್ ಕಳ್ಳತನವನ್ನೇನು ನಿಲ್ಲಿಸಿದ್ದೀರಿ ವಿಥ್ ವಾಟ್ ಕಾಸ್ಟ್? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ಪುಲಿಕೇಶಿ ಪಡೆಯೆಂಬುದನ್ನು ನಿರ್ಮಾಣ ಮಾಡಿದರು, ವಿದ್ಯುತ್ ಇಲಾಖೆಯಲ್ಲಿ ಇದೊಂದು ಒಳ್ಳೆಯ ಮೈಲುಗಲ್ಲು. ಆ ಪಡೆಯು ತನ್ನದೇ ಆದ ರೀತಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡಿ ವಿದ್ಯುತ್ ಕ್ಷೇತ್ರದಲ್ಲಿ ಹೋದ ವರ್ಷಕ್ಕಿಂತ ಸುಮಾರು 80 ಕೋಟಿ ರೂಪಾಯಿ ಹಣವನ್ನು ವಿದ್ಯುತ್ ಕಳ್ಳತನದಲ್ಲಿ ನಿಲ್ಲಿಸಿದ್ದಾರೆ. ಇದು ಒಂದು ಭಾಗವಾದರೆ, ಎರಡನೆಯದಾಗಿ ವಿದ್ಯುತ್ ಇಲಾಖೆಯ ಸುಧಾರೀಕರಣದ ಹೆಸರಿನಲ್ಲಿ 13,500 ಸಾವಿರ ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕ್‌ನಿಂದ ಸಾಲವನ್ನಾಗಿ ತರಲು ಹೆಜ್ಜೆ ಇಟ್ಟಿದ್ದೀರಿ. ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ವಿವಿಧ ಹಂತಗಳಲ್ಲಿ, ವಿಶ್ವಬ್ಯಾಂಕ್ ಯೋಜನೆಯ ಕರಡುಗಳನ್ನು ತಂದು ಪರಿವರ್ತನೆಯ ಹಾದಿಯಲ್ಲಿ ಹೆಜ್ಜೆಯನ್ನಿಟ್ಟಿದ್ದೀರಿ. ಸುಧಾರಣೆಯ ಹೆಸರಿನಲ್ಲಿ ವಿಶ್ವ ಬ್ಯಾಂಕ್‌ನ ಸಾಲಕ್ಕಾಗಿ ವಿಶ್ವ ಬ್ಯಾಂಕ್‌ನವರು ಕೊಟ್ಟಿರುವ ರಿಫಾರ್ಮ್ಸ್ ಏನಿದೆ ಅದರಿಂದ ಮುಂದೆ ಏನಾಗುತ್ತದೆ ಎಂಬ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇಡೀ ದೇಶದಲ್ಲಿ ಮೊದಲ ಬಾರಿಗೆ ವಿದ್ಯುತ್ ಕ್ಷೇತ್ರಕ್ಕೆ ವಿಶ್ವ ಬ್ಯಾಂಕ್‌ನಿಂದ ಹಣವನ್ನು ಸಾಲವನ್ನಾಗಿ ತಂದಂಥವರು ಒರಿಸ್ಸಾ ರಾಜ್ಯದವರು. ಅವರು ಕಳೆದ ಮೂರು ವರ್ಷಗಳ ಹಿಂದೆ ಸಾಲವನ್ನು ತಂದರು. ಆ ರೀತಿ ತಂದ ಮೇಲೆ ವಿಶ್ವಬ್ಯಾಂಕ್‌ನವರು ಹೇಳಿದ ರೀತಿಯಲ್ಲೇ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿದರು, ವಿದ್ಯುತ್ ವಿತರಣಾ ನಷ್ಟವನ್ನು ಸರಿಮಾಡುತ್ತೇವೆಂದು

ವಿಶ್ವ ಬ್ಯಾಂಕ್‌ನವರು ಹೇಳಿದ ರೀತಿಯಲ್ಲಿ ಆಡಳಿತಾತ್ಮಕ ರಿಫಾರ್ಮ್ಸ್‌ನ್ನು ಮಾಡಿದರು. ಅದರ ಜೊತೆಗೆ ಇಡೀ ವಿದ್ಯುತ್ ಇಲಾಖೆಯನ್ನು ತನ್ನದೇ ಆದಂಥ ರೀತಿಯಲ್ಲಿ ವಿಂಗಡನೆ ಮಾಡಿಕೊಟ್ಟರು. ಒರಿಸ್ಸಾ ರಾಜ್ಯದವರು ವಿಶ್ವಬ್ಯಾಂಕ್‌ನ ನಾರ್ಮ್ಸ್ ಪ್ರಕಾರ ಹೋಗಿ ವಿದ್ಯುತ್ ಮಂಡಳಿಯ ನೌಕರರಿಗೆ ಸಂಬಳವನ್ನು ಕೊಡಲಾರದೆ ಆ ರಾಜ್ಯದ ಪರಿಸ್ಥಿತಿ ಹೇಳಲು ಅಸಾಧ್ಯವಾಗಿದೆ. ಎರಡೂವರೆ ಸಾವಿರ ಕೋಟಿ ರೂಪಾಯಿ ಸಾಲದ ಹಣವನ್ನು ಹಿಂದಕ್ಕೆ ಕೋಡಬೇಕಾಗಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಕಾರಣ ಯಾರ್‍ಯಾರನ್ನು ಹೇಳಿದ್ದರೋ ಅಂಥ ವ್ಯಕ್ತಿಗಳಿಗೆ ಗ್ಲೋಬಲ್ ಟೆಂಡರ್ ಮೂಲಕ ವಿತರಣಾ ವ್ಯವಸ್ಥೆಯನ್ನು ಕೊಟ್ಟರು. ಆದರೆ ಇವತ್ತು ವಿತರಣೆ ಉತ್ಪಾದನೆ, ಸರಬರಾಜು ಈ ಮೂರರ ಮಧ್ಯದಲ್ಲಿ ಸಾಮರಸ್ಯವಿಲ್ಲದೆ ಒರಿಸ್ಸಾದಲ್ಲೇನು ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಬಗ್ಗೆ ನಾವು ನೀವೆಲ್ಲರೂ ನೋಡಿಕೊಂಡು ಮುಂದಿನ ಹೆಜ್ಜೆಯನ್ನು ಇಡುವಾಗ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಹದಿನೈದು ದಿವಸಗಳ ಹಿಂದೆ ಒಂದು ಸಭೆಯಲ್ಲಿ ಮಾತನಾಡುತ್ತಾ ವಿದ್ಯುತ್ ವಿಚಾರದಲ್ಲಿ ಯಾರು ಹೆಜ್ಜೆಯನ್ನಿಡುತ್ತಿದ್ದಾರೋ ಅಂಥವರಿಗೆ ಕ್ಯಾಲಿಫೋರ್ನಿಯನ್ ಪವರ್ ಕ್ರೈಸಿಸ್ ಒಂದು ದೊಡ್ಡ ಪಾಠವೆಂದು ಹೇಳಿದ್ದರು. ಕ್ಯಾಲಿಫೋರ್ನಿಯಾದಲ್ಲಿ ಇದೇ ರೀತಿ ವಿಶ್ವಬ್ಯಾಂಕ್‌ನಿಂದ ಸಾಲವನ್ನು ಪಡೆದಂಥ ಸಂದರ್ಭದಲ್ಲಿ ಎಲ್ಲವನ್ನೂ ಖಾಸಗೀಕರಣ ಮಾಡಿದರು. ಇಡೀ ಅಮೇರಿಕಾಕ್ಕೆ ವಿದ್ಯುತ್‌ನ್ನು ಕೊಡುವ ಕ್ಷೇತ್ರ ಆದಾಗಿತ್ತು. ಆದರೆ ಕಳೆದ ನಾಲ್ಕು ತಿಂಗಳಿನಿಂದ ಅಲ್ಲಿರುವ ಖಾಸಗಿ ಕಂಪನಿಗಳು ತಮ್ಮಲ್ಲಿ ಸಿಂಡಿಕೇಟ್‌ನ್ನು ಮಾಡಿಕೊಂಡು ಐವತ್ತು ಪರ್‌ಸೆಂಟ್ ಕಂಪನಿಗಳು ಉತ್ಪಾದನೆಯನ್ನು ನಿಲ್ಲಿಸಿದರು. ಆದ್ದರಿಂದ ವಿದ್ಯುತ್‌ಗೆ ಹಾಹಾಕಾರವಾಗಿ ಇಡೀ ಪ್ರಪಂಚದಲ್ಲಿ ಕ್ಯಾಲಿಫೋರ್ನಿಯನ್ ಪವರ್ ಕ್ರೈಸಿಸ್ ಒಂದು ದೊಡ್ಡ ಪಾಠವಾಗಿ ನಮ್ಮ ಮುಂದಿದೆ. ಆದ್ದರಿಂದ ವಿದ್ಯುತ್ ಕ್ಷೇತ್ರದಲ್ಲಿ ಒಂದು ಸುಧಾರಣೆಯ ಸಲುವಾಗಿ ಹೊರಟಿರುವಾಗ ನಾವು ಇಡುವ ಹೆಜ್ಜೆ ಏನು ಎನ್ನುವುದು ಬಹಳ ಮುಖ್ಯವಾದ ವಿಚಾರ. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಎಲ್ಲರ ಜೊತೆಯಲ್ಲಿ ಸಮಾಲೋಚನೆ ಮಾಡಿದ ನಂತರ, ವಿಶೇಷವಾಗಿ ಟೆಕ್ನೋಕ್ರಾಟ್ಸ್ ಜೊತೆಯಲ್ಲಿ ಪ್ರಮುಖರಾದ ಚರ್ಚೆಯಾದ ನಂತರ ಮುಂದಿನ ಹೆಜ್ಜೆ ಇಡಬೇಕೆಂದು ಹೇಳಬಯಸುತ್ತೇನೆ. ಇವರು ವಿಶ್ವ ಬ್ಯಾಂಕ್‌ನಿಂದ ಸಾಲವನ್ನು ತರುವಂಥ ಸಂದರ್ಭದಲ್ಲಿ ಯಾರಿಂದ ಸಲಹೆಯನ್ನು ಕೇಳಿದ್ದಾರೆಂದರೆ, ಕನ್‌ಸಲ್ಟೆಂಟ್ ಆಗಿ ಸಿ.ಎಂ.ಎಸ್. ಕ್ಯಮರಾ, ಯುಕೆ ಇವರಿಗೆ ನಮ್ಮಲ್ಲಿರುವಂಥ ಇಂಜಿನಿಯರ್ಸ್‌ಗಳು ಕೊಡುವಂಥ ಮಾಹಿತಿಯನ್ನು ಸಂಗ್ರಹಿಸಿ ವರದಿ ನೀಡಲು 14 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದಾರೆ. ಇದಲ್ಲದೆ, ಪವರ್ ವಾಟರ್ ಹೌಸ್ ಕೂಪರ್ಸ್, ಯುಕೆ. ಇವರಿಗೆ ಮೆನೇಜ್‌ಮೆಂಟ್ಸ್‌ಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು 18 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಮೆಕಾನ್ ಇಂಡಿಯ ಇವರಿಗೆ ನಮ್ಮಲ್ಲಿರುವ ಮಾನವ ಶಕ್ತಿ

ಏನಿದೆ ಅದನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು ಎಂಬ ವಿಚಾರದಲ್ಲಿ ವರದಿ ನೀಡಲು ಒಂದು ಕೋಟಿ ಹಣವನ್ನು ಕನ್‌ಸಲ್‌ಟೇಷನ್ ಫೀ ಕೊಡುತ್ತಿದ್ದಾರೆ. ಹೀಗಾಗಿ ಸುಮಾರು 35 ಕೋಟಿ ರೂಪಾಯಿಗಳನ್ನು ಕೊಟ್ಟು ಕೇವಲ ನಮ್ಮ ವರದಿಯ ಆಧಾರದ ಮೇಲೆ ಅವರಿಂದ ವರದಿಯನ್ನು ಪಡೆದುಕೊಳ್ಳುವ ಸಲುವಾಗಿ ವಿಶ್ವಬ್ಯಾಂಕ್‌ನ ಸೂಚನೆ ಪ್ರಕಾರ ನಾವು ಹೆಜ್ಜೆಯನ್ನು ಇಡುತ್ತಿದ್ದೇವೆ. ಕಳೆದ ಸಲ 17 ಪರ್‌ಸೆಂಟ್‌ನಷ್ಟು ವಿದ್ಯುತ್ ದರವನ್ನು ಜಾಸ್ತಿ ಮಾಡಿ ಸರ್ಕಾರ ಒಂದು ದೊಡ್ಡ ಶಾಕ್‌ನ್ನು ನೀಡಿತು. ಕಳೆದ ವಾರದ ಸಚಿವ ಸಂಪುಟದ ಸಭೆಯಲ್ಲಿ ಮತ್ತೆ 20 ಪರ್‌ಸೆಂಟ್ ವಿದ್ಯುತ್ ದರವನ್ನು ಹೆಚ್ಚು ಮಾಡುವ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ವಿಧಾನಸಭೆಯ ಅಧಿವೇಶನ ನಡೆಯುತ್ತಿದೆಯೆಂಬ ಕಾರಣಕ್ಕಾಗಿ, ಬೇರೆ ಬೇರೆ ಯಾವುದೋ ಕಾರಣಕ್ಕಾಗಿ ಆ ಪ್ರಸ್ತಾವನೆಯನ್ನು ಮುಂದೂಡಿದ್ದಾರೆ. ತಕ್ಷಣವೇ ಅದಕ್ಕೆ ಚಾಲ್ತಿ ಕೊಡುವ ಕೆಲಸಗಳು ಪ್ರಾರಂಭವಾಗುತ್ತಿದೆ. ಕಾರಣವೇನೆಂದರೆ, ರಾಜ್ಯ ಸರ್ಕಾರದವರು ಸಾಲವನ್ನು ಮಾಡುತ್ತಿರುವ ಸಂದರ್ಭದಲ್ಲಿ ವಿಶ್ವಬ್ಯಾಂಕ್‌ಗೆ ಒಂದು ಮುಚ್ಚಳಿಕೆಯನ್ನು ಬರೆದು ಕೊಟ್ಟಿದ್ದಾರೆ. ವಿದ್ಯುತ್ ರೀಪೇಮೆಂಟ್ ಕೆಪ್ಯಾಸಿಟಿ ಎಷ್ಟಿದೆ ಎಂಬುದನ್ನು ತೋರಿಸುವುದಕ್ಕಾಗಿ ಉತ್ಪಾದನಾ ವೆಚ್ಚ ಎಷ್ಟು ಬೇಕಾದರೂ ಆಗಿರಲಿ, ಪ್ರತಿ ವರ್ಷ 15 ಪರ್‌ಸೆಂಟ್ ವಿದ್ಯುತ್ ದರವನ್ನು ಹೆಚ್ಚು ಮಾಡುತ್ತೇವೆಂದು ವಿಶ್ವಬ್ಯಾಂಕ್‌ನವರಿಗೆ ಮುಚ್ಚಳಿಕೆಯನ್ನು ರಾಜ್ಯ ಸರ್ಕಾರ ಕೊಟ್ಟಿದೆ. ಯಾರ ಹಿತಕ್ಕಾಗಿ ಈ ರೀತಿ ಮುಚ್ಚಳಿಕೆಯನ್ನು ನೀಡಿದ್ದೀರಿ ಎಂಬುದನ್ನು ತಾವು ತಿಳಿಸಬೇಕು. ಕೆ.ಪಿ.ಟಿ.ಸಿ.ಎಲ್ ನೌಕರರಿಗೆ ನಿವೃತ್ತಿ ವೇತನವನ್ನು ಕೊಡಲು ಏನು 3100 ಕೋಟಿ ರೂ. ಬೇಕಾಗಿತ್ತೋ ಆ ಹಣ ನಮ್ಮಲ್ಲಿ ಇಲ್ಲ, ಅದನ್ನು ಮೊಬಿಲೈಸ್ ಮಾಡುವುದಕ್ಕೋಸ್ಕರ ಹಣವನ್ನು ಪಡೆಯುವುದಕ್ಕೋಸ್ಕರ ವಿಶ್ವಬ್ಯಾಂಕ್‌ಗೆ ಹೋಗುತ್ತಿದ್ದೇವೆ ಎಂಬ ಅಂಶ ವರದಿಯಲ್ಲಿ ಬಂದಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. 13,500 ಕೋಟಿ ರೂಪಾಯಿಗಳ ಸಾಲದಲ್ಲಿ ಈಗಾಗಲೇ ಮೂರು ಸಾವಿರ ಕೋಟಿ ರೂಪಾಯಿ ಪಡೆಯಲು ಎಲ್ಲಾ ಯೋಜನೆಗಳು ಆಗಿದೆ, ಈ ಹಣಕ್ಕೆ ನಾವು 12 ಪರ್‌ಸೆಂಟ್ ಬಡ್ಡಿಯನ್ನು ಕೊಡತಕ್ಕ ವ್ಯವಸ್ಥೆ ಬಂದಿದೆ. ತಾವು ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿಕರಣ ಮಾಡಲು ಹೊರಟಿದ್ದೀರಿ. ಟ್ರಾನ್ಸ್‌ಮಿಷನ್‌ನ್ನು ಖಾಸಗೀಕರಣ ಮಾಡಲು ಹೊರಟಿದ್ದೀರಿ. ಯಾವ ಪುರುಷಾರ್ಥಕ್ಕಾಗಿ ಹಾಗೆ ಮಾಡಲು ಹೊರಟಿರಿ? 1999ರಲ್ಲಿ ಇದೇ ವಿಚಾರವಾಗಿ ಇಲ್ಲಿ ಚರ್ಚೆಗೆ ಬಂದಿದ್ದಾಗ ನಾವು ಹೊಸದಾಗಿ ತಿದ್ದುಪಡಿಯನ್ನು ಮಾಡಿ ತಮಗೆ ಅವಕಾಶವನ್ನು ಮಾಡಿಕೊಟ್ಟೆವು. ರಾಜ್ಯದಲ್ಲೇನು ಐದು ವಿಭಾಗಗಳು ಇದೆ ಅದನ್ನು ರೀಜನಲ್ ಬಿಸ್‌ನೆಸ್ ಸೆಂಟರ್ಸ್ ಎಂದು ಈಗಾಗಲೇ ಡಿಕ್ಲೇರ್ ಮಾಡಿಕೊಂಡಿದ್ದಾರೆ. ಅದಕ್ಕೆ ಮುಖ್ಯ ಕಾರ್ಯದರ್ಶಿಗಳು, ಮುಖ್ಯ ಅಭಿಯಂತರುಗಳು ಮುಖ್ಯಸ್ಥರಾಗಿದ್ದಾರೆ. ಅವರುಗಳ ಜೊತೆಯಲ್ಲಿ ಕೆ.ಪಿ.ಟಿ.ಸಿ.ಎಲ್‌.ನ ಅಧ್ಯಕ್ಷರು ಎಂ.ಓ.ಯು.ಗೆ ಸಹಿ ಮಾಡಿದ್ದಾರೆ. ಒಂದು ವರ್ಷವಾಯಿತು. ಎಂ.ಓ.ಯು.ಗೆ ಸಹಿ ಮಾಡಿದ ಮೇಲೆ ಅದು ಇಂಡಿಪೆಂಡೆಂಟ್

ಬಾಡಿಯಾಗುತ್ತದೆ. ರಾಜ್ಯದಲ್ಲಿರುವ ಐದು ರೀಜನಲ್ ಬಿಸ್‌ನೆಸ್ ಸೆಂಟರ್ಸ್ ಏನಿವೆ ಅದು ಇಂಡಿಪೆಂಡೆಂಟ್ ಕೇಂದ್ರಗಳಾಗುತ್ತದೆ. ಆ ರೀತಿಯಾದ ಮೇಲೆ ವಿದ್ಯುತ್ ಕ್ವಾಲಿಟಿಯಲ್ಲಿ, ವಿದ್ಯುತ್ ಸರಬರಾಜಿನಲ್ಲಿ ಅಡೆತಡೆಯಿಲ್ಲದೆ ವಿದ್ಯುತ್ ಒದಗಿಸುವಲ್ಲಿ ಏನಾದರೂ ಅಭಿವೃದ್ಧಿಯಾಗಿದೆಯೇ? ಇರತಕ್ಕ ಹ್ಯೂಮನ್ ರಿಸೋರ್ಸ್‌ನಲ್ಲಿ ಏನಾದರೂ ಅಭಿವೃದ್ಧಿಯಾಗಿದೆಯೇ? ಏನು ಸಾಧನೆಯಾಗಿದೆ ಎಂಬ ಬಗ್ಗೆ ಮೊದಲು ತಿಳಿಸಿ ಅನಂತರ ಇನ್ನೊಂದು ಕೆಲಸವನ್ನು ಮಾಡಲು ತಾವು ಹೋಗಬೇಕು. ಏನು ಸಾಧನೆ ಆಗಿದೆ ಎನ್ನುವುದನ್ನು ದಯವಿಟ್ಟು ತಿಳಿಸಿ. ಅನಂತರವೇ ಇನ್ನೊಂದು ಪರಿವರ್ತನೆಗೆ ಹೋಗುವಂತಹ ಕೆಲಸವನ್ನು ನೀವು ಮಾಡಬೇಕು. ಇವತ್ತು ರಾಜ್ಯ ಪವರ್ ಡಿಫಿಸಿಟ್ ಸ್ಟೇಟ್ ಆಗುತ್ತಿದೆ. ವಿಷಯ ಸಮಿತಿಯ ವರದಿ ಪ್ರಕಾರ ರಾಜ್ಯದಲ್ಲಿ ಸುಮಾರು 8 ಸಾವಿರ ಮೆಗಾವಾಟ್ ಜಲ ವಿದ್ಯುತ್ ಅನ್ನು ಉತ್ಪಾದನೆ ಮಾಡುವಂತಹ ಪೊಟೆನ್‌ಷಿಯಾಲಿಟಿ ಇದೆ. ವಿಶೇಷವಾಗಿ ಮಿನಿ ಹೈಡಲ್ ಮೂಲಕ ರಾಜ್ಯದಲ್ಲಿ ತಕ್ಷಣವೇ ಸುಮಾರು 3,000 ಮೆಗಾವ್ಯಾಟ್ ವಿದ್ಯುತ್ ಅನ್ನು ತಯಾರು ಮಾಡಲಿಕ್ಕೆ ಬೇಕಾಗಿರುವಂತಹ ಎಲ್ಲಾ ಪರಿಕರಗಳು ನಮ್ಮ ಮುಂದೆ ಇವೆ ಎಂಬ ವಿಚಾರವನ್ನು ವರದಿಯಲ್ಲಿ ಹೇಳಿದ್ದಾರೆ. ನಾನು ಈ ಮಾತನ್ನು ಹೇಳಿದ ತಕ್ಷಣ ಮಾನ್ಯ ಮಂತ್ರಿಗಳು ವಿಶೇಷವಾಗಿ ಆಂಧ್ರ ಪ್ರದೇಶ-ಕರ್ನಾಟಕ ಮತ್ತು ಕರ್ನಾಟಕ ತಮಿಳುನಾಡು ರಾಜ್ಯಗಳ ಮಧ್ಯೆ ಇರುವಂತಹ ಕೆಲವು ಜಲ ವಿವಾದಗಳಿಂದಾಗಿ ಇದು ಸಾಧ್ಯವಿಲ್ಲ ಎಂದು ಹೇಳಬಹುದು. ಇಂತಹ ಸಂದರ್ಭದಲ್ಲಿ ನ್ಯಾಷನಲ್ ಹೈಡಲ್ ಪವರ್ ಕಾರ್ಪೊರೇಷನ್‌ರವರಿಗೆ ಇದನ್ನು ವಹಿಸಿ ಕೊಟ್ಟಿದ್ದೇ ಆದರೆ ಅವರು ಉತ್ಪತ್ತಿ ಮಾಡಿ ಕೇವಲ 1.63 ಪೈಸೆ ಒಂದು ಯೂನಿಟ್ ಕರೆಂಟ್ ಅನ್ನು ಎರಡೂ ರಾಜ್ಯಗಳಿಗೆ ಕೊಡುವ ಒಪಪ್ಪಂದಕ್ಕೆ ಸಹಿ ಮಾಡಲಿಕ್ಕೆ ಇವತ್ತು ಕೇಂದ್ರ ಸರ್ಕಾರ ರೆಡಿಯಾಗಿದೆ. ದಯಮಾಡಿ ಇಂತಹ ವಿಚಾರಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕು. ವರ್ಲ್ಡ್ ಬ್ಯಾಂಕ್ ಸಾಲಕ್ಕೆ ಹೋಗುವುದರ ಬದಲು ತಾವು ಬೆಂಗಳೂರು ಮಹಾ ನಗರದಲ್ಲಿ ಹಿಂದಿನ ಸರ್ಕಾರ ಬಾಂಡ್ ಸಿಸ್ಟಮ್ ಅನ್ನು ತಂದ ರೀತಿಯಲ್ಲಿ ಇವತ್ತು ಹೈಡ್ರೋ ಪವರ್ ಕಾರ್ಪೊರೇಷನ್ ಎಂಬುದನ್ನು ಮಾಡಿ ಅದಕ್ಕೆ ಬೇಕಾಗಿರುವಂತಹ ಹಣವನ್ನು ಸೇರಿಸಲಿಕ್ಕೆ ಪವರ್ ಬಾಂಡ್ಸ್ ಅನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿ. ಆಗ ವಿಶೇಷವಾಗಿ ಯಾರು ಪವರ್ ಬಾಂಡ್ ತೆಗೆದುಕೊಳ್ಳುತ್ತಾರೋ ಅವರಿಗೆ ಇನ್‌ಕಂ ಟ್ಯಾಕ್ಸ್ ಎಗ್ಸೆಂಪ್‌ಷನ್ ಸಿಗುತ್ತದೆ. ಕಡಿಮೆ ಬಡ್ಡಿಯ ದರದಲ್ಲಿ ನಿಮಗೆ ಬಾಂಡಿನ ಮುಖಾಂತರ ಹಣ ಬರುತ್ತದೆ. ಬರುವಂತಹ ಲಾಭ ನಮ್ಮ ರಾಜ್ಯದಲ್ಲಿರುವಂತಹ ಸಾಮಾನ್ಯ ವ್ಯಕ್ತಿಗೆ ಮುಟ್ಟುತ್ತದೆ. ಅದನ್ನು ಬಿಟ್ಟು ಇವತ್ತು ಕ್ಯಾಲಿಫೋರ್ನಿಯಾ ಮತ್ತು ಒರಿಸ್ಸಾಗಳಲ್ಲಿ ಆಗಿರುವಂತಹ ರೀತಿಯಲ್ಲಿ ನಮ್ಮ ಹಣವನ್ನು ವರ್ಲ್ಡ್ ಬ್ಯಾಂಕಿನಿಂದ ಯಾವುದೇ ದೇಶಕ್ಕೆ ಮುಟ್ಟಿಸುವಂತಹ ಕೆಲಸವನ್ನು ಮಾಡುವಂಥಾದ್ದು ಆಗಬಾರದು. ಇದರ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಈ ಬಾರಿ ರಾಜ್ಯ ಸರ್ಕಾರ ಕೆಇಆರ್‌ಸಿ ಮುಂದೆ ಮನವಿಯೊಂದನ್ನು ಸಲ್ಲಿಸಿ ಅದರಲ್ಲಿ ತನ್ನ ಲಾಭ ನಷ್ಟದ ಬಗ್ಗೆ ಹೇಳಿದೆ. ಲಾಭ-ನಷ್ಟವನ್ನು ಹೇಳುವಂತಹ ಸಂದರ್ಭದಲ್ಲೂ ಕೂಡ 28,387 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡಲಾಗುತ್ತಿದೆ. ಅದಕ್ಕೆ

4,713 ಕೋಟಿ ರೂಪಾಯಿಗಳ ವೆಚ್ಚ ತಗಲುತ್ತಿದೆ. ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಮತ್ತು ಥೆಫ್ಟ್ ಮುಖಾಂತರ 9,651 ಮಿಲಿಯನ್ ಯೂನಿಟ್‌ಗಳು ಈ ಬಾರಿ ಸೋರಿ ಹೋಗುತ್ತದೆ ಎಂಬುದಾಗಿ ಇವತ್ತು ರಾಜ್ಯ ಸರ್ಕಾರ ಹೇಳಿಕೊಂಡಿದೆ. ಕಳೆದ ಬಾರಿಗಿಂತ ಕೇವಲ 2 ರಷ್ಟು ಮಾತ್ರ ಈ ಸಲ ಸೋರಿಕೆ ಕಡಿಮೆಯಾಗಿದೆ. 1474 ಕೋಟಿ ರೂಪಾಯಿಗಳ ಇನ್‌ವೆಸ್ಟ್ ಮಾಡಿದ ನಂತರವೂ ಕೂಡ ಶೇಕಡ 2 ರಷ್ಟು ಮಾತ್ರ ಕಡಿಮೆಯಾಗಿದೆ. ಅದೂ ಕೂಡ ಒಬ್ಬ ಎಫಿಷಿಯೆಂಟ್ ಆಫಿಸರ್ ನೇತೃತ್ವದಲ್ಲಿ 'ಪುಲಿಕೇಶಿ ಪಡೆ' ಎಂಬುದನ್ನು ರಚಿಸಿ ಕಳ್ಳತನದ ಪ್ರಕರಣಗಳನ್ನು ಪತ್ತೆ ಹಚ್ಚಿದ್ದರಿಂದ ಆಗಿದೆ. 82 ಕೋಟಿ ರೂಪಾಯಿಗಳು ಮಾತ್ರ ಸೇವ್ ಆಗಿದೆ. ಇವತ್ತು ಒಂದು ಆಶ್ಚರ್ಯ ನಮ್ಮ ಮುಂದೆ ಕಾದಿದೆ. ಕಳೆದ ಬಾರಿ ಕೂಡ ಒಂದು ಬಹಳ ಮುಖ್ಯವಾದಂತಹ ವಿಚಾರವನ್ನು ಪದೇ ಪದೇ ಹೇಳುವಂತೆ ಮಾನ್ಯ ಕಾಗೋಡು ತಿಮ್ಮಪ್ಪನವರು ಕೇಳಿದರು. ಮಾನ್ಯ ತಿಮ್ಮಪ್ಪನವರೇ, ನಾನು ಮತ್ತೊಮ್ಮೆ ಇದೇ ವಿಚಾರವನ್ನು ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ಇರುವಂತಹ ವಿದ್ಯುತ್ ಅನ್ನು ಉತ್ಪಾದನೆಮಾಡುತ್ತಿರುವಂತಹ ಘಟಕಗಳಲ್ಲಿ 10,543 ಮಿಲಿಯನ್ ಯೂನಿಟ್‌ಗಳನ್ನು ಉತ್ಪಾದಿಸಲು ನಾವು 451.66 ಕೋಟಿ ರೂಪಾಯಿಗಳನ್ನು ಪ್ರಸ್ತುತ ವರ್ಷದಲ್ಲಿ ಖರ್ಚುಮಾಡುತ್ತಿದ್ದೇವೆ. ಇದಲ್ಲದೇ ಥರ್ಮಲ್ ಪವರ್‌ನಿಂದ 8,235 ಮಿಲಿಯನ್ ಯೂನಿಟ್‌ಗಳನ್ನು ಉತ್ಪಾದಿಸಲು 1841 ಕೋಟಿ ರೂಪಾಯಿಗಳು ಅವತ್ತು ಖರ್ಚಾಗುತ್ತಿದೆ. ತಣ್ಣೀರು ಬಾವಿ, ರಾಯಲಸೀಮಾ, ಟಾಟಾ ಮತ್ತು ಜಿಂದಾಲ್‌ಗಳಂತಹ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ಸ್‌ಗಳಿಂದ ಇವತ್ತು ಸರ್ಕಾರ ಕೇವಲ 919 ಮಿಲಿಯನ್ ಯೂನಿಟ್‌ಗಳನ್ನು ಖರೀದಿಸಲು 658.37 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. 10 ಸಾವಿರ ಮಿಲಿಯನ್ ಯೂನಿಟ್‌ಗಳಿಗೆ ಸರ್ಕಾರ 451 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೆ, ಕೇವಲ 919 ಮಿಲಿಯನ್ ಯೂನಿಟ್‌ಗಳನ್ನು ಪರ್ಚೇಸ್ ಮಾಡುವ ಸಲುವಾಗಿ ಇವತ್ತು 658.37 ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿದೆ. ಮಾನ್ಯ ವಿಶ್ವೇಶ್ವರ ಹೆಗಡೆಯವರು ತಣ್ಣೀರು ಬಾವಿಯವರು ಪ್ರೊಡಕ್ಷನ್ ಅನ್ನು ಪ್ರಾರಂಭ ಮಾಡಿದ್ದಾರೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ಸರ್ಕಾರದವರು ತಣ್ಣೀರು ಬಾವಿ ಸಂಸ್ಥೆಯವರು ಈಗಾಗಲೇ ಪ್ರೊಡಕ್ಷನ್ ಅನ್ನು ತಯಾರು ಮಾಡಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಒಂದು ಮೂಲದ ಪ್ರಕಾರವಾಗಿ ತಾವೇ ಸರ್ಕಾರದ ವತಿಯಿಂದ, ಅದಕ್ಕೆ ಬೇಕಾದಂತಹ ಎಕ್ವಿಪ್‌ಮೆಂಟ್ಸ್ ಇನ್ನೂ ಬೇಕಾಗಿದೆ, ಅದು ಪ್ರೊಡಕ್ಷನ್ ಪ್ರಾರಂಭ ಮಾಡಿದ ನಂತರದಲ್ಲಿ ಅವರು ಕ್ಲೈಮ್ ಮುಂದೆ ಹೋಗುತ್ತಾರೆ. ಅಲ್ಲಿಯವರೆಗೆ ನಾವು ಪರ್ಚೇಸ್ ಮಾಡಿಲ್ಲ ಎಂದು ಹೇಳಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಇನ್ನೊಂದು ಹೇಳಿಕೆಯನ್ನೂ ಕೂಡ ಸರ್ಕಾರದವರು ಕೊಟ್ಟಿದ್ದಾರೆ. ಅವರ ಬೆಲೆ 5.60 ರೂಪಾಯಿ ಆಯಿತು, ಆದ್ದರಿಂದ ಅದನ್ನು ಪರ್ಚೇಸ್ ಮಾಡುವುದಿಲ್ಲ ಎನ್ನುವಂತಹ ಹೇಳಿಕೆಯನ್ನು ಸಹ ಸರ್ಕಾರದವರು ಕೊಟ್ಟಿದ್ದಾರೆ.

ಶ್ರೀ ಎ. ರಾಮದಾಸ್:— ಇವತ್ತು ಅಲ್ಲಿ ಏನಾಗಿದೆ? ಇವತ್ತು ನೀವೇ ಕೊಟ್ಟ ಮಾಹಿತಿಯ ಪ್ರಕಾರ ನಾನು ಇದನ್ನು ಹೇಳುತ್ತಿದ್ದೇನೆ. ಇದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇದರ ಬಗ್ಗೆ ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು. ರಾಜ್ಯ ಸರ್ಕಾರ ತಾನು ಮಾಡಿಕೊಂಡ ಅಗ್ರಿಮೆಂಟ್ ಪ್ರಕಾರವೇ ಒಂದು ಯೂನಿಟ್ ಪವರ್ ಅನ್ನೂ ಕೂಡ ಪರ್ಚೇಸ್ ಮಾಡದೆ ಫಿಕ್ಸೆಡ್ ಚಾರ್ಜಸ್ ಆಗಿ ರಾಯಲಸೀಮಾದವರಿಗೆ 21.80 ಕೋಟಿ ರೂಪಾಯಿಗಳು ತಣ್ಣೀರು ಬಾವಿಯವರಿಗೆ 314.50 ಕೋಟಿ ರೂಪಾಯಿಗಳು ಮತ್ತು ಟಾಟಾದವರಿಗೆ 74.8 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ ಎನ್ನುವಂತಹ ವಿಚಾರವನ್ನು ರಾಜ್ಯ ಸರ್ಕಾರವೇ ಕೆ.ಇ.ಆರ್.ಸಿ ಮುಂದೆ ಫೈಲ್ ಮಾಡಿದಂತಹ ಮನವಿಯಲ್ಲಿ ತಿಳಿಸಿದೆ. ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಇವತ್ತು ಯಾವ ರೇಟ್‌ನಲ್ಲಿ ಕೊಂಡುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಆಗಲೇ ಹೇಳಿದರು. ಸರ್ಕಾರ ಪತ್ರಿಕೆಯಲ್ಲಿ ಹೇಳುವಂತಹ ಮಾತೇ ಬೇರೆ. ಇವತ್ತು ಸರ್ಕಾರದ ವರದಿಯ ಪ್ರಕಾರವೇ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ಸ್‌ಗಳಿಂದ ಒಂದು ಯೂನಿಟ್ ಕರೆಂಟ್‌ಗೆ 7.16 ರೂಪಾಯಿಯ ದರದಲ್ಲಿ ಈ ವರ್ಷ ನಾವು ವಿದ್ಯುತ್ ಕೊಂಡುಕೊಳ್ಳುತ್ತೇವೆ ಎಂದು ಹೇಳಲಾಗಿದೆ. ಈ ರಾಜ್ಯವನ್ನು ನೀವು ಇವತ್ತು ಏನು ಮಾಡಲಿಕ್ಕೆ ಹೊರಟಿದ್ದೀರಿ? ಒಂದು ಯೂನಿಟ್ ಕರೆಂಟ್‌ಗೆ 7.16 ರೂಪಾಯಿ ದರದಲ್ಲಿ ಐಪಿಪಿಗಳಿಂದ ವಿದ್ಯುತ್ ಪರ್ಚೇಸ್ ಮಾಡುವುದಕ್ಕೆ ರಾಜ್ಯ ಸರ್ಕಾರ ಇವತ್ತು ಸಿದ್ಧವಾಗಿದೆ. 411 ಕೋಟಿ ರೂಪಾಯಿಗಳನ್ನು ಫಿಕ್ಸೆಡ್ ಚಾರ್ಜಸ್ ಆಗಿ ಯಾವುದೇ ಒಂದು ಯೂನಿಟ್ ಕರೆಂಟ್ ಅನ್ನು ಕೂಡ ಪರ್ಚೇಸ್ ಮಾಡದೆ ಕೊಡುವುದಕ್ಕೆ ಒಪ್ಪಿಕೊಂಡಿರುವುದು ಬಹಳ ಶೋಚನೀಯ. ಈ ವಿಚಾರವನ್ನು ಸರ್ಕಾರ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಮಹಾರಾಷ್ಟ್ರದಲ್ಲಿ ಎನ್ರಾನ್‌ನ ಬಗ್ಗೆ ಅಲ್ಲಿಯ ರಾಜ್ಯ ಸರ್ಕಾರ ಏನೊಂದು ನಿಲುವನ್ನು ತೆಗೆದುಕೊಂಡಿದೆಯೋ ಅದೇ ರೀತಿಯಲ್ಲಿ ತಾವೂ ಕೂಡ ಈ ಕ್ಷಣದಲ್ಲಿ ರಾಜ್ಯದ ಹಿತದೃಷ್ಟಿಯಿಂದ ಇವತ್ತು ಸುಪ್ರೀಂ ಕೋರ್ಟಿಗೆ ಇದಕ್ಕೆ ಸಂಬಂಧಪಟ್ಟಂತೆ ಬೈಂಡಿಂಗ್ ಯಾರ ಮೇಲೂ ಇಲ್ಲ ಎಂದು ರಿಟ್ ಹಾಕಬಹುದು. ಒಪ್ಪಂದದ ಪ್ರಕಾರ ಅದು ಟ್ರೈ ಪಾರ್ಟೈಟ್ ಅಗ್ರಿಮೆಂಟ್ ಆಗಿರಬೇಕಾಗಿತ್ತು. ಮಧ್ಯದಲ್ಲಿ ಬ್ಯಾಂಕ್ ಒಂದು ಇರಬೇಕಾಗಿತ್ತು. ಆದರೆ ಈಗ ಆಗಿರುವುದು ಕೇವಲ ಬೈ ಪಾರ್ಟೈಟ್ ಅಗ್ರಿಮೆಂಟ್ ಮಾತ್ರ. ಯಾವುದೇ ಮಧ್ಯದ ಬ್ಯಾಂಕ್ ಇಲ್ಲದಿರುವುದರಿಂದ ಎಸ್ಕ್ರೋ ಕವರೇಜ್ ಇದರಲ್ಲಿ ಕವರ್ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ರಾಜ್ಯದ ಹಿತದೃಷ್ಟಿಯಿಂದ ತಾವೇ ಇವತ್ತು ಸುಪ್ರೀಂ ಕೋರ್ಟ್‌ಗೆ ಹೋಗಿ ತಣ್ಣೀರ್ ಬಾವಿಗೆ ಕೊಡುವಂತಹ 256 ಕೋಟಿ ರೂಪಾಯಿಗಳ ಫಿಕ್ಸೆಡ್ ಚಾರ್ಜಸ್ ಏನಿದೆ ಅದನ್ನು ನಿಲ್ಲಿಸುವಂತಹ ಪ್ರಯತ್ನವನ್ನು ಮಾಡಿದರೆ ರಾಜ್ಯಕ್ಕೆ ದೊಡ್ಡ ಉಪಕಾರವನ್ನು ಮಾಡಿದಂತಾಗುತ್ತದೆ ಎನ್ನುವುದನ್ನು ಹೇಳಲಿಕ್ಕೆ ನಾನು ಇಚ್ಛೆ ಪಡುತ್ತಿದ್ದೇನೆ. ಮಾನ್ಯ ಹೆಗಡೆಯವರು ಆಗಲೇ ಒಂದು ಮಾತನ್ನು ಹೇಳಿದರು. 'ಯೂರೋ ಇಂಡಿಯಾ ಪವರ್ ಕೆನರಾ ಪ್ರೈವೇಟ್

ಲಿಮಿಟೆಡ್ ಯಾವುದು ಈ ಸಂಸ್ಥೆ? ಈ ಸಂಸ್ಥೆಗೆ ತಾವು ಗ್ಲೋಬಲ್ ಟೆಂಡರ್ ಅನ್ನು ಮಂಗಳೂರಿನಲ್ಲಿ ಕರೆದಿದ್ದಿರಿ. ಅದರ ಸಿಸ್ಟಮ್ ಏನು ಅಂದರೆ ಬಾರ್ಜ್ ಮೌಂಟೆಡ್. ಅದರ ಫ್ಯೂಯಲ್ ಏನು ಅಂದರೆ ನಾಫ್ತಾ ಫ್ಯೂಯಲ್. ಇದರ ಆಧಾರದ ಮೇಲೆ ತಾವು ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದಿರಿ. ಸರ್ಕಾರದ ನೀತಿಯ ಪ್ರಕಾರದಲ್ಲಿ ಬಾರ್ಜ್ ಮೌಂಟೆಡ್ ಬರಲಾರದು. ನಾಫ್ತಾ ಫ್ಯೂಯಲ್ ಯೂಸ್ ಮಾಡಬಾರದು ಎಂದು ಇದ್ದುದರಿಂದ ಅದು ಆಗುವುದಿಲ್ಲ ಎಂದು ತೀರ್ಮಾನವಾಯಿತು. ಅಲ್ಲಿಗೆ ಆ ಬಿಡ್ ಮುಗಿದ್ದಿತ್ತು. ಇವತ್ತು ಸರ್ಕಾರಿ ಆಜ್ಞೆ ಹೊರಡಿಸಿದ್ದಾರೆ. ಸರ್ಕಾರಿ ಆಜ್ಞೆ ಪ್ರಕಾರದಲ್ಲಿ ಈ ಬಿಡ್ ಅನ್ನು ಎಕ್ಸ್‌ಟೆಂಡೆಡ್ ಬಿಡ್ ರೂಟ್ ಪ್ರಾಜೆಕ್ಟ್ ಎಂದು ಕನ್‌ಸಿಡರ್ ಮಾಡಿ ಸರ್ಕಾರ ಆಜ್ಞೆ ಹೊರಡಿಸಿದೆ. ಹಾಗೆ ಹೊರಡಿಸುವ ಸಂದರ್ಭದಲ್ಲಿ ತಾವು ಒಂದು ಪತ್ರ ಬರೆದಿದ್ದೀರಿ. 19.2.2001ರಲ್ಲಿ ಒಂದು ಪತ್ರ ಬರೆದು ಹೇಳಿದ್ದೀರಿ. ಈ ಸಂಸ್ಥೆಗೆ ಕೇಂದ್ರ ಸರ್ಕಾರದಿಂದ ಟೆಕ್ನೋ ಎಕನಾಮಿಕ ಕ್ಲಿಯರೆನ್ಸ್ ಸಿಕ್ಕಿಲ್ಲ. ಟೆಕ್ನೋ ಎಕನಾಮಿಕ್ ಕ್ಲಿಯರೆನ್ಸ್ ಸಿಗದೆ ಇರುವ ಸಂಸ್ಥೆ ಕೂಡ ಇದರಲ್ಲಿ ಭಾಗವಹಿಸಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಲ್ಯಾಂಡ್ ಐಡೆಂಟಿಫೈ ಆಗಿಲ್ಲ. ಎಷ್ಟು ರೇಟ್‌ನಲ್ಲಿ ಕೊಡುತ್ತಾರೆಂದು ಫಿಕ್ಸ್ ಮಾಡಿಲ್ಲ. ಇದು ಯಾವುದೂ ಆಗದೆ ಕೆಪಿಟಿಸಿಎಲ್ ಅಧ್ಯಕ್ಷರು ಬರೆದಿದ್ದರೂ ಓವರ್‌ಲುಕ್ ಮಾಡಿ ಕೊಟ್ಟಿದ್ದಾರೆ.

ಶ್ರೀ ಎ. ರಾಮದಾಸ್ :— ತಮ್ಮ ಸರ್ಕಾರದಲ್ಲಿ ಆಗಿದ್ದು ತಮ್ಮ ಗಮನಕ್ಕೆ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಈ ಸರ್ಕಾರಿ ಆಜ್ಞೆ ಹೊರಡಿಸುವುದಕ್ಕೆ ಮುಂಚೆ ಕ್ಯಾಬಿನೆಟ್‌ನಲ್ಲಿ ನಿರ್ಧಾರ ಆದ ನಂತರ ಟ್ರಾನ್ಸ್‌ಫರೆನ್ಸಿ ಆಕ್ಟ್ ಎಲ್ಲಿ ಹೋಯಿತು? ಯಾವ ಟೆಂಡರ್ ಕರೆದಿದ್ದೀರಿ ಇದನ್ನು ತೆಗೆದುಕೊಂಡು ಹೋಗಿ ಲ್ಯಾಂಡ್ ಮೌಂಟೆಡ್ ಕೋಲ್ ಬೇಸ್ಡ್ ಇದನ್ನು ಮಂಡ್ಯದಲ್ಲಿ ಪ್ರಾರಂಭ ಮಾಡಬೇಕಾಗಿದ್ದ ಯೋಜನೆಯನ್ನು ಕೇವಲ ಟೆಂಡರ್ ಕರೆಯದೆ, ಯಾವ ರೇಟ್‌ಗೆ ಕರೆಂಟ್ ಕೊಂಡುಕೊಳ್ಳುತ್ತಾರೆ ಎಂದಾಗಲಿ, ಅವರು ಯಾವ ರೇಟ್‌ಗೆ ನಿಮಗೆ ಮಾರುತ್ತಾರೆಂದಾಗಲಿ ಪವರ್ ಪರ್ಚೇಸ್ ಅಗ್ರಿಮೆಂಟ್ ಆಗಿಲ್ಲ. ನಾಳೆ ದಿವಸ ಇದನ್ನು ಇಟ್ಟುಕೊಂಡು ನ್ಯಾಯಾಲಯಕ್ಕೆ ಹೋದರೆ ಪರಿಸ್ಥಿತಿ ಏನು? ನಾಗಾರ್ಜುನ ಕನ್‌ಸ್ಟ್ರಕ್ಷನ್ ಮತ್ತು ನಾಗಾರ್ಜುನ ಪವರ್ ಪ್ರಾಡೆಕ್ಟ್ಸ್‌ನವರ ಜೊತೆಯಲ್ಲಿ ಹಿಂದಿನ ಸರ್ಕಾರದವರು ಅಗ್ರಿಮೆಂಟ್ ಮಾಡಿಕೊಂಡಿರಲಿಲ್ಲ. ನೀವು ಮಾಡಿಕೊಂಡಿರಲಿಲ್ಲ. ಆದರೆ ಒಂದು ಕನ್ಸೆಂಟ್ ಲೆಟರ್ ಕೊಟ್ಟಿದ್ದೀರಿ. ನಿಮ್ಮ ಜೊತೆ ಮಾತುಕತೆ ಮಾಡುತ್ತೇವೆಂದು ನೀವು ಕನ್‌ಸೆಂಟ್ ಪತ್ರ ಕೊಟ್ಟಿದ್ದೀರಿ. ಅದರ ಆಧಾರದ ಮೇಲೆ ನಾವು ಈಗಾಗಲೇ ನೂರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೇವೆ. ತಣ್ಣೀರು ಬಾವಿ ಅವರ ಜೊತೆಯಲ್ಲಿ ಹೇಗೆ escrow ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ, ಹಾಗೆಯೇ ನಮ್ಮ

ಜೊತೆಯಲ್ಲೂ ಕೂಡ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಇವತ್ತು ಕೇಸ್ ನಡೆಯುತ್ತಿದೆ. ಕೇವಲ ಒಂದೇ ಒಂದು ಪತ್ರ ರಾಜ್ಯವನ್ನು ಯಾವ ರೀತಿ ದಿವಾಳಿಯಾಗುವ ಪರಿಸ್ಥಿತಿಗೆ ಕೊಂಡೊಯ್ಯುತ್ತಿದೆ ಎಂದು ಯೋಚನೆ ಮಾಡಿ ನೋಡಿ. ಯಾವ ಪುರುಷಾರ್ಥಕ್ಕೆ ಈ ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ. Without going for PPA? ರಾಜ್ಯ ಸರ್ಕಾರ ಏಕೆ ಈ ಅಗ್ರಿಮೆಂಟ್ ಮಾಡಿಕೊಂಡಿತು?

ಶ್ರೀ ಕಾಗೋಡು ತಿಮ್ಮಪ್ಪ :— ಸರ್ಕಾರ ಅವರ ಪರವಾಗಿ ತೀರ್ಮಾನ ಮಾಡಿಲ್ಲ. ಅದಕ್ಕೋಸ್ಕರ ಹೋಗಿದ್ದರು. ಎಂಬುದು ತಮಗೆ ಗೊತ್ತಿಲ್ಲಾ?

ಶ್ರೀ ಎ. ರಾಮದಾಸ್ :— ಅವರು ಸರ್ಕಾರಕ್ಕೆ ಬರುವಂತಹ ದಾರಿಯಲ್ಲಿ ಇಲ್ಲಿ ಏನು ಆಗಬಾರದು ಅದನ್ನು ನ್ಯಾಯಾಲಯದ ಮೂಲಕ ಹುಡುಕುವ ವ್ಯವಸ್ಥೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :— ಸರ್ಕಾರದ ಲೆವೆಲ್‌ನಲ್ಲಿ ಆಗಲಿಲ್ಲ, ಆದುದರಿಂದ ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿನಲ್ಲಿ ನಾವು ನಿಜ ಹೇಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಈ ವಿಷಯ ಕೋರ್ಟಿನಲ್ಲಿರುವುದರಿಂದ ಅದರ ಬಗ್ಗೆ ಚರ್ಚೆ ಮಾಡುವ ಹಾಗಿಲ್ಲ. ಹೇಳುವುದಕ್ಕೆ ಅನೇಕ ವಿಷಯಗಳಿವೆ. ಅದನ್ನು ಹೇಳಬಹುದಿತ್ತು. ಆದರೆ it becomes subjuidce.

ಶ್ರೀ ಕಾಗೋಡು ತಿಮ್ಮಪ್ಪ :— ಸರ್ಕಾರಕ್ಕೆ ತಮ್ಮ ಸಲಹೆ ಏನಿದೆ ಅದನ್ನು ಕೊಡಿ.

ಶ್ರೀ ಅರಗ ಜ್ಞಾನೇಂದ್ರ :— ಸರ್ಕಾರ ನಮ್ಮ ಸಲಹೆಯನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇದೆಯಾ? ಆ ಸ್ಥಿತಿಯನ್ನು ದಾಟಿದೆ ಎಂದು ರಾಮದಾಸ್‌ರವರು ಹೇಳುತ್ತಿದ್ದಾರೆ. ಕೇವಲ ನಮಗೆ ಅಲ್ಲ, ನಿಮಗೂ ಕೂಡ ಕೆಲವು ವಿಚಾರಗಳು ಗೊತ್ತಿಲ್ಲ.

ಶ್ರೀ ಎ. ರಾಮದಾಸ್ :— ನಿಮ್ಮ ಕಾರ್ಯಕ್ರಮಗಳ ಬಗ್ಗೆ ಬಹಳ ದೊಡ್ಡದಾಗಿ ಪತ್ರಿಕೆಯಲ್ಲಿ ಬರುತ್ತದೆ. ಬಹಳ ಸಂತೋಷ. ಯೂನಿವರ್ಸಲ್ ಮೀಟರಿಂಗ್ ಪ್ರೋಗ್ರಾಂ ಬಗ್ಗೆ ಪತ್ರಿಕೆಯಲ್ಲಿ ಬಂದಿತ್ತು. 850 ಕೋಟಿ ರೂಪಾಯಿ ವೆಚ್ಚದಲ್ಲಿ ಎಲ್ಲಾ ರೈತರ ಪಂಪ್‌ಸೆಟ್ಟ್‌ಗಳಿಗೆ ಎಲೆಕ್ಟ್ರಿಕಲ್ ಮೀಟರ್ ಹಾಕುತ್ತೇವೆ ಎಂದು ಘೋಷಣೆ ಮಾಡಿದ್ದೀರಿ ಸಂತೋಷ. ಇದನ್ನು ನಾವು ಯಾರೂ ಬೇಡವೆಂದು ಹೇಳಲಿಲ್ಲ. ಆದರೆ ಈ ಸಂದರ್ಭ ಬಂದಾಗ ಕಳೆದ ಬಾರಿ 2000ನೇ ಇಸ್ವಿಯಲ್ಲಿ 20 ಲಕ್ಷ ರೂಪಾಯಿಗಳ ಟೆಂಡರ್ ಕರೆದಿದ್ದಿರಿ, ಆ ಟೆಂಡರ್‌ಗೆ ಟಿಟಿಎಲ್ ಸಂಸ್ಥೆ ದೆಹಲಿಯವರು ಬಂದು ಒಂದು ಟೆಂಡರ್ ಹಾಕಿದ್ದರು. ಆ ಟೆಂಡರ್‌ಗೆ ಟೆಕ್ನಿಕಲ್ ಅಕ್ಸೆಪ್ಟೆನ್ಸ್ ಸಿಗಲಿಲ್ಲವೆಂದು ಗೊತ್ತಾದಾಗ ಆ ಸಂಸ್ಥೆಯ ಇಬ್ಬರು ನಿರ್ದೇಶಕರು ಕೆಪಿಟಿಸಿಎಲ್ ಅಧಿಕಾರಿಯ ಮನೆಗೆ ಹೋಗಿ ಟಿಟಿಎಲ್

ಸಂಸ್ಥೆಯ ಹೊಸ ಡೈರಿ ಹಾಗೂ 25 ಗ್ರಾಮ್ ಚಿನ್ನದ ಐದು ನಾಣ್ಯಗಳು ತೆಗೆದುಕೊಂಡು ಹೋಗಿ ಜಯನಗರದಲ್ಲಿರುವ ಅವರ ಮನೆಗೆ ಕೊಟ್ಟರು. ಆ ವಿಚಾರದಲ್ಲಿ ಕೆಪಿಟಿಸಿಎಲ್ ಅಧಿಕಾರಿ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ತಕ್ಷಣ ಜಯನಗರದ ಪೋಲಿಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಟ್ಟು ಅರೆಸ್ಟ್ ಮಾಡಿ ಸೀಜ್ ಮಾಡಲಾಯಿತು. ದೆಹಲಿಯ ಟಿಟಿಎಲ್ ಸಂಸ್ಥೆ.

ಶ್ರೀ ಕಾಗೋಡು ತಿಮ್ಮಪ್ಪ :— ದೆಹಲಿಯ ಸಂಸ್ಥೆ ಎಂದು ಹೇಳಿ.

ಶ್ರೀ ಎ. ರಾಮದಾಸ್ :— ದೆಹಲಿಯ ಸಂಸ್ಥೆ ನಮ್ಮ ರಾಜ್ಯಕ್ಕೆ ಬಂದಿತ್ತು. Towers and Transformers Limited ಎಂಬ ಈ ಸಂಸ್ಥೆಯ ಮೇಲೆ ಕೇಸ್ ಹಾಕಲಾಯಿ. 31ನೇ ಡಿಸೆಂಬರ್ 200ನೇ ಇಸವಿಯಲ್ಲಿ ಅವರ ಮೇಲೆ ಕೇಸ್ ಹಾಕಿ 2001 ಜನವರಿ 2ನೇ ತಾರೀಖಿನಿಂದ ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಡಲಾಯಿತು. ಇದು ಪತ್ರಿಕೆಯಲ್ಲು ಕೂಡ ಬಂದಿತ್ತು. ಆ ಸಂಸ್ಥೆಗೆ ಸೇರಿದ ಗೋಲ್ಡ್ ಕಾಯಿನ್ ಇದೆ. ಎಲ್ಲಾ ಸಾಕ್ಷಿ ಆಧಾರಗಳಿದ್ದರೂ ಕೂಡ ಪೋಲೀಸ್ ಅಧಿಕಾರಿಗಳು ಅವರ ಮೇಲೆ 'ಬಿ' ರಿಪೋರ್ಟ್ ಕೊಟ್ಟು ಅವರನ್ನು ಬ್ಲಾಕ್ ಲೀಸ್ಟಿನಲ್ಲಿ ಇದ್ದವರಿಗೆ ವೈಟ್ ಲೀಸ್ಟ್‌ನಲ್ಲಿ ತಂದು ಬಳುವಳಿಯನ್ನು ಕೊಟ್ಟಿದ್ದೀರಿ. 20ಲಕ್ಷ ರೂಪಾಯಿಯ ಟೆಂಡರ್ ಅವರು ಕೇಳಿದ್ದರು. ಈಗ 28 ಕೋಟಿ ರೂಪಾಯಿಗಳ ಟೆಂಡರ್ ಈಗಾಗಲೇ ಆರ್ಡರ್ ಪ್ಲೇಸ್ ಮಾಡಿ ಆಗಿದೆ. ಇದನ್ನು ಕೊಟ್ಟು ಒಂದು ತಿಂಗಳಾಯಿತು. 28 ಕೋಟಿ ರೂಪಾಯಿಗಳ ಆರ್ಡರ್ ಅವರಿಗೆ ಕೊಟ್ಟಿದ್ದು, ಬ್ಲಾಕ್ ಲಿಸ್ಟ್‌ನಲ್ಲಿ ಇದ್ದವರು ವೈಟ್ ಲಿಸ್ಟ್ ಹೇಗೆ ಬಂದರು? ಪೋಲೀಸ್ ಸ್ಟೇಷನ್‌ನಲ್ಲಿ ಸೀಜ್ ಆದ ಗೋಲ್ಡ್ ಕಾಯಿನ್ ಏನಾದವೂ? ಕೆಪಿಟಿಸಿಎಲ್ ಅಧಿಕಾರಿಗಳು ಹೋಗಿ ಕಂಪ್ಲೇಟ್ ಲಾಡ್ಜ್ ಮಾಡಿದ್ದಾರೆ, ಆ ಕೇಸ್ ಪರಿಸ್ಥಿತಿ ಏನು ರಾಜ್ಯ ಸರ್ಕಾರದಿಂದ ಏಕೆ ಹೀಗಾಯಿತು? ಎಂದು ಇದರ ಬಗ್ಗೆ ಸನ್ಮಾನ್ಯ ಸಚಿವರು ಚಿಂತನ ಮಂಥನ ಮಾಡಿ ರಾಜ್ಯದ ಹಿತವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬುದನ್ನು ಹೇಳಬೇಕು. ಸಿಎಜಿ ರಿಪೋರ್ಟಿಗೆ ಮಂತ್ರಿಗಳು ಒಂದು ಸಾರಿ ಕಣ್ಣು ಹಾಯಿಸಬೇಕು. ಇದು ಯಾರಿಗೂ ಶೋಭೆ ತರುವ ವಿಚಾರ ಇಲ್ಲ. ತಮ್ಮಲ್ಲಿರುವ ರಿಪೋರ್ಟ್ ಪೇಜ್ ನಂ.78-79ರಲ್ಲಿ ಕೊಜೆಂಟ್ರಿಕ್ಸ್ ಸಂಸ್ಥೆ ಇಲ್ಲಿ ಬರುತ್ತದೆ ಎಂದು ಎಲ್ಲಾ ಆಲೋಚನೆಗಳನ್ನು ಮಾಡಿ ಶಿವಮೊಗ್ಗ ಮತ್ತು ವರಾಹಿ ಇವೆರಡರ ಮಧ್ಯದಲ್ಲಿ 690 ಮೆಗಾವ್ಯಾಟ್ ವಿದ್ಯುತ್ ಟ್ರಾನ್ಸ್‌ಮಿಷನ್‌ಗೋಸ್ಕರ ಈಗಾಗಲೇ ಲೈನ್ ಹಾಕಿದ್ದೀರಿ. ಆ ಪವರ್ ಪ್ರಾಜೆಕ್ಟ್ ಬರಲಿಲ್ಲ. ಹಣ ಏನಾಗಬೇಕು? ಇದರಿಂದ ಕೆಪಿಟಿಸಿಎಲ್‌ಗೆ ಸುಮಾರು 24-25 ಕೋಟಿ ರೂಪಾಯಿಗಳ ನಷ್ಟವಾಗಿದೆ. ಸಿಎಜಿ ರಿಪೋರ್ಟ್ ಪ್ರಕಾರ ಸುಮಾರು 650 ಕೋಟಿ ರೂಪಾಯಿಗಳ ನಷ್ಟ ಕೆಪಿಟಿಸಿಎಲ್‌ಗೆ ಆಗಿದೆ 650 ಕೋಟಿ ರೂಪಾಯಿಗಳ ನಷ್ಟವಾಗುವ ಹಾಗೆ ಮಾಡಿದ ಅಧಿಕಾರಿಗಳ

ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆಕ್ಷನ್ ರಿಪೋರ್ಟ್ ಏನು ಪ್ಲೇಸ್ ಮಾಡಿದ್ದಾರೆ, ಅದರ ಜೊತೆಯಲ್ಲಿ ಆಗಿರುವಂತಹ ಲ್ಯಾಪ್ಸಸ್ ಮೇಲೆ ಆಕ್ಷನ್ ಟೇಕನ್ ರಿಪೋರ್ಟ್ ಇಡುವ ಕೆಲಸ ಮಾಡಿದ್ದೇ ಆದರೆ ನಿಮ್ಮ ಟ್ರಾನ್ಸ್‌ಪರೆನ್ಸಿ ಸರ್ಕಾರವನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಬಹಳ ಒಳ್ಳೆಯ ಕೆಲಸ ಮಾಡುವ ಕೆಪಿಸಿ ವರದಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ರಾಯಚೂರು ಥರ್ಮಲ್ ಪವರ್ ಪ್ರಾಜೆಕ್ಟನಲ್ಲಿ ಕೇವಲ ಅಧಿಕಾರಿಗಳ ನಿರ್ಲಕ್ಷದಿಂದ ಎರಡು ಗ್ರಿಡ್ ಹಾಳಾಯಿತು. ಇದರಿಂದ ಸುಮಾರು 484.15 ಕೋಟಿ ರೂಪಾಯಿಗಳ ನಷ್ಟ ಸಂಭವಿಸಿತು. ಸಿ.ಎ.ಜಿ ರಿಪೋರ್ಟ್‌ನಲ್ಲಿ ಕೆ.ಪಿ.ಸಿ ಅಕ್ರಮಗಳ ಬಗ್ಗೆ ಹೇಳುತ್ತಾ ಸುಮಾರು 867.57 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸಿದೆಯೆಂದು ಹೇಳಲಾಗಿದೆ. ಇದು ಆಡಿಟ್ ರಿಪೋರ್ಟ್‌ನಲ್ಲಿದೆ. ನೀವು ವಿಶ್ವ ಬ್ಯಾಂಕ್‌ನಿಂದ 13500 ಕೋಟಿ ರೂಪಾಯಿಗಳ ಸಾಲವನ್ನು ಪಡೆಯುವುದಕ್ಕೋಸ್ಕರ ರಾಜ್ಯದಲ್ಲಿರುವ 1.25 ಕೋಟಿ ಗ್ರಾಹಕರ ಮೇಲೆ ಹೊರೆಯನ್ನು ಹಾಕಬೇಡಿ. ನಮ್ಮ ರಾಜ್ಯವನ್ನು ಒರಿಸ್ಸಾ ರಾಜ್ಯವನ್ನಾಗಿ ಮಾಡಬೇಡಿ. ಅಲ್ಲಿರುವ ಡಿಸ್ಟ್ರಿಬ್ಯೂಷನ್ ಸಂಸ್ಥೆಗಳು ಕಳೆದ ಒಂದೂವರೆ ತಿಂಗಳಿನಿಂದ ಸಂಬಳವನ್ನು ನೌಕರರಿಗೆ ಕೊಡಲಾಗದ ಪರಿಸ್ಥಿತಿಯಲ್ಲಿವೆ. ಸಾಲದ ಹೊರೆಯನ್ನು ಹೆಚ್ಚು ಮಾಡುವುದನ್ನು ಬಿಟ್ಟು ಪ್ರಮುಖವಾಗಿ ಪ್ರೊಫೆಷನಲ್ ಮ್ಯಾನೇಜ್‌ಮೆಂಟ್‌ಗೆ ಹೆಚ್ಚು ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಪರಿಣಿತರಿರುವಂಥ ಸಮಿತಿಯನ್ನು ಮಾಡುತ್ತೇವೆಂದು ಹೇಳಿದಾಗ ನಾವು ಅದನ್ನು ಸ್ವಾಗತ ಮಾಡಿದ್ದೆವು. ಟೆಕ್ನೋಕ್ರಾಟ್ಸ್ ಇರುವಂಥ ಒಂದು ಒಳ್ಳೆಯ ಬೋರ್ಡ್ ನಮ್ಮ ರಾಜ್ಯದಲ್ಲಿ ಬರಲಿ ಎನ್ನುವ ಕಾರಣಕ್ಕೆ ನಾವು ಸ್ವಾಗತ ಮಾಡಿದೆವು. ಆದರೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿರುವಂಥ ಯಾರೋ ನಾಲ್ಕು ಜನರನ್ನು ಇಲ್ಲಿಗೆ ಕರೆದುಕೊಂಡು ಬಂದು ಅವರಿಗೆ ತಲಾ 50 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟು ಕೇವಲ ನಾಲ್ಕು ಪುಟದ ವರದಿಯನ್ನು ತೆಗೆದುಕೊಳ್ಳುವ ಬದಲು ನಮ್ಮಲ್ಲಿರುವಂಥ ಪರಿಣಿತರ ಬಗ್ಗೆ ಚಿಂತನೆ ಮಾಡಬಹುದಿತ್ತಲ್ಲಾ. ಟೆಕ್ನೋಕ್ರಾಟ್ಸ್ ಸಮಿತಿ ಏನಾಯಿತು? ಇನ್ನು ಪೌವರ್ ಪರ್ಚೇಸ್ ಕಾಸ್ಟನ್ನು ಕಡಿಮೆ ಮಾಡಲು ಪಣವನ್ನು ತೊಡುತ್ತೇವೆನ್ನುವ ಮಾತನ್ನು ಹೇಳಿದಿರಿ. ಇದಕ್ಕಾಗಿ ದೀಪಕ್ ಪರೇಖ್ ಸಮಿತಿಯನ್ನು ಮಾಡಿದಾಗ ನಾವು ತುಂಬಾ ಸಂತೋಷಪಟ್ಟೆವು. ಆ ದೀಪಕ್ ಪರೇಖ್ ಕಮಿಟಿ ವರದಿ ಏನಾಯಿತು? ಅವರು ಲೀಸ್ಟ್ ಕಾಸ್ಟ್ ಬೇಸಿಸ್ ಮೇಲೆ ಪವರ್ ಪರ್ಚೇಸ್ ಮಾಡಬೇಕು ಎಂದು ಹೇಳಿದರು. ಹೀಗಿರುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಭಾಷಣ ಮಾಡಿರುವುದನ್ನು ನಾನು ಓದಿದೆ. ಸುಮಾರು 8 ಸಾವಿರ ಕೋಟಿ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ ಒಂದು ಸೆಂಟ್ರಲ್ ಗ್ರೀಡ್ ಇರಬೇಕು ಎನ್ನುವ ಅಡ್ವೈಸನ್ನು ಕೇಂದ್ರ ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಭಾಷಣದಲ್ಲಿ ಮಾಡಿದ್ದಾರೆ. ಆದರೆ ನೀವೇನು ಮಾಡುವುದಕ್ಕೆ ಹೋರಟಿದ್ದೀರಿ? ನಮ್ಮಲ್ಲಿರುವಂಥ ಗ್ರಿಡ್ ಒಡೆದು ಛಿದ್ರ

ಮಾಡಿ ವಿಶ್ವ ಬ್ಯಾಂಕ್ ನಾರ್ಮ್ಸ್ ಪ್ರಕಾರ ಐದು ಗ್ರೀಡ್‌ಗಳನ್ನು ಕಂಪನಿಗಳಾಗಿ ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಇದು ಯಾರ ಪುರುಷಾರ್ಥಕ್ಕಾಗಿ? ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತಲ್ಲವೆ? ಇದರ ಜೊತೆಗೆ ಮಿನಿ ಹೈಡಲ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡುವ ಮೂಲಕ ಇವೊತ್ತು ವಿಶೇಷವಾಗಿ ನಮ್ಮಲ್ಲಿರುವಂಥ ಹೈಡಲ್ ಪಾವರ್‌ನ್ನು ಟ್ಯಾಪ್ ಮಾಡುವಂಥ ಕೆಲಸ ನಮ್ಮಲ್ಲಿ ಆಗಬೇಕು. ನಾನ್-ಕನ್ವೆನ್‌ಶನಲ್ ಎನರ್ಜಿಗೆ ಹೆಚ್ಚಿನ ಒತ್ತನ್ನು ಕೊಡುವ ಕೆಲಸವಾಗಬಬೇಕು. ಇನ್ನು ವಿದ್ಯುತ್ ಕ್ಷೇತ್ರದ ಸಮಸ್ಯೆಗಳು ದಿನೇ ದಿನೇ ಉಲ್ಬಣವಾಗುತ್ತಿರುವ ಸಂದರ್ಭಗಳು ಹೆಚ್ಚಾಗುತ್ತಿವೆ. ರಾಜ್ಯದ ರೈತರಿಗೆ ಹಾಗೂ ಸಣ್ಣ ಕೈಗಾರಿಕೆಗಳವರೆಗೆ ವಿದ್ಯುತ್ ಸರಬರಾಜು ವಿಷಯದಲ್ಲಿ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಹೇಳಿದ ಈ ಸರ್ಕಾರ ಆ ಕೆಲಸವನ್ನು ಮಾಡಿಲ್ಲ. ಇನ್ನು ನೀವೇ ಕೊಟ್ಟಂಥ ಮಾಹಿತಿಯಲ್ಲಿ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್‌ನಲ್ಲಿ ನಾನು ಒಳ್ಳೆಯ ರಿಫಾರ್ಮ್ಸ್‌ಗಳನ್ನು ಸರ್ಕಾರ ಮಾಡುತ್ತದೆ ಎಂದು ನಿರೀಕ್ಷೆ ಮಾಡಿದ್ದೆ. ಆದರೆ ನೀವು ಒಂದೇ ಒಂದು ಒಳ್ಳೆಯ ಕೆಲಸ ಮಾಡಿರುವುದೇನೆಂದರೆ ಕೆ.ಇ.ಆರ್.ಸಿ.ಯವರು ಕೊಟ್ಟಂಥ ವರದಿಯಲ್ಲಿ ಪಾವರ್ ಟ್ಯಾರಿಫ್ ಒಂದನ್ನು ಬಿಟ್ಟು ಉಳಿಕೆ ಎಲ್ಲಾ ರೀತಿಯ ಜನ ಸಾಮಾನ್ಯರಿಗೆ ಕೊಡಬಹುದಾದ ರಿಫಾರ್ಮ್ಸ್ ಏನಿದೆಯೋ ಅವಸ್ಸರ ವಿರುದ್ಧವಾಗಿ ರಾಜ್ಯ ಸರ್ಕಾರವೇ ಕೋರ್ಟ್‌ಗೆ ಹೋಗಿ ಸ್ಟೇ ತರುವಂಥ ಕೆಲಸವನ್ನು ಏನು ಮಾಡಿದೆಯೋ ಅದೇ ಇವರ ದೊಡ್ಡ ಸಾಧನೆಯಾಗಿದೆ. ಆದರೆ ನಾನು ರಾಜ್ಯದ ವಿದ್ಯುತ್ ಗ್ರಾಹಕನಾಗಿ ಕೋರ್ಟ್‌ಗೆ ಅರ್ಜಿ ಹಾಕಿ ರಿಫಾರ್ಮ್ ಮೇಲೆ ಇರುವ ಸ್ಟೇ ತೆಗೆದುಹಾಕಿ ಅಥವಾ ಪಾವರ್ ಟ್ಯಾರಿಫ್ ಮೇಲೆ ಸ್ಟೇ ಕೊಡಿ ಎಂದು ಕೇಳಿಕೊಂಡೆ. ನ್ಯಾಯಾಲಯದಲ್ಲಿ ಕಳೆದ ವಾರ ಕಡೆಗಾದರೂ ಬುದ್ಧಿ ಬಂತು ಎಂದು ತಿಳಿದು ರಾಜ್ಯ ಸರ್ಕಾರ ಆ ಕೇಸ್ ವಿತ್‌ಡ್ರಾ ಮಾಡಿಕೊಂಡಿದೆ. ಸಂತೋಷ. ಇನ್ನು ಮುಂದಾದರೂ ಅಂಥ ರಿಫಾರ್ಮ್ಸ್ ತರುವಂಥ ಕೆಲಸಗಳಿಗೆ ತಡೆಯಾಜ್ಞೆಯನ್ನು ತರುವಂಥ ಕೆಲಸವನ್ನು ಮಾಡಬೇಡಿ. ಗ್ರಾಹಕರಿಗೆ ರಿಫಾರ್ಮ್ಸ್ ಕೊಡುವ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ನೋಡಿದಾಗ ಕಳೆದ ವರ್ಷಕ್ಕೆ ಇದನ್ನು ಹೋಲಿಕೆ ಮಾಡಿ ನೋಡುವುದಾದರೆ ಕಳೆದ ವರ್ಷ ಟೋಟಲ್ ಇನ್‌ಕಮ್ 5685 ಕೋಟಿ ರೂ ಇದ್ದರೆ ಈ ಬಾರಿ ಅದು 6701.66 ರೋಟಿ ರೂಪಾಯಿಗಳಾಗಿದೆ. ಇನ್ನು ಬಡ್ಡಿ ಬಗ್ಗೆ ಕಳೆದ ವರ್ಷಕ್ಕೆ ಹೋಲಿಕೆ ಮಾಡಿ ನೋಡಿದರೆ 115 ಕೋಟಿ ರೂಪಾಯಿಗಳನ್ನು ಹೆಚ್ಚು ಕೊಡುತ್ತಿದ್ದೇವೆ. ಇದು ಈಗಿರುವ ಸಾಲವನ್ನು ತೀರಿಸುವದಕ್ಕಾಗಿ ಕೊಡುತ್ತಿರುವುದು. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ ಮತ್ತೊಮ್ಮೆ 13500 ಕೋಟಿ ರೂಪಾಯಿಗಳ ಸಾಲವನ್ನು ಈ ರಾಜ್ಯ ಜನರ ಮೇಲೆ ಹೇರಬೇಡಿ ಎನ್ನುವುದಕ್ಕಾಗಿ ಹೇಳುತ್ತಿದ್ದೇನೆ. ಇನ್ನು ಎಕ್ಸ್‌ಪೆಂಡೀಚರ್ 6687.47 ಕೋಟಿ ರೂಪಾಯಿಗಳಾದರೆ ರಾಜ್ಯ ಸರ್ಕಾರದಿಂದ 2151.88 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು

ನಿರೀಕ್ಷೆ ಮಾಡಲಾಗುತ್ತಿದೆ. ಆದರೆ ಪತ್ರಿಕೆಗಳಲ್ಲಿ ತಿಳಿಸಿರುವಂತೆ ಇನ್ನು ಮುಂದೆ ಸಬ್ಸಿಡಿಯನ್ನು ಕಡಿಮೆ ಮಾಡಲಾಗುವುದು ಎಂದು ಬಂದಿದೆ. ಇದರ ಬಗ್ಗೆ ತಾವು ಹೇಳಬೇಕು. ಸಬ್ಸಿಡಿ ನೀವು ಕೊಡದಿದ್ದರೆ ಕೆ.ಪಿ.ಟಿ.ಸಿ.ಎಲ್.ನ ಪರಿಸ್ಥಿತಿ ಏನು? ನೀವು ಮೊದಲು ಆಗುವಂಥ ಬಡ್ಡಿಯನ್ನು ನಿಲ್ಲಿಸಬೇಕು, ವಿದ್ಯುತ್ ಥೆಫ್ಟನ್ನು ನಿಲ್ಲಿಸಬೇಕು. ಟ್ರಾನ್ಸ್‌ಮಿಷನ್-ಡಿಸ್ಟ್ರಿಬ್ಯೂಷನ್‌ನಲ್ಲಿ ಲಾಸ್ ಅನ್ನು ನಿಲ್ಲಿಸಬೇಕು. ಇದನ್ನು ಮಾಡಿದ ಮೇಲೆ ರಾಜ್ಯ ಸರ್ಕಾರ ಸಬ್ಸಿಡಿ ಕೊಡುವುದನ್ನು ಕಡಿಮೆ ಮಾಡಬೇಕು. ನಾನು ಕಳೆದ ಅಧಿವೇಶನದಲ್ಲಿ ಭಾಷಣ ಮಾಡಿದ 24 ಗಂಟೆಯೊಳಗಾಗಿ 9 ಜನರನ್ನು ಅರೆಸ್ಟ್ ಮಾಡಿದಿರಿ. ಆದರೇ ಕೇವಲ ಲೋಯರ್ ಆಫಿಸರ್‌ಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಹೊರಟಿದ್ದೀರಿ. ಆದರೆ ಅಲ್ಲಿದ್ದಂಥ ಡೈರೆಕ್ಟರ್‌ಗೆ ಪ್ರಮೋಷನ್ ಕೊಟ್ಟ ಎಂ.ಡಿ. ಎಂದು ಮಾಡಿ ಪೋಸ್ಟಿಂಗ್ಸ್ ಮಾಡಿದ್ದಾರೆ. ದಯಮಾಡಿ ಇಲ್ಲಿ ಯಾವುದೇ ರೀತಿಯಾದ ಮುಲಾಜಿಗೂ ಒಳಪಡದೆ ಇಡೀ ರಾಜ್ಯದ ಹಿತದೃಷ್ಟಿಯನ್ನಿಟ್ಟುಕೊಂಡು ಈ ಒಂದು ಇಲಾಖೆಯನ್ನು ಕಾಪಾಡುವಂಥ ಕೆಲಸ ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ. ಆ ದೃಷ್ಟಿಯಲ್ಲಿ ಇಡೀ ರಾಜ್ಯ ಈ ಒಂದು ಇಲಾಖೆಯಲ್ಲಿ ಹೇಗೆ ಪರಿವರ್ತನೆಯಾಗುತ್ತಿದೆ ಎಂಬುದನ್ನು ನೋಡುತ್ತಿದೆ ಎನ್ನುವಂಥ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ನಾಳೆ ಬೆಳಿಗ್ಗೆ 10.00 ಗಂಟೆಗೆ ಸದನ ಸಮಾವೇಶಗೊಳ್ಳುತ್ತದೆ.

(ಸದನವು ಸಾಯಂಕಾಲ 4.46 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: 27-7-2001ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.